### ಅಧ್ಯಾಯ 15

# ಅಬ್ರಹಾಮನ ಸಂಗಡ ದೇವರು ಭೂಮಿಯ ಒಡಂಬಡಿಕೆಯನ್ನು ಮಾಡಿಕೊಂಡಿದ್ದು

ಅಬ್ರಹಾಮನು ಮೂಡಣದ ರಾಜರ ಮೇಲೆ ಜಯವನ್ನು ಗಳಿಸಿದ್ದರ ಮತ್ತು ಸೊದೋಮಿನ ರಾಜ ಹಾಗೂ ಯೆರೂಸಲೇಮಿನ ರಾಜವಂಶದ ಯಾಜಕನಾದ ಮೆಲ್ಕೀಚೆದೆಕನನ್ನು ಭೇಟಿ ಮಾಡಿದ್ದರ ನಡುವೆ ಎಷ್ಟು ಕಾಲವು ಗತಿಸಿತ್ತು ಎಂಬುದು ಅನಿಶ್ಚಿತವಾಗಿರುತ್ತದೆ. ಮಧ್ಯಂತರ ಕಾಲವು ಎಷ್ಟೇ ಇದ್ದರೂ ಸರಿಯೇ, 13:14–17ರ ಸಮಯದಿಂದಲೂ ಮೌನವಾಗಿದ್ದ ಸ್ವರವು ಈಗ ಪುನಃ ಮೂಲಪಿತೃವಿನ ಸಂಗಡ ಮಾತಾಡಿತ್ತು.

## ದೈವಿಕ ವಾಗ್ದಾನಗಳು ಮತ್ತು ನಂಬಿಕೆಯ ಪ್ರತಿಕ್ರಿಯೆಗಳು (15:1-6)

**[1]ಈ ಸಂಗತಿಗಳು ನಡೆದ ಮೇಲೆ ಅಬ್ರಾಮನಿಗೆ ದರ್ಶನದಲ್ಲಿ ಯೆಹೋವನ**
**ವಾಕ್ಯವುಂಟಾಯಿತು; ಏನಂದರೆ - ಅಬ್ರಾಮನೇ, ಭಯಪಡಬೇಡ, ನಾನು ನಿನಗೆ**
**ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟದೆ ಎಂಬುದೇ. [2]ಅದಕ್ಕೆ**
**ಅಬ್ರಾಮನು - ಕರ್ತನಾದ ಯೆಹೋವನೇ, ನನಗೆ ಏನು ಕೊಟ್ಟರೇನು? ನಾನು**
**ಸಂತಾನವಿಲ್ಲದವನಾಗಿ ಹೋಗುವೆನಾದದರಿಂದ ನನ್ನ ಆಸ್ತಿಯೆಲ್ಲಾ ದಮಸ್ಕದ ಎಲೀಯೆಜರನ**
**ಪಾಲಾಗುವದಲ್ಲಾ ಅಂದನು. [3]ತಿರಿಗಿ ಅಬ್ರಾಮನು - ನೀನು ನನಗೆ ಸಂತಾನ**
**ಕೊಡಲಿಲ್ಲವಾದ್ದರಿಂದ ನನ್ನ ಮನೆಯಲ್ಲಿ ಹುಟ್ಟಿದವನೇ ನನಗೆ ಬಾಧ್ಯಸ್ಥನಾಗಬೇಕಾಯಿತು ಎಂದು**
**ಹೇಳಲು ಯೆಹೋವನು ಅವನ ಸಂಗಡ ಮಾತಾಡಿ - [4]ಇವನು ನಿನಗೆ ಬಾಧ್ಯಸ್ಥನಾಗುವದಿಲ್ಲ;**
**ನಿನ್ನ ಹೊಟ್ಟೆಯಲ್ಲೇ ಹುಟ್ಟುವವನು ನಿನಗೆ ಬಾಧ್ಯಸ್ಥನಾಗುವನು ಎಂದು ಹೇಳಿ [5]ಅವನನ್ನು**
**ಹೊರಗೆ ಕರತಂದು - ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ**
**ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವದು ಅಂದನು. [6]ಅಬ್ರಾಮನು ಯೆಹೋವನನ್ನು**
**ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು.**

**ವಚನ 1. ಅಬ್ರಾಮನಿಗೆ ಯೆಹೋವನ ವಾಕ್ಯವುಂಟಾಯಿತು** ಎಂಬುದು ಒಬ್ಬ ಪ್ರವಾದಿಗೆ ಒಂದು ಸಂದೇಶ ಅಥವಾ ಪ್ರವಾದನೆಯನ್ನು ಪರಿಚಯಿಸುವದಕ್ಕೆ ಮುನ್ನ ಬಳಸುವ ವೈಶಿಷ್ಟ್ಯವಾದ ಸೂತ್ರವಾಗಿರುತ್ತದೆ (ಯೆರೆಮೀಯ 1:2; ಯೆಹೆಜ್ಕೇಲ 1:3; ಹೋಶೇಯ 1:1;

ಯೋನ 1:1). ದೇವರು ಮೂಲಪಿತೃಗಳ ಸಂಗಡ, ಮಾತ್ರವಲ್ಲದೆ ಅವರ ವಿರೋಧಿಗಳ ಸಂಗಡ ಮಾತಾಡುವದಕ್ಕಾಗಿ ಸಹ ಕೆಲವು ಸಾರಿ ಒಂದು **ದರ್ಶನ** ಅಥವಾ ಕನಸೊಂದನ್ನು ಬಳಸುತ್ತಿದ್ದನು (20:3, 6; 28:12; 31:10, 11, 24; 37:5-10; 46:2).

ದೇವರು ಅಬ್ರಹಾಮನನ್ನು 20:7ರಲ್ಲಿ "ಪ್ರವಾದಿ" ಎಂದು ಕರೆದನು. ಈ ಪದವು ಸತತವಾಗಿ ಅಪಾರ್ಥಮಾಡಿಕೊಳ್ಳಲ್ಪಟ್ಟಿದ್ದು, ಇದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದು ಅಗತ್ಯ. "ಪ್ರವಾದಿ" ಎಂಬುದಕ್ಕೆ ಇರುವ ಸಾಮಾನ್ಯವಾದ ಇಬ್ರಿಯ ಪದವು נָבִיא *(ನಬಿ)*, ಇದರರ್ಥವು "ವಕ್ತಾರನು,"[1] ಅಂದರೆ, ಮತ್ತೊಬ್ಬನ ಪರವಾಗಿ ಮಾತಾಡುವವನು. ಇದಕ್ಕೊಂದು ದೃಷ್ಟಾಂತವು ಐಗುಪ್ತಕ್ಕೆ ಹಿಂದಿರುಗುವಂತೆ ದೇವರು ಮೋಶೆಯನ್ನು ಕರೆದದ್ದರಲ್ಲಿ ಕಾಣಿಸುತ್ತದೆ. ಮೋಶೆಯು ಈ ದೈವಿಕ ನಿಯೋಗದಿಂದ ಜಾರಿಕೊಳ್ಳುವದಕ್ಕೋಸ್ಕರ ನೆಪಗಳನ್ನು - ಪ್ರಮುಖವಾಗಿ ತನಗೆ ಮಾತಾಡುವ ಸಾಮರ್ಥ್ಯವು ಇರುವದಿಲ್ಲ ಎಂಬುದರ ಕುರಿತು - ಹೇಳಿದನು. ಹೇಗೂ, ಯೆಹೋವನು ಮೋಶೆಯು ಹಿಂದೇಟು ಹಾಕುತ್ತಿರುವದನ್ನು ಕಂಡು ವಿಚಲಿತನಾಗಲಿಲ್ಲ. ಎರಡು ಪ್ರತ್ಯೇಕ ಸಂದರ್ಭಗಳಲ್ಲಿ ಆತನು ಮೋಶೆಗೆ ತನ್ನ ಮಾತುಗಳನ್ನು ನೀಡುವದಾಗಿ ವಾಗ್ದಾನ ಮಾಡಿದನು, ಈತನು ಆ ಮಾತುಗಳನ್ನು ಆರೋನನಿಗೆ ತಿಳಿಸಬೇಕಾಗಿತ್ತು; ಆ ಬಳಿಕ ಅವನ ಅಣ್ಣನು ಜನರ ಸಂಗಡ ಮತ್ತು ಫರೋಹನ ಸಂಗಡ ಮಾತಾಡುವ ವೇಳೆ ಆತನ "ಬಾಯಂತಿರುವನು" ಅಥವಾ "ಪ್ರವಾದಿಯಾಗಿರುವನು" (ವಿಮೋಚನಕಾಂಡ 4:15, 16; 7:1, 2).

ಹಾಗಾದರೆ, ಒಬ್ಬ ಬೈಬಲಿನ ಪ್ರವಾದಿಯು ಯಾರೆಂದರೆ ವಾಕ್ಯವನ್ನು "ಹೇಳುವವನು" ಅಥವಾ ಬೋಧಿಸುವವನು, ಅವಶ್ಯಕವಾಗಿ ಭವಿಷ್ಯದ ಘಟನೆಗಳನ್ನು "ಮುಂತಿಳಿಸುವವನು" ಆಗಿರಬೇಕೆಂದಿಲ್ಲ. ಖಂಡಿತವಾಗಿಯೂ, ದೇವರ ಪ್ರವಾದಿಗಳು "ನಾಶನ ಉಕ್ತಿಗಳಲ್ಲಿ" ಅಥವಾ "ನಿರೀಕ್ಷೆಯ ಉಕ್ತಿಗಳಲ್ಲಿ" ಭವಿಷ್ಯದ ಕುರಿತು ಕೆಲವು ಸಾರಿ ಮಾತಾಡಿರುತ್ತಾರೆ. ಹಾಗಿದ್ದರೂ, ಅವರ ಪ್ರಮುಖ ಕೆಲಸವು ದೇವರ ವಾಕ್ಯವನ್ನು ಬೋಧಿಸುವದು ಅಥವಾ ಕಲಿಸುವುದು, ದೇವರು ಯಾರು ಮತ್ತು ತನ್ನ ಜನರನ್ನು ಆಶೀರ್ವದಿಸುವದಕ್ಕೆ ಆತನು ಏನು ಮಾಡುವನು ಎಂಬುದರ ಬಗ್ಗೆ ಸಾಕ್ಷಿ ಹೇಳುವುದು ಆಗಿತ್ತು. ಅಲ್ಲದೆ ಆತನು ಜನರಿಗೆ ನ್ಯಾಯತೀರಿಸುತ್ತಾನೆ ಮತ್ತು ಅವರ ನುಡಿಗಳಿಗೆ ಮತ್ತು ಅವರ ಕೃತ್ಯಗಳಿಗೆ ಅವರನ್ನು ಹೊಣೆಗಾರರನ್ನಾಗಿ ಮಾಡುತ್ತಾನೆ ಎಂಬುದನ್ನು ಸಹ ತಿಳಿಯಪಡಿಸಬೇಕಾಗಿತ್ತು. ಅಬ್ರಹಾಮನು ತನಗೆ ಮೂಡಣದ ನಾಲ್ಕು ಅರಸರ ವಿರುದ್ಧ ಜಯವನ್ನು ಕೊಟ್ಟಿದ್ದ ಪರಾತ್ಪರನಾದ ಯೆಹೋವ ದೇವರ ವಿಷಯದಲ್ಲಿ ಸಾಕ್ಷಿಯನ್ನು ನುಡಿದಾಗ (14:22-24), ಆತನು ನಿಜಕ್ಕೂ ಒಬ್ಬ ಪ್ರವಾದಿಯ ಕೆಲಸವನ್ನು ನೆರವೇರಿಸುವವನಾಗಿದ್ದನು.

ಯೆಹೋವನು ಅಬ್ರಹಾಮನಿಗೆ **ಭಯಪಡಬೇಡ** ಎಂದು ಹೇಳಿದನು ಯಾಕೆಂದರೆ ದೇವರು ಅವನಿಗೆ **ಗುರಾಣಿಯಾಗಿದ್ದನು** (ನೋಡಿರಿ ಧರ್ಮೋಪದೇಶಕಾಂಡ 33:29; 2 ಸಮುವೇಲ 2:3, 31; ಕೀರ್ತನೆ 3:3; 7:10; 84:11) ಮತ್ತು ಆತನಿಗೋಸ್ಕರ **ಅತ್ಯಧಿಕ ಬಹುಮಾನವು ಇಟ್ಟದೆ** ಎಂದು ಭರವಸವನ್ನು ನೀಡಿದನು. ಅಬ್ರಹಾಮನು ಈ ಸಂದರ್ಭದಲ್ಲಿ ಹೆದರಿದ್ದನು ಎಂಬುದಾಗಿ ಕಥನವು ತಿಳಿಸುವದಿಲ್ಲ. ಆತನ ವೈರಿಗಳು ಎರಡನೆಯ ಯುದ್ಧವನ್ನು ಮಾಡುವದಕ್ಕೋಸ್ಕರ ಹಿಂದಿರುಗಿ ಬರುವರೆನೋ ಎಂಬುದಾಗಿ ಆತನು ಭಯಗೊಂಡಿದ್ದನು ಎಂಬುದಾಗಿ ಕೆಲವರು ಅಭಿಪ್ರಾಯ ಪಡುತ್ತಾರೆ; ಆದರೆ, ಅಬ್ರಹಾಮನ ಖಾಸಗಿ ಸೈನ್ಯ ಮತ್ತು ಅಮೋರಿಯದ ಮೂವರು ಸಹೋದರರ ಸೇನೆಗಳಿಂದ ಅವರು ನಿರ್ಣಾಯಕವಾಗಿ ಸೋಲಿಸಲ್ಪಟ್ಟ ಬಳಿಕ, ಇದು ಅಸಂಭವನೀಯವಾಗಿ ತೋರುತ್ತದೆ. ಇನ್ನು ಕೆಲವರು ದೇವರು ಅಬ್ರಹಾಮನಿಗೆ

ಪ್ರತ್ಯಕ್ಷವಾಗಿದ್ದು ಭಯಭೀತಿಗೊಳಿಸುವಂತಿತ್ತು (15:12), ಆತನು ಅನಂತರದಲ್ಲಿ ರಕ್ಷಣೆಯ ಸಂದೇಶವನ್ನು ಘೋಷಣೆ ಮಾಡಿದ್ದು ಆತನ ಜನರ ಧೈರ್ಯಗುಂದಿಸುವಂತಿತ್ತು (21:17; 26:24; 43:23; 46:3; ವಿಮೋಚನಕಾಂಡ 3:6). ನಂಬಿಕೆಯ ಮಹಾನ್ ವ್ಯಕ್ತಿಗಳ ಹೃದಯಗಳಲ್ಲಿ ಸಹ ದೇವರ ಪ್ರಸನ್ನತೆಯು ಭಯವನ್ನುಂಟು ಮಾಡಬಲ್ಲದಾದರೂ, 1ನೇ ವಚನದಲ್ಲಿ ಪ್ರಸ್ತಾಪಿಸಲಾಗಿರುವ ಭಯವನ್ನು, ಸೂರ್ಯಾಸ್ತಮವಾಗುತ್ತಿರುವ ವೇಳೆ ಸಂಭವಿಸಿದ 12ರಿಂದ 21 ವಚನಗಳಲ್ಲಿನ ದರ್ಶನದೊಂದಿಗೆ ಹೋಲಿಕೆ ಮಾಡಲು ನಮಗೆ ಯಾವ ಕಾರಣಗಳೂ ಇರುವದಿಲ್ಲ.

ವಾಕ್ಯದ ಸ್ವಾಭಾವಿಕ ಅರ್ಥೈಸುವಿಕೆಯು ಏನೆಂದರೆ ಅಬ್ರಹಾಮನ ಭಯವು ಆತನ ಹೃದಯದಲ್ಲಿ ಬಹಳ ಭಾರವಾಗಿ ಯೋಚಿಸುವಂತೆ ಮಾಡಿದ್ದ ವಿಷಯಗಳಿಗೆ ಸಂಬಂಧಪಟ್ಟಿತ್ತು: ಆತನಿಗೆ ಶಾರೀರಿಕ ಬಾಧ್ಯಸ್ಥನು ಇಲ್ಲದಿರುವಿಕೆ. ಯೆಹೋವನು ತಾನು ಮೂಲಪಿತೃವಿನ "ಗುರಾಣಿ" ಮತ್ತು ಆತನ "ಬಹುಮಾನ" ವನ್ನು ಒದಗಿಸುವಾತನು ಎಂಬುದನ್ನು ದೃಢಪಡಿಸಿದಾಗ, ಅಬ್ರಹಾಮನು ತನ್ನನ್ನು ಕಾಡುತ್ತಿದ್ದ ಸಂಗತಿಯನ್ನು ಥಟ್ಟನೆ ಹೇಳಿಬಿಟ್ಟನು: "ದೇವರು ನನಗೆ ಕಾನಾನ್ ದೇಶದ ವಾಗ್ದಾನವನ್ನು ಮಾಡಿದ್ದಾನೆ ಮತ್ತು ನನ್ನ ವೈರಿಗಳಿಂದ ನನ್ನನ್ನು ಕಾಪಾಡಿದ್ದಾನೆ ಎಂಬುದು ಅದ್ಭುತವಾದದ್ದು. ಆತನು ನನಗೆ ಬೃಹತ್ ಮಂದೆಗಳನ್ನು, ಹಿಂಡುಗಳನ್ನು, ಮತ್ತು ಸಂಪತ್ತುಗಳನ್ನು ಕೊಟ್ಟು ಶ್ರೀಮಂತನನ್ನಾಗಿ ಮಾಡಿದ್ದಾನೆ - ಆದರೆ ಯಾವದಕ್ಕೋಸ್ಕರ, ನನ್ನ ಸ್ವತ್ತುಗಳನ್ನು ಬಾಧ್ಯವಾಗಿ ಹೊಂದಲು ನನಗೆ ಮಗನಿಲ್ಲವಾದರೆ ಏನು ಪ್ರಯೋಜನ?" ಆದದರಿಂದ, ಅಬ್ರಹಾಮನಿಗೆ ಯೆಹೋವನು ಆತನಿಗೆ "ಭಯಪಡಬೇಡ" ಎಂದು ಮಾಡಿದ ಮನವಿಯು ಒಂದು ಆದರಣೆಯನ್ನುಂಟು ಮಾಡುವ ಮಾತಾಗಿತ್ತು ಮತ್ತು ಆತನಿಗೂ ಸಾರಳಿಗೂ ಬಹಳ ವಯಸ್ಸಾಗಿದ್ದು ಮಕ್ಕಳಿಲ್ಲದೆ ಇರುವವರಾದರೂ, ಅವರ ಆಶೀರ್ವಾದಗಳನ್ನೆಲ್ಲಾ ಬಾಧ್ಯವಾಗಿ ಹೊಂದುವದಕ್ಕೆ ಅವರಿಗೊಬ್ಬ ಮಗನು ಹುಟ್ಟುವನೆಂಬ ಭರವಸವನ್ನು ನೀಡುವದಾಗಿತ್ತು (ನೋಡಿರಿ 15:4, 5).

**ವಚನ 2.** ದೇವರು ಆಗ ಯುವಕನಾಗಿದ್ದ ಅಬ್ರಹಾಮನನ್ನು, ಊರ್ ಪಟ್ಟಣವನ್ನು ಬಿಟ್ಟು ಹೊರಡುವಂತೆ ಮೊದಲ ಸಾರಿ ಕರೆದು ಅವನನ್ನು ಒಂದು ದೊಡ್ಡ ಜನಾಂಗವಾಗಿ ಮಾಡಿ ಆತನ ಸಂತಾನದ (ಸಂತತಿಯವರು, ವಿಶೇಷವಾಗಿ ಕ್ರಿಸ್ತನ ಮೂಲಕ; ನೋಡಿರಿ ಗಲಾತ್ಯ 3:16) ಮೂಲಕ ಭೂಲೋಕದ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸುವನೆಂದು ಮತ್ತು ಆತನಿಗೆ ಕಾನಾನ್ ದೇಶವನ್ನು ಕೊಡುತ್ತೇನೆಂದು ಹೇಳಿದ ನಂತರದಲ್ಲಿ ಅನೇಕ ವರ್ಷಗಳು ಗತಿಸಿದ್ದವು (11:31; 12:1-3; 13:15, 17; 15:7).[2] ಭವಿಷ್ಯದಲ್ಲಿನ ಜನಾಂಗದ ಪಿತೃವು ತನಗೆ ಸಾರಳಿಂದ ಎಂದಾದರೂ ಮಕ್ಕಳಾಗುವ ಕುರಿತಾಗಿ ನಿರೀಕ್ಷೆಯನ್ನೇ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದನು. ಆದದರಿಂದ, ಅಂತಿಮವಾಗಿ ಆತನು ತನನ್ನು ಚಿಂತಾಕ್ರಾಂತನನ್ನಾಗಿ ಮಾಡುವ ಸಂಗತಿಯು ಏನೆಂದು **ಯೆಹೋವ**ನಿಗೆ ಬಯಲುಗೊಳಿಸಿದನು: ತಾನು **ಸಂತಾನವಿಲ್ಲದವನು** ಎಂಬುದು ಅವನಿಗೆ ಆಳವಾದ ನಿರಾಶೆಯನ್ನುಂಟು ಮಾಡಿತ್ತು. ಆತನು ತನ್ನ **ಆಸ್ತಿಗೆಲ್ಲಾ ದಮಸ್ಕದ ಎಲೀಯೆಜರನು**[3] ಬಾಧ್ಯಸ್ತನಾಗಬೇಕು ಎಂದನು.

בֶּן־מֶשֶׁק *(ಬೆನ್ ಮೆಶೆಕ್)* ಎಂಬುದನ್ನು "ಬಾಧ್ಯಸ್ಥನು" ಎಂದು ಅನುವಾದಿಸಲ್ಪಟ್ಟಿರುವುದು ಒಂದು ರೀತಿ ಪ್ರಶ್ನಾರ್ಹವಾಗಿರುತ್ತದೆ. ಈ ಇಬ್ರಿಯ ಮಾತು ಹಳೆಯ ಒಡಂಬಡಿಕೆಯಲ್ಲಿ ವಿಶಿಷ್ಟವಾಗಿದೆ; ಆದದರಿಂದ, ಅದು ವಿವಿಧ ರೀತಿಗಳಲ್ಲಿ ಅನುವಾದಿಸಲ್ಪಟ್ಟಿದೆ. *ಬೆನ್ ಮೆಶೆಕ್* ಎಂಬುದರ ಅಕ್ಷರಶಃ ಅನುವಾದವು "ಗಳಿಕೆಯ ಮಗನು" ಎಂದಾಗಿರುತ್ತದೆ. ಈ ಅನುವಾದದ ಬದಲಾಗಿ ಬಹುಪಾಲು ಆಧುನಿಕ ತರ್ಜುಮೆಗಳು "ಬಾಧ್ಯಸ್ಥನು" ಎಂದು ಅನುವಾದಿಸಿರುತ್ತವೆ

(RSV; NRSV; NEB; NASB).[4] ಈ ಪದವು 15:3ರಲ್ಲಿನ "[ಒಬ್ಬ] ಬಾಧ್ಯಸ್ಥ[ನಾಗಿರಲಿ]" (יָרַשׁ) ಎಂಬುದಕ್ಕಿರುವ ಸಾಮಾನ್ಯ ಪದಕ್ಕೆ ಸಾಮ್ಯತೆಗಳನ್ನು ಹೊಂದಿರುವದೆಂಬ ವಾಸ್ತವಾಂಶದ ಮೇಲೆ ಈ ಊಹೆಯು ಆಧಾರವಾಗಿದೆ.[5]

**ವಚನ 3.** ಅಬ್ರಹಾಮನು ದಮಸ್ಕದ ಎಲೀಯೆಜರನನ್ನು ದತ್ತು ತೆಗೆದುಕೊಂಡಿದ್ದನೆಂದು ಸ್ಪಷ್ಟವಾಗುತ್ತದೆ, ಆತನು ಅವನ **ಮನೆಯಲ್ಲಿ ಹುಟ್ಟಿದ್ದನು** ಮತ್ತು ಆತನನ್ನು ತನ್ನ **ಬಾಧ್ಯಸ್ಥ**ನನ್ನಾಗಿ ಮಾಡಿದ್ದನು. ಇದು ಪ್ರಾಚೀನ ಮೆಸಪೊಟಾಮ್ಯದಲ್ಲಿದ್ದ ಪದ್ಧತಿಗೆ ಸಾಮರಸ್ಯದಲ್ಲಿರುತ್ತದೆ, ಅದರ ಪ್ರಕಾರ ಸ್ವಾಭಾವಿಕವಾಗಿ ಸಂತಾನವಿಲ್ಲದವನು ತನ್ನ ದಾಸನೊಬ್ಬನನ್ನು ತನಗೆ ಬಾಧ್ಯಸ್ಥನೆಂದು ದತ್ತು ತೆಗೆದುಕೊಳ್ಳಲು ಅನುಮತಿಯಿರುತ್ತಿತ್ತು. ದತ್ತು ತೆಗೆದುಕೊಳ್ಳಲ್ಪಟ್ಟ ಮಗನು ತನ್ನ ನೂತನ ಪೋಷಕರು ಜೀವಂತವಿರುವಷ್ಟು ಕಾಲ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಿದ್ದನು, ಮತ್ತು ಅವರ ಮರಣವಾಗುವ ವೇಳೆ ಸೂಕ್ತವಾದ ರೀತಿಯಲ್ಲಿ ಸಮಾಧಿ ಮಾಡುವ ಹೊಣೆಯು ಆತನ ಮೇಲಿರುತ್ತಿತ್ತು. ಆಗ ಆತನು ಅವರ ಸ್ವತ್ತನ್ನು ಬಾಧ್ಯವಾಗಿ ಪಡೆಯುತ್ತಿದ್ದನು. ಖಂಡಿತವಾಗಿಯೂ, ದತ್ತು ತೆಗೆದುಕೊಂಡ ನಂತರದಲ್ಲಿ ದಂಪತಿಗಳಿಗೆ ಒಬ್ಬ ಸ್ವಾಭಾವಿಕ ಮಗನು ಜನಿಸುವದಾದರೆ, ಆತನು ಪ್ರಧಾನ ಬಾಧ್ಯಸ್ಥನಾಗುವನು, ಹೀಗೆ ದತ್ತು ಮಗನು ಜವಾಬ್ದಾರಿಯಿಂದ ಕೆಳಕ್ಕೆ ಇಳಿಯುವಂತೆ ಆಗುವುದು.

ದಂಪತಿಗಳಿಗೆ ಸಂತಾನವಿಲ್ಲವಾದರೆ ಹೀಗೆ ದಾಸನೊಬ್ಬನನ್ನು ದತ್ತು ಪಡೆಯುವ ಆಚಾರವು ನುಝಿ ಹಲಿಗೆಗಳಿಂದ ದೃಢೀಕರಿಸಲ್ಪಡುತ್ತದೆ. ಈ ಮಣ್ಣಿನ ಹಲಿಗೆಗಳು, ಸಾವಿರಾರು ಸಂಖ್ಯೆಗಳಲ್ಲಿದ್ದು ಮತ್ತು ಕ್ರಿ.ಪೂ. ಐದನೆಯ ಶತಮಾನದಷ್ಟು ಹಳೆಯವುಗಳಾಗಿರುತ್ತವೆ, ಇವುಗಳು 1925 ಮತ್ತು 1931ರ ನಡುವೆ ಉತ್ತರ ಮೆಸಪೊಟಾಮ್ಯದಲ್ಲಿರುವ ನುಝಿ ಎಂಬ ಸ್ಥಳದಲ್ಲಿ ಕಂಡು ಹಿಡಿಯಲ್ಪಟ್ಟವು. ಹಲಿಗೆಗಳು ಅಬ್ರಹಾಮನ ಕಾಲದ ನಂತರ ನೂರಾರು ವರ್ಷಗಳ ಗತಿಸಿದ ನಂತರದವುಗಳಾಗಿದ್ದರೂ, ಪ್ರಾಚೀನ ಮಧ್ಯಪ್ರಾಚ್ಯದ ಸಂಸ್ಕೃತಿಯ ಸ್ಥಿರ ಸ್ವಭಾವದ ಕಾರಣದಿಂದ, ಅವುಗಳು ಆಗಲೂ ಆ ದಿನಾಂಕ ಆಚೆಯ ಮತ್ತು ಮುಂಚಿನ ಅನೇಕ ವರ್ಷಗಳ ಜೀವನ ಸ್ಥಿತಿಗಳನ್ನು ಮತ್ತು ನಿಯಮಗಳನ್ನು ಪ್ರತಿಫಲಿಸುತ್ತವೆ.[6]

**ವಚನ 4. ಯೆಹೋವನು** ಬದಲಿ ಬಾಧ್ಯಸ್ಥನಾಗಿ ಎಲೀಯೆಜರನು ಇರುವ ಸಾಧ್ಯತೆಯನ್ನು ತಿರಸ್ಕರಿಸಿದನು. ಬದಲಾಗಿ, ಅಬ್ರಹಾಮನಿಗೆ ಆತನ ಸ್ವಂತ ರಕ್ತಮಾಂಸವನ್ನು ಹಂಚಿಕೊಂಡು ಹುಟ್ಟುವ ಒಬ್ಬ ಮಗನು ಇರಲಿದ್ದಾನೆ, [ಆತನ] **ಹೊಟ್ಟೆಯಲ್ಲೇ ಹುಟ್ಟುವವನು** ಆತನಿಗೆ **ಬಾಧ್ಯಸ್ಥನಾಗುವನು** ಎಂಬುದನ್ನು ಆತನು ಒತ್ತಿ ಹೇಳಿದನು. 16ನೇ ಅಧ್ಯಾಯದಲ್ಲಿ ನೋಡಿದ ಪ್ರಕಾರ, ಇದು ಕಠಿಣವಾದ ಸಮಸ್ಯೆಯನ್ನು ತರುವಂತೆ ಕಾಣಿಸಿತ್ತು ಯಾಕೆಂದರೆ ಸಾರಳಿಗೆ ಗರ್ಭಧರಿಸುವ ಸಾಮರ್ಥ್ಯವಿರಲಿಲ್ಲ. ಒಂದು ಕ್ಷಣ, ವಾಗ್ದಾನವು ಒಬ್ಬ ವ್ಯಕ್ತಿಯಾಗಿ ಆತನಿಗೆ ಮಾತ್ರವೇ ಸೀಮಿತವಾಗಿರುವದಿಲ್ಲ, ಆದರೆ ಭವಿಷ್ಯದ ತಲೆಮಾರುಗಳಲ್ಲಿ ಅನೇಕ ಸಂತಾನದವರನ್ನು ಒಳಗೊಂಡಿರಲಿದೆ ಎಂದು ದೃಷ್ಟಾಂತಪಡಿಸುವ ಮೂಲಕ ಅಬ್ರಹಾಮನ ಸಂಶಯಗಳನ್ನು ಶಾಂತಗೊಳಿಸಿದನು.

**ವಚನ 5.** ಯೆಹೋವನು (ಅಬ್ರಹಾಮನನ್ನು) **ಹೊರಗೆ ಕರೆತಂದ**ನು ಮತ್ತು **ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು** ಎಂದು ಸವಾಲು ಹಾಕಿದನು. ಹಾಗೆ ಮಾಡುವ ಮೂಲಕ, ದೇವರು ಮುಖ್ಯ ಗಮನವನ್ನು ಮೂಲಪಿತೃವಿನ ದೇಹದ (15:4) ಕಡೆಯಿಂದ ಆತನ ಅಸಂಖ್ಯಾತ ವಂಶದ ಕಡೆಗೆ ತಿರುಗಿಸುತ್ತಾ ಹೀಗೆ ಹೇಳಿದನು, **ನಿನ್ನ ಸಂತಾನವು ಅಷ್ಟಾಗುವದು** (ನೋಡಿರಿ 22:17; 26:4). ಖಂಡಿತವಾಗಿಯೂ,

ಅಬ್ರಹಾಮನಿಗೆ ನಕ್ಷತ್ರಗಳನ್ನು **ಲೆಕ್ಕಿಸುವ**ದಕ್ಕಾಗಲಿ ಅಥವಾ ಸ್ವಾಭಾವಿಕ ಜನನದ ಮೂಲಕವಾಗಿ ಆತನ ವಂಶದಿಂದ ಬರಲಿದ್ದ ಅಸಂಖ್ಯಾತ ಸಂತಾನದವರನ್ನು ಊಹಿಸಿಕೊಳ್ಳಲಾಗಲಿ ಆಗಲಿಲ್ಲ. ಅದರಲ್ಲೂ ನಂಬಿಕೆಯ ಮೂಲಕವಾಗಿ ಆತನ ಆತ್ಮೀಕ ಮಕ್ಕಳಾಗಲಿದ್ದ ಅಸಂಖ್ಯಾತವಾದ ಸಮೂಹಗಳನ್ನಂತೂ ಆತನು ಸ್ವಲ್ಪವೂ ಗ್ರಹಿಸಿಕೊಳ್ಳಲಾಗಲಿಲ್ಲ (ಗಲಾತ್ಯ 3:26-29).

**ವಚನ 6.** ಈ ವಿಸ್ತರಿಸಲ್ಪಟ್ಟ ವಾಗ್ದಾನಕ್ಕೆ ಪ್ರತಿಕ್ರಿಯೆಯಾಗಿ, ಅಬ್ರಹಾಮನು **ಯೆಹೋವನನ್ನು ನಂಬಿದನು**. ಇದೇ ಮೊದಲ ಬಾರಿಗೆ "ನಂಬಿದನು" (אָמַן, *ಅಮಾನ್)* ಎಂಬ ಕ್ರಿಯಾಪದವು ಅಥವಾ "ನಂಬಿಕೆ" ಎಂಬುದರ ನಾಮಪದರೂಪವು ಬೈಬಲಿನಲ್ಲಿ ಕಾಣಿಸಿಕೊಳ್ಳುತ್ತದೆ, ಆದಾಗ್ಯೂ ಅಬ್ರಹಾಮನು ದೇವರನ್ನು ನಂಬಿದ್ದು ಇದೇ ಮೊದಲ ಸಾರಿ ಆಗಿರಲಿಲ್ಲ. ಆತನ ನಂಬಿಕೆಯ ಯಾತ್ರೆಗಳು ಊರ್ ಪಟ್ಟಣದಲ್ಲಿ ಆರಂಭವಾಗಿದ್ದವು, ಆಗ ದೇವರು ಆತನನ್ನು ಮೊದಲ ಬಾರಿಗೆ ಕರೆದಿದ್ದನು (11:31; 15:7; ಅಪೊಸ್ತಲರ ಕೃತ್ಯಗಳು 7:2), ಮತ್ತು ಅದು ಹಾರಾನಿನಲ್ಲಿ ನೀಡದ ಕರೆಯಿಂದ ನವೀಕರಿಸಲ್ಪಟ್ಟಿತು (11:31-12:5). ಹೇಗೂ, ಅಬ್ರಹಾಮನು "ಯೆಹೋವನನ್ನು ನಂಬಿದನು" ಎಂಬ ದೃಢೀಕರಿಸುವಿಕೆಯು ಆತನು ಯೆಹೋವನಲ್ಲಿ[7] ಭರವಸವಿಟ್ಟನು ಎಂಬ ಅರ್ಥವನ್ನು ನೀಡುವ ಒಂದು ಹೆಚ್ಚು ನಿರ್ಣಾಯಕವಾದ ನಂಬಿಕೆಯನ್ನು ಸೂಚಿಸುತ್ತದೆ. "ಯೆಹೋವ" (יהוה, *ಯಾಹು*) ಎಂಬುದರ ಮುಂದಿರುವ (בְּ, *ಬೆ)* ಎಂಬ ಉಪಸರ್ಗವು ಬಹುಶಃ ಅದರೊಂದಿಗೆ ದೇವರ ವಾಗ್ದಾನಗಳಲ್ಲಿ ನಂಬಿಕೆ ಮಾತ್ರವೇ ಅಲ್ಲ, ಆದರೆ ಸ್ವತಃ ದೇವರಲ್ಲಿಯೇ ನಂಬಿಕೆ, ವಿಶ್ವಾಸ, ಅಥವಾ ಅವಲಂಭನೆ ಎಂದರ್ಥವನ್ನು ಸಹ ಹೊಂದಿರುತ್ತದೆ.[8]

ಅಬ್ರಹಾಮನ ನಂಬಿಕೆಗೆ ದೈವಿಕ ಪ್ರತಿಕ್ರಿಯೆಯು ಏನೆಂದರೆ ದೇವರು **ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು**. "ಎಣಿಸಿದನು" ಎಂಬ ಪದವು ಇಬ್ರಿಯ ಭಾಷೆಯ חָשַׁב (*ಚಾಶಾಬ*), ಇದರರ್ಥವು ಒಂದು ಸಂಗತಿಯನ್ನು ಒಬ್ಬನ ಖಾತೆಯಲ್ಲಿ "ಲೆಕ್ಕಿಸು" ಅಥವಾ "ಸೇರ್ಪಡೆಗೊಳಿಸು" ಎಂದಾಗಿರುತ್ತದೆ. ಈ ಆಚಾರಕ್ಕೆ ಒಂದು ದೃಷ್ಟಾಂತವು ಅರಣ್ಯಕಾಂಡ 18:26-30ರಲ್ಲಿ ಸಿಕ್ಕುತ್ತದೆ: ಇಸ್ರಾಯೇಲ್ಯರು ತಮ್ಮ ಉತ್ಪನ್ನಗಳಲ್ಲಿ ದಶಮಾಂಶವನ್ನು ಲೇವಿಯರಿಗೆ ಕೊಡಬೇಕಾಗಿತ್ತು, ಅವರು ಪ್ರತಿಯಾಗಿ, ತಾವು ಪಡೆದುಕೊಂಡ ದಶಮಾಂಶಗಳೊಳಗೆ ಹತ್ತರಲ್ಲಿ ಒಂದು ಭಾಗವನ್ನು ಯೆಹೋವನಿಗೆ ಸಮರ್ಪಿಸಬೇಕಾಗಿತ್ತು. ಆಗ ಆತನು ಲೇವಿಯರ ದಶಮಾಂಶವನ್ನು ಅವರ ಉತ್ಪನ್ನಗಳಿಂದಲೇ ಕೊಡಲ್ಪಟ್ಟಿರುತ್ತದೋ ಎಂಬಂತೆ "ಎಣಿಸುತ್ತಿದ್ದನು" (ಲೆಕ್ಕಿಸುತ್ತಿದ್ದನು). ಈ *ಚಾಶಾಬ*ದ ಭಾವನೆಯು, ಒಂದು ನಕಾರಾತ್ಮಕ ರೀತಿಯಲ್ಲಿ ವ್ಯಕ್ತಪಡಿಸಲ್ಪಟ್ಟಿದೆಯಾದರೂ, ದಾವೀದನು ಪಾಪದ ಕುರಿತಾಗಿ ನುಡಿದ ಅದೇ ಮಾತಿನಂತೆಯೇ ಆಗಿರುತ್ತದೆ: "ಯೆಹೋವನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ [*ಚೆಶಾಬ*, 'ಲೆಕ್ಕಿಸು' ಅಥವಾ 'ಗುರುತಿಸು'] ..." ಪಾಪವು ಅವನ ಲೆಕ್ಕಕ್ಕೆ ಎಣಿಸಲ್ಪಡದೆ ಇರುವದಕ್ಕೆ ಕಾರಣವೆಂದರೆ ದೇವರು ಈಗಾಗಲೇ ಆತನ "ಪಾಪ" ವನ್ನು "ಕ್ಷಮಿಸಿದ್ದನು" ಮತ್ತು "ಪರಿಹಾರ" ಮಾಡಿದ್ದನು (ಕೀರ್ತನೆ 32:1, 2).

ಅಬ್ರಹಾಮನ ನಂಬಿಕೆಯು "ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು [ಲೆಕ್ಕಿಸಿದನು" ಎಂಬ ಹೇಳಿಕೆಯಲ್ಲಿ, "ನೀತಿ" (צְדָקָה, *ತ್ಸೆಬಾಕ್ವಾಹ)* ಎಂಬ ಪದದ ಅರ್ಥವೇನು? ಹಳೆಯ ಒಡಂಬಡಿಕೆಯಲ್ಲಿ ಈ ಪದದ ವ್ಯಾಪಕವಾದ ಬಳಕೆಯು ನೀತಿಯ ಕೃತ್ಯಗಳನ್ನು ಮಾಡಿದ ಅಥವಾ ಸತ್ಯವಂತರಾಗಿರುವ ವ್ಯಕ್ತಿಗಳಿಗೆ ಸಂಬಂಧ ಪಟ್ಟಂತೆ ಆಗಿರುತ್ತದೆ (ಆದಿಕಾಂಡ 30:33; ಧರ್ಮೋಪದೇಶಕಾಂಡ 6:24, 25; ಯೆಶಾಯ 33:5; ಯೆಹೆಜ್ಕೇಲ 14:14, 20). ಇದು

ಸೊದೋಮ್ ಗೊಮೋರಗಳ ನಿವಾಸಿಗಳು ಆಚರಿಸುತ್ತಿದ್ದ ಕೆಟ್ಟತನ ಮತ್ತು ಅನೈತಿಕತೆಗಳಿಗೆ ತದ್ವಿರುದ್ಧವಾದದ್ದಾಗಿತ್ತು. ಅಬೀಮೆಲೆಕನು 20:4ರಲ್ಲಿ ಇದೇ ವಿಧವಾದ ವಿರುದ್ಧ ಹೋಲಿಕೆಯನ್ನು ಮಾಡಿದನು. ಅನಂತರದಲ್ಲಿ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಧರ್ಮಶಾಸ್ತ್ರವು ನ್ಯಾಯಲಯದ ಪ್ರಕರಣಗಳಲ್ಲಿ ನೀತಿವಂತನನ್ನು ನಿರಪರಾಧಿಯೆಂದು ಘೋಷಿಸಬೇಕು *(ತ್ಸೆಬಾಕ್ವಾಹ)*, ಆದರೆ ದುಷ್ಟನಿಗಾದರೋ ಅಪರಾಧಿಯೆಂದು ನಿರ್ಣಯಿಸಬೇಕು ಎಂದು ಹೇಳುತ್ತದೆ (ಧರ್ಮೋಪದೇಶಕಾಂಡ 25:1).

ಒಬ್ಬನು "ನೀತಿನ್ಯಾಯಗಳನ್ನು ನಡಿಸಿದರೆ" ಆತನು "ಸದ್ಧರ್ಮಿ" ಎಂದು ಯೆಹೆಜ್ಕೇಲನು ಹೇಳುತ್ತಾನೆ (ಯೆಹೆಜ್ಕೇಲ 18:5). ಬಳಿಕ ಆತನು ಒಬ್ಬ ನೀತಿವಂತನು ಮಾಡದೆ ಇರುವಂಥ ಪಾಪ ಹಾಗೂ ದುಷ್ಕೃತ್ಯಗಳ ಒಂದು ಸುದೀರ್ಘವಾದ ಪಟ್ಟಿಯನ್ನು ನೀಡುತ್ತಾನೆ (ಯೆಹೆಜ್ಕೇಲ 18:6-8). ಆತನು ಬಣ್ಣನೆಯನ್ನು ಹೀಗೆ ಹೇಳುವ ಮೂಲಕ ಸಾರಾಂಶಗೊಳಿಸುತ್ತಾನೆ, "ನನ್ನ ನಿಯಮಗಳನ್ನು ಅನುಸರಿಸಿ ನನ್ನ ವಿಧಿಗಳನ್ನು ಕೈಕೊಂಡು ಸತ್ಯಪರನಾಗಿಯೇ ನಡೆದರೆ ಇಂಥವನು ಸದ್ಧರ್ಮಿಯಾಗಿರುವದರಿಂದ ಬಾಳೇ ಬಾಳುವನು; ಇದು ಕರ್ತನಾದ ಯೆಹೋವನ ನುಡಿ" (ಯೆಹೆಜ್ಕೇಲ 18:9). 1ನೇ ಕೀರ್ತನೆಯ ಲೇಖಕನು ಅದೇ ರೀತಿಯಲ್ಲಿಯೇ ನೀತಿವಂತನು ದೇವರ "ಧರ್ಮಶಾಸ್ತ್ರವನ್ನು" ಧ್ಯಾನಿಸುವವನು ಮತ್ತು ಅದರ ಪ್ರಕಾರ ಜೀವಿಸುವವನು ಎಂದು ಬಣ್ಣಿಸುತ್ತಾನೆ. ಅಂತಹ ವ್ಯಕ್ತಿಯು ಧನ್ಯನು; ಇಂಥವನ್ನು ಯೆಹೋವನು "ಲಕ್ಷಿಸುವನು" (יָדַע, *ಯಾಡಾ*, "ಮೆಚ್ಚುವನು"[9]); ಆತನು ದುಷ್ಟನಿಗೆ ವಿರುದ್ಧ ಹೋಲಿಕೆಯಲ್ಲಿರುತ್ತಾನೆ, ಆ ದುಷ್ಟನು ಹೊಟ್ಟಿನಂತೆ "ನಾಶವಾಗುವ" ರು (ಕೀರ್ತನೆ 1:1, 2, 6).

ಅಬ್ರಹಾಮನ ಕೃತ್ಯಗಳ ಕಾರಣದಿಂದಾಗಲಿ ಮತ್ತು ಆತನು ಅಂತಹ ಬಹುಮಾನಕ್ಕೆ ಯೋಗ್ಯನಾಗಿದ್ದನೆಂಬ ಕಾರಣಕ್ಕಾಗಲಿ ದೇವರು ಆತನ ನಂಬಿಕೆಯನ್ನು ನೀತಿಯೆಂದು ಎಣಿಸಲಿಲ್ಲ. ಆದಿಕಾಂಡ 11:26-15:6ರಲ್ಲಿನ ಘಟನೆಗಳ ಕಾಲಾನುಕ್ರಮದಲ್ಲಿ, ಆತನು ದೇವರ ಮುಂದೆ "ನೀತಿ" ಯನ್ನು ಸಾಧಿಸುವದಕ್ಕೆ ಸಾಧ್ಯವಾಗಬಲ್ಲ ಯಾವದೇ ನಿಗೂಢವಾದ ನಡವಳಿಕೆಯ ಕುರಿತಾಗಿ ಏನನ್ನೂ ಕಾಣುವದಿಲ್ಲ. ಬದಲಾಗಿ, "ನೀತಿ" ಯು (ದೇವರೊಂದಿಗೆ ಒಂದು ಸಮಾಧಾನದ ಜೀವಿತ) ಅಬ್ರಹಾಮನ ಮೇಲೆ ಆತನ ನಂಬಿಕೆಯ (ವಿಶ್ವಾಸ) ಕಾರಣದಿಂದ ಸುರಿಸಲ್ಪಟ್ಟ ಕೃಪೆಯ ವರದಾನವಾಗಿತ್ತು. ಆತನು ಖಂಡಿತವಾಗಿಯೂ ತನ್ನ ಸತ್ಕಾರ್ಯಗಳಿಂದ ದೇವರನ್ನು ತನಗೆ ಋಣಸ್ಥನನ್ನಾಗಿ ಮಾಡಲಿಲ್ಲ ಅಥವಾ ನೀತಿವಂತನಾಗಿರುವ ಮೂಲಕ ದೈವಿಕ ಮನ್ನಣೆಯನ್ನು ಸಂಪಾದಿಸಿಕೊಳ್ಳಲಿಲ್ಲ (ರೋಮಾ 3:21-28; 4:1-8; 5:17).

## ಒಂದು ಒಡಂಬಡಿಕೆಗೋಸ್ಕರ ಸಿದ್ಧತೆ (15:7-11)

**7ಆಮೇಲೆ ಆತನು ಅವನಿಗೆ - ಈ ದೇಶದ ಬಾಧ್ಯತೆಯನ್ನು ನಿನಗೆ ಕೊಡುವದಕ್ಕೋಸ್ಕರ ನಿನ್ನನ್ನು ಊರ್ ಎಂಬ ಕಲ್ದೀಯರ ಪಟ್ಟಣದಿಂದ ಬರಮಾಡಿದ ಯೆಹೋವನೇ ನಾನು ಎಂದು ಹೇಳಲು ಅವನು - 8ಕರ್ತನಾದ ಯೆಹೋವನೇ, ನಾನು ಇದನ್ನು ಬಾಧ್ಯವಾಗಿ ಹೊಂದುವೆನೆಂದು ತಿಳುಕೊಳ್ಳುವದು ಹೇಗೆ ಎಂದು ಕೇಳಿದನು. 9ಅದಕ್ಕೆ ಆತನು - ನೀನು ಮೂರು ಮೂರು ವರುಷಗಳ ಮಣಕ, ಆಡು, ಟಗರು ಇವುಗಳನ್ನೂ ಬೆಳವಕ್ಕಿಯನ್ನೂ ಪಾರಿವಾಳದ ಮರಿಯನ್ನೂ ತೆಗೆದುಕೊಂಡು ಬಾ ಅಂದನು. 10ಅವನು ಇವುಗಳನ್ನೆಲ್ಲಾ ತೆಗೆದುಕೊಂಡು ಬಂದು ಪಶುಗಳನ್ನು ಕಡಿದು ಎರಡೆರಡು ಹೋಳುಮಾಡಿ ತುಂಡಿಗೆ ತುಂಡನ್ನು ಎದುರಾಗಿ ಇಟ್ಟನು; ಪಕ್ಷಿಗಳನ್ನು ಮಾತ್ರ ಕಡಿಯಲಿಲ್ಲ. 11ಆ ಶವಗಳ ಮೇಲೆ ಹದ್ದುಗಳು ಎರಗಲು ಅಬ್ರಾಮನು ಅವುಗಳನ್ನು**

**ಓಡಿಸಿಬಿಟ್ಟನು.**

ದೇವರು ಅಬ್ರಹಾಮನಿಗೆ ಆಶ್ಚರ್ಯಕರವಾದ ವಾಗ್ದಾನಗಳನ್ನು ಮಾಡಿದ್ದನು - ಎಷ್ಟೊಂದು ಆಶ್ಚರ್ಯಕರವೆಂದರೆ ಅವುಗಳನ್ನು ಅಂಗೀಕರಿಸಿಕೊಳ್ಳುವುದು ಆತನಿಗೆ ಕಷ್ಟಕರವಾಗಿತ್ತು. ಆತನ ವಾಗ್ದಾನಗಳಿಗೆ ಮತ್ತು ಅವುಗಳನ್ನು ಯಾರಿಗೆ ನೀಡಿದ್ದನೋ ಆತನೊಂದಿಗಿನ ಅವನ ನಂಬಿಗಸ್ತಿಕೆಯ ಸಂಬಂಧಕ್ಕೆ ಒಂದು ಖಾತ್ರಿಯಾಗಿ, ದೇವರು ಈ ಬೈಬಲಿನ ವೀರನೊಂದಿಗೆ ಒಂದು ವಿಶಿಷ್ಟವಾದ ಧಾರ್ಮಿಕ ವಿಧಿಯ ಮೂಲಕವಾಗಿ ಒಂದು ಒಡಂಬಡಿಕೆಯನ್ನು ಸ್ಥಾಪಿಸಿಕೊಂಡನು.

**ವಚನ 7.** 15:7-11ರಲ್ಲಿ ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯ ಪರಿಚಯವು ಮೋಶೆಯ ಒಡಂಬಡಿಕೆ/ದಶಾಜ್ಞೆಗಳು ಅಬ್ರಹಾಮನ ಸಂತತಿಯವರಿಗೆ ಸೀನಾಯಿ ಪರ್ವತದಲ್ಲಿ ಕೊಡಲ್ಪಡುವದಕ್ಕೆ ಪೂರ್ವಛಾಯೆಯಾಗಿರುತ್ತದೆ (ವಿಮೋಚನಕಾಂಡ 20:1, 2). ದೇವರು ಅಬ್ರಹಾಮನ ಸಂಗಡ ತನ್ನ ಸಂಭಾಷಣೆಯನ್ನು **ಯೆಹೋವನೇ** (יהוה, *ಯಾಹು*) ಎಂಬುದಾಗಿ ತನ್ನನ್ನು ಗುರುತಿಸಿಕೊಳ್ಳುವ ಮೂಲಕ ಆರಂಭ ಮಾಡುತ್ತಾನೆ. ಇದರ ನಂತರ ಆತನಿಗೋಸ್ಕರ ದೇವರು ಏನು ಮಾಡಿದ್ದಾನೆಂಬುದರ ಒಂದು ಪುನರಾಭಿನಯವು ಸಂಭವಿಸುತ್ತದೆ. ದೇವರು ಹೇಳಿದ್ದೇನೆಂದರೆ ತಾನು **ಈ ದೇಶದ ಬಾಧ್ಯತೆಯನ್ನು ನಿನಗೆ ಕೊಡುವದಕ್ಕೋಸ್ಕರ** [ಆತನನ್ನು] **ಊರ್ ಎಂಬ ಕಲ್ದೀಯರ ಪಟ್ಟಣದಿಂದ ಬರಮಾಡಿದೆನು** ಎಂಬದೆ (ನೋಡಿರಿ 11:31; ಅಪೊಸ್ತಲರ ಕೃತ್ಯಗಳು 7:2-4).

**ವಚನ 8.** ಈ ಸಂದರ್ಭದಲ್ಲಿ, ದೇವರಿಗೆ ಅಬ್ರಹಾಮನ ಪ್ರತ್ಯುತ್ತರವು ಒಂದು ವಿನಂತಿ ಆಗಿತ್ತು. **ಕರ್ತನಾದ ಯೆಹೋವನೇ, ನಾನು ಇದನ್ನು ಬಾಧ್ಯವಾಗಿ ಹೊಂದುವೆನೆಂದು ತಿಳುಕೊಳ್ಳುವದು ಹೇಗೆ** ಎಂದು ಆತನು ಕೇಳಿದನು. ಆತನು ಒಂದು ದಿನ ವಾಸ್ತವಿಕವಾಗಿಯೂ ಈ ದೇಶದ ಒಡೆಯತ್ವವನ್ನು ಪಡೆದುಕೊಳ್ಳುವನು ಎಂಬುದಕ್ಕೆ ಒಂದು ದೃಢವಾದ ಪುರಾವೆಯನ್ನು ಆತನು ಬಯಸಿದ್ದನು (ನೋಡಿರಿ 15:12-16).

**ವಚನ 9.** ದೇವರು ಮೂಲಪಿತೃವಿಗೆ ಯಜ್ಞಕ್ಕೋಸ್ಕರ ಕೆಲವು ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಹೇಳಿದನು. ಇವುಗಳ ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರದಡಿಯೊಳಗೆ ಯಜ್ಞಗಳಾಗಿ ಅರ್ಪಿಸಬೇಕೆಂದು ಇಸ್ರಾಯೇಲ್ಯರಿಗೆ ತಿಳಿಸಲ್ಪಡಲಿದ್ದ ಪ್ರಾಣಿಗಳಾಗಿದ್ದವು. ಯೆಹೋವನು ಅಬ್ರಹಾಮನಿಗೆ **ಮೂರು ಮೂರು ವರುಷಗಳ ಮಣಕ, ಆಡು, ಟಗರು ಇವುಗಳನ್ನೂ ಬೆಳವಕ್ಕಿಯನ್ನೂ** ಮತ್ತು **ಪಾರಿವಾಳದ ಮರಿಯನ್ನೂ ತೆಗೆದುಕೊಂಡು ಬಾ** ಎಂದು ಹೇಳಿದನು, ಅದು "ಪ್ರಶಸ್ತವಾದ ಮೌಲ್ಯದ ವಯಸ್ಸನ್ನು"[10] ಸೂಚಿಸುತ್ತಿರಬಹುದಾಗಿದೆ. ಒಬ್ಬ ಶ್ರೀಮಂತ ವ್ಯಕ್ತಿಯಾಗಿ, ಮೂಲಪಿತೃವು ಸುಲಭವಾಗಿ ಅಂತಹ ಯಜ್ಞಗಳನ್ನು ಏರ್ಪಾಡು ಮಾಡುವದಕ್ಕೆ ಶಕ್ತನಾಗಿದ್ದನು.

**ವಚನ 10.** ಅಬ್ರಹಾಮನು ಪ್ರಾಣಿಗಳನ್ನು **ಎರಡೆರಡು ಹೋಳುಮಾಡಿ**ದನು ಮತ್ತು ಅವುಗಳನ್ನು ಯೆಹೋವನಿಗೆ ಸಮರ್ಪಿಸಿದನು, **ಪಕ್ಷಿಗಳನ್ನು** ಮಾತ್ರ ಪೂರ್ಣವಾಗಿಯೇ ಇಟ್ಟನು. "ಒಂದು ಒಡಂಬಡಿಕೆ ಮಾಡು" ಎಂಬ ಇಬ್ರಿಯ ಭಾಷೆಯ ಮಾತಿನ ಅಕ್ಷರಶಃ ಅರ್ಥವು "ಒಂದು ಒಡಂಬಡಿಕೆಯನ್ನು ಕತ್ತರಿಸು [כָּרַת, *ಕಾರೆಥ್*]" ಎಂದಾಗಿರುತ್ತದೆ (15:18). ಅಂಥ ಒಂದು ಬಣ್ಣನೆಗೆ ಕಾರಣವು ಏನೆಂದರೆ ಯಜ್ಞಮಾಡಲ್ಪಟ್ಟ ಬಲಿಪಶುಗಳೆಲ್ಲವುಗಳ ಗಂಟಲನ್ನು ಕೊಯ್ಯಲಾಗಿರುತ್ತಿತ್ತು, ಮತ್ತು ಒಡಂಬಡಿಕೆಯ ವಿಧಿಗೋಸ್ಕರ ಕೆಲವೊಂದನ್ನು ಎರಡು ತುಂಡುಗಳಾಗಿ ಕತ್ತರಿಸಲಾಗುತ್ತಿತ್ತು.

"ಒಂದು ಒಡಂಬಡಿಕೆಯನ್ನು ಕತ್ತರಿಸು" ಎಂಬುದಕ್ಕೆ ಇನ್ನು ಒಂದೇ ಒಂದು ಬೈಬಲಿನ

ಉದಾಹಣೆಯು ಯೆರೆಮೀಯ 34:18, 19ರಲ್ಲಿರುತ್ತದೆ, ಅದು ಕ್ರಿ.ಪೂ. 588-586ರಲ್ಲಿ ಬಾಬಿಲೋನಿನವರು ಯೆರೂಸಲೇಮಿಗೆ ಮುತ್ತಿಗೆ ಹಾಕಿದ್ದ ವೇಳೆಯಲ್ಲಿ ಸಂಭವಿಸಿ ಘಟನೆಯೊಂದನ್ನು ಬಣ್ಣಿಸುತ್ತದೆ. ಪಟ್ಟಣದಲ್ಲಿನ ಪರಿಸ್ಥಿತಿಯು ವಿಷಮವಾಗಿತ್ತು, ಮತ್ತು ಪಟ್ಟಣವನ್ನು ದಾಳಿಯಿಂದ ಕಾಪಾಡುವದಕ್ಕೆ ದಾಸರ ಯಜಮಾನರಿಗೆ ಅವರ ದಾಸರ ಸಹಾಯದ ಅಗತ್ಯವಿತ್ತು. ಆದದರಿಂದ, ಅವರು ಇಬ್ರಿಯ ದಾಸರನ್ನು ಬಿಡುಗಡೆಗೊಳಿಸಲು ಒಪ್ಪಿದರು, ಅವರಲ್ಲಿ ಗಂಡು ಮತ್ತು ಹೆಣ್ಣು ದಾಸರಿಬ್ಬರೂ ಸೇರಿದ್ದರು. ಅವರು ಒಂದು ಶಾಸ್ತ್ರೋಕ್ತವಾದ ಒಡಂಬಡಿಕೆಯನ್ನು ಮಾಡಿಕೊಂಡರು, ಹಸುವಿನ ಮರಿಯೊಂದನ್ನು ಎರಡು ಭಾಗಗಳಾಗಿ ಕತ್ತರಿಸಿ ಆ ತುಂಡುಗಳ ನಡುವೆ ಹಾದು ಹೋಗುವದನ್ನೊಳಗೊಂಡ ಒಂದು ಧಾರ್ಮಿಕ ವಿಧಿಯ ಮೂಲಕ ಪ್ರತಿಷ್ಠಾಪಿಸಿದರು. ಪಟ್ಟಣದ ನಾಯಕರೆಲ್ಲರೂ ಈ ಧಾರ್ಮಿಕ ವಿಧಿಯಲ್ಲಿ ಪಾಲ್ಗೊಂಡಿದ್ದರು, ಅದರಲ್ಲಿ ಯೆಹೂದ ಹಾಗೂ ಯೆರೂಸಲೇಮಿನ ಅಧಿಕಾರಿಗಳು, ನ್ಯಾಯಾಲಯದ ಅಧಿಕಾರಿಗಳು, ಯಾಜಕರು, ಮತ್ತು ಜನರು ಸೇರಿದ್ದರು. ಕಡಿಯಲ್ಪಟ್ಟ ಪ್ರಾಣಿಯ ಮೃತ ದೇಹದ ತುಂಡುಗಳ ನಡುವೆ ಹಾದು ಹೋಗುವ ಮೂಲಕ, ಅವರು ದಾಸರನ್ನು ಬಿಡುಗಡೆಗೊಳಿಸುವೆವೆಂಬ ತಮ್ಮ ಪ್ರಮಾಣವನ್ನು ನೆರವೇರಿಸಲು ವಿಫಲರಾದಲ್ಲಿ ತಮ್ಮ ಮೇಲೆ ಶಾಪವು ಬರಲಿ ಎಂಬುದಾಗಿ ಆಮಂತ್ರಿಸುವವರಾಗಿದ್ದರು. ಅವರು ಈ ಒಡಂಬಡಿಕೆಯನ್ನು ಉಲ್ಲಂಘಿಸಿದ್ದಲ್ಲಿ, ಕಡಿಯಲ್ಪಟ್ಟ ಪ್ರಾಣಿಯ ಘೋರವಾದ ದೃಶ್ಯದ ಮೂಲಕ ಚಿತ್ರಿಸಲ್ಪಟ್ಟಿರುವ ಮರಣದ ಬೆದರಿಕೆಯು ಅವರಿಗಾಗಿ ಕಾದಿತ್ತು. ಒಟ್ಟಾರೆಯಾಗಿ, ಅವರು ಹೀಗೆ ಹೇಳುವವರಾಗಿದ್ದರು, "ನಾವು ಮಾಡುತ್ತಿರುವ ಸಮರ್ಪಣೆಯನ್ನು ನೆರವೇರಿಸದ್ದಿದ್ದರೆ ನಮಗೆ ಈ ಪ್ರಾಣಿಯಂತೆಯೇ ಆಗಲಿ."

ಫರೋಹ ಹೊಫ್ರನು ಮುತ್ತಿಗೆ ಹಾಕಲ್ಪಟ್ಟಿದ್ದ ಪಟ್ಟಣವನ್ನು ಕಾಪಾಡಬೇಕೆಂಬ ವ್ಯರ್ಥ ಪ್ರಯತ್ನವನ್ನು ಮಾಡುವವನಾಗಿ ತನ್ನ ಸೈನ್ಯವನ್ನು ಯೆಹೂದದೊಳಗೆ ತಂದ ವೇಳೆ, ಬಾಬಿಲೋನಿನವರು ಹೊರಗೆ ಹೋಗಿ ಐಗುಪ್ತದವರ ವಿರುದ್ಧವಾಗಿ ಯುದ್ಧ ಮಾಡುವದಕ್ಕೋಸ್ಕರ ಮುತ್ತಿಗೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು. ಅದು ಸಂಭವಿಸಿದ ವೇಳೆ, ಪ್ರತಿಯೊಬ್ಬ ಯೆಹೂದಿ ದಾಸನ-ಯಜಮಾನನು ತನ್ನ ದಾಸನ(ರ)ನ್ನು ಹಿಂದಕ್ಕೆ ಕರೆದುಕೊಂಡನು ಮತ್ತು ಆ ಮೂಲಕ ಯೆಹೋವನ ಮುಂದೆ ಮಾಡಿದ್ದ ಪ್ರಮಾಣದಿಂದ ಹಿಂದಕ್ಕೆ ಸರಿದಿದ್ದರು; ಆದದರಿಂದ, "ನಿಮ್ಮನ್ನು ಖಡ್ಗವ್ಯಾಧಿಕ್ಷಾಮಗಳಿಗೆ ಗುರಿಯಾಗುವಂತೆ ಬಿಡುತ್ತೇನೆ" ಎಂದು ಅವರಿಗೆ ಒಂದು ಬಿಡುಗಡೆಯನ್ನು ಪ್ರಕಟಿಸಿದನು (ಯೆರೆಮೀಯ 34:15-17). ಆತನು ಅವರನ್ನು "ಇವರೆಲ್ಲರನ್ನೂ ಇವರ ಪ್ರಾಣವನ್ನು ಹುಡುಕುವ ಶತ್ರುಗಳ ಕೈಗೆ ಕೊಡುವೆನು" ಎಂದು ವಾಗ್ದಾನ ಮಾಡಿದನು (ಯೆರೆಮೀಯ 34:20). ದೇವರ ಜನರ ನಾಯಕರು ಯೆಹೋವನ ಹೆಸರಿನಲ್ಲಿ ಒಂದು ಪ್ರಮಾಣವನ್ನು ಮಾಡಿದ ಬಳಿಕವೂ ಅಂತಹ ಅಸಡ್ಡೆಯ ರೀತಿಯಲ್ಲಿ ತಮ್ಮ ಸ್ವಂಗ ಜನರ ವಿಷಯದಲ್ಲಿ - ಇಬ್ರಿಯ ಗಂಡಾಳು ಮತ್ತು ಹೆಣ್ಣಾಳುಗಳು - ಹೀಗೆ ನಡೆದುಕೊಳ್ಳುವದಾದರೆ, ಅವರು ಎಂದಾದರೂ ತಮ್ಮ ಪಾಪಗಳಿಗೋಸ್ಕರ ಪಶ್ಚಾತ್ತಾಪ ಪಡುವರೆಂಬ ನಿರೀಕ್ಷೆಯೇ ಇರಲಿಲ್ಲ. ಈ ಕಾರಣಕ್ಕಾಗಿ, ಯೆಹೋವನು ಮನಸ್ಸಿಲ್ಲದಿದ್ದರೂ ಅವರನ್ನು ಖಡ್ಗ, ವ್ಯಾಧಿ, ಮತ್ತು ಕ್ಷಾಮಗಳಿಂದ ನಾಶವಾಗುವಂತೆ ಒಪ್ಪಿಸಿದನು. ಸೆರೆಯಾಳುಗಳಾಗಿ ಒಯ್ಯಲ್ಪಟ್ಟ ಬದುಕುಳಿದವರು ತಾವು ವಿಗ್ರಹಾರಾಧನೆಯಲ್ಲಿ ಮತ್ತು ದಂಡನೆಯ ಭಯವಿಲ್ಲದವರಾಗಿ ಸಕಲ ವಿಧವಾದ ಕೆಟ್ಟತನದಲ್ಲಿ ಮುಂದುವರೆಯುವದಕ್ಕೆ ಸಾಧ್ಯವಿಲ್ಲ ಎಂಬುದನ್ನು ಕಲಿತುಕೊಳ್ಳಬೇಕಾದ ಸ್ಥಿತಿ ಬಂದಿತ್ತು.

ಬೈಬಲಿನ ಹೊರಗಡೆಯಲ್ಲಿ, ಪ್ರಾಚೀನ ಮಧ್ಯಪ್ರಾಚ್ಯದ ಒಪ್ಪಂದಗಳಲ್ಲಿ "ಒಂದು

ಒಡಂಬಡಿಕೆಯನ್ನು ಕತ್ತರಿಸುವ" ಇದೇ ರೀತಿಯ ಉದಾಹರಣೆಗಳು ಕಂಡು ಬರುತ್ತವೆ. ಕ್ರಿ.ಪೂ. ಎಂಟನೆಯ ಶತಮಾನದಲ್ಲಿನ ಒಂದು ಉದಾಹರಣೆಯಲ್ಲಿ, ಒಂದು ಒಪ್ಪಂದವನ್ನು ಮಂಜೂರು ಮಾಡುವದಕ್ಕೋಸ್ಕರ ಕುರಿ ಮರಿಯೊಂದನ್ನು ತರಲಾಗುತ್ತಿತ್ತು, ಮತ್ತು ಅದರ ತಲೆಯನ್ನು ಕಡಿಯಲಾಗುತ್ತಿತ್ತು. ಒಪ್ಪಂದದಲ್ಲಿ ಹೀಗೆ ಬರೆದಿರಲಾಗಿರುತ್ತಿತ್ತು: "ಈ ತಲೆಯು ಕುರಿಮರಿಯ ತಲೆಯಲ್ಲ, ಇದು ಮತಿ'ಇಲುವಿನ ತಲೆ, ಆತನ ಪುತ್ರರ, ಆತನ ಅಧಿಕಾರಿಗಳ, ಮತ್ತು ಆತನ ದೇಶದ ಜನರ ತಲೆಯಾಗಿರುತ್ತದೆ. ಮತಿ'ಇಲು ಈ ಒಪ್ಪಂದದ ವಿರುದ್ಧ ಪಾಪವನ್ನು ಮಾಡುವದಾದರೆ, ಅದೇ ರೀತಿಯಲ್ಲಿ ... ಮತಿ'ಇಲುವಿನ ತಲೆಯು ಕಡಿಯಲ್ಪಡುವುದು, ಆತನ ಪುತ್ರರ ತಲೆಗಳು ಕಡಿಯಲ್ಪಡುವವು."[11] ಅದೇ ಕಾಲಮಾನಕ್ಕೆ ಸೇರಿದ ಮತ್ತೊಂದು ಉದಾಹರಣೆಯು ಸಹ ಒಪ್ಪಂದವನ್ನು ಉಲ್ಲಂಘಿಸಿದರೆ ಏನು ಸಂಭವಿಸುವುದು ಎಂಬುದನ್ನು ತಿಳಿಯಪಡಿಸುತ್ತದೆ. ಅದು ಹೀಗೆ ಹೇಳುತ್ತದೆ, "[ಹೇಗೆ] ಈ ಕರುವು ಕತ್ತರಿಸಲ್ಪಟ್ಟಿದೆಯೋ, ಹಾಗೆಯೇ ಮತ್ತಿ'ಎಲ್ ಮತ್ತು ಆತನ ಗಣ್ಯರು ಕತ್ತರಿಸಲ್ಪಡುವರು."[12]

**ವಚನ 11.** ಅಬ್ರಹಾಮನಿಂದ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಕತ್ತರಿಸಲ್ಪಡುವ ಧಾರ್ಮಿಕ ವಿಧಿಯು **ಹದ್ದುಗಳು ಎರಗಲು** ಎಂಬ ಹೇಳಿಕೆಯೊಂದಿಗೆ ಅಂತ್ಯಗೊಳ್ಳುತ್ತದೆ. ಈ ಹದ್ದುಗಳು **ಆ ಶವಗಳನ್ನು** ತಿನ್ನುವದಕ್ಕೆ ಬಂದಿರಬಹುದೆಂಬುದು ಸ್ಪಷ್ಟವಾಗುತ್ತದ, ಆದರೆ **ಅಬ್ರಾಮನು ಅವುಗಳನ್ನು ಓಡಿಸಿಬಿಟ್ಟನು**. ಹಳೆಯ ಒಡಂಬಡಿಕೆಯೊಳಗೆ ಬೇರೊಂದು ಕಡೆಯಲ್ಲಿ, ಶವಗಳನ್ನು ತಿನ್ನುವ ಅಶುದ್ಧ ಪಕ್ಷಿಗಳು ಪರದೇಶದ ಜನಾಂಗಗಳನ್ನು ಸೂಚಿಸುತ್ತವೆ (ಯೆಹೆಜ್ಕೇಲ 17:3, 7; ಜೆಕರ್ಯ 5:9; ನೋಡಿರಿ ಯಾಜಕಕಾಂಡ 11:13–19; ಧರ್ಮೋಪದೇಶಕಾಂಡ 14:12–19). ಆದದರಿಂದ, ಕೆಲವರು ಯಜ್ಞ ಮಾಡಲ್ಪಟ್ಟ ಪ್ರಾಣಿಗಳು, ಒಂದು ಅರ್ಥದಲ್ಲಿ ಇಸ್ರಾಯೇಲ್ಯರನ್ನು ಪ್ರತಿನಿಧಿಸುವವುಗಳಾಗಿದ್ದು, ಮತ್ತು ಅಬ್ರಹಾಮನು ತನ್ನ ಭವಿಷ್ಯದ ಸಂತತಿಯವರನ್ನು ಅನ್ಯಜನಾಂಗಗಳ ದಾಳಿಯಿಂದ ಕಾಪಾಡುತ್ತಿದ್ದಾನೆ ಎಂಬುದಾಗಿ ಅಭಿಪ್ರಾಯ ತಿಳಿಸುತ್ತಾರೆ. ಬಹುಶಃ, ಈ ವ್ಯಾಖ್ಯಾನವು ಅಬ್ರಹಾಮನ ಉದ್ದೇಶ ಮತ್ತು ಕ್ರಿಯೆಗಳ ವಿಷಯದಲ್ಲಿ ಸ್ವಲ್ಪ ಅತಿಯಾದ ಅರ್ಥವನ್ನು ಹುಡುಕುವದಾಗಿರುತ್ತದೆ. ಹೆಚ್ಚು ಸಂಭಾವ್ಯವಾದದ್ದೇನೆಂದರೆ, ಇದು ಒಂದು ಪ್ರಾಣಿಯ ಶವನ್ನು ಭೂಮಿಯ ಮೇಲೆ ಹೆಚ್ಚು ಕಾಲ ಹಾಗೆಯೇ ಬಿಡುವಾಗ ಸ್ವಾಭಾವಿಕವಾಗಿ ಸಂಭವಿಸುವಂಥ ಸಂಗತಿ ಮಾತ್ರವೇ ಇದಾಗಿತ್ತು. ಶವಗಳನ್ನು ತಿನ್ನುವ ಪಕ್ಷಿಗಳು ಸ್ವಾಭಾವಿಕವಾಗಿಯೇ ಆಕರ್ಷಿತಗೊಳ್ಳುತ್ತವೆ, ಮತ್ತು ಯೆಹೋವನ ಆಜ್ಞೆಗೆ ಪ್ರತ್ಯುತ್ತರ ಕೊಟ್ಟು ಒಂದು ಶಾಸ್ತ್ರೋಕ್ತವಾದ ಧಾರ್ಮಿಕ ವಿಧಿಯಲ್ಲಿ ಬಳಸಲಾಗಿರುವ ಯಜ್ಞದ ಪ್ರಾಣಿಗಳನ್ನು ನುಂಗಿ ಹಾಕುವದರಿಂದ ಶವ ತಿನ್ನುವ ಪ್ರಾಣಿ ಮತ್ತು ಪಕ್ಷಿಗಳಿಂದ ಕಾಪಾಡುವದಕ್ಕೆ ಆರಾಧಕನು ನಿಶ್ಚಯವಾಗಿ ಒಲವು ಹೊಂದಿರುವನಷ್ಟೆ.

## ಒಂದು ಒಡಂಬಡಿಕೆಯ ಪ್ರವಾದನೆ (15:12-16)

**[12]ಹೊತ್ತು ಮುಣುಗುತ್ತಿರುವಾಗ ಅಬ್ರಾಮನಿಗೆ ಗಾಢನಿದ್ರೆ ಹತ್ತಿತು; ಕಾರ್ಗತ್ತಲು ಅವನ ಮೇಲೆ ಕವಿಯಿತು; ಅವನು ಭಯಭ್ರಾಂತನಾದನು. [13]ಆಗ ಯೆಹೋವನು ಅವನಿಗೆ - ನೀನು ಚೆನ್ನಾಗಿ ತಿಳಿಯತಕ್ಕದ್ದೇನಂದರೆ - ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. [14]ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗವನ್ನು ನಾನು ಶಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು. [15]ನೀನಂತೂ ಸಮಾಧಾನದೊಡನೆ ಪಿತೃಗಳ ಬಳಿಗೆ ಸೇರುವಿ; ತುಂಬಾ ವೃದ್ಧನಾಗಿ**

ಉತ್ತರಕ್ರಿಯೆಯನ್ನು ಹೊಂದುವಿ. [16]ನಿನ್ನ ಸಂತತಿಯವರು ನಾಲ್ಕನೆಯ ತಲಾಂತರದಲ್ಲಿ ಇಲ್ಲಿಗೆ ತಿರಿಗಿಬರುವರು; ಅಮೋರಿಯರ ಅಪರಾಧವು ಇನ್ನೂ ಪೂರ್ಣಸ್ಥಿತಿಗೆ ಬರಲಿಲ್ಲ ಎಂದು ಹೇಳಿದನು.**

**ವಚನ 12. ಹೊತ್ತು ಮುಣುಗುತ್ತಿರುವಾಗ ಅಬ್ರಹಾಮನಿಗೆ ಗಾಢನಿದ್ರೆ** [תַּרְדֵּמָה, *ಥಾರ-ದೆಮಾಹ]* **ಹತ್ತಿತು.** ಇದು ಆದಿಕಾಂಡ 2:21ರಲ್ಲಿ ಆದಾಮನು ಅನುಭವಿಸಿದ ಅದೇ ರೀತಿಯ ನಿದ್ರೆ ಆಗಿರುತ್ತದೆ, ಮತ್ತು ಕನಸುಗಳು, ದರ್ಶನಗಳು, ಮತ್ತು ಪ್ರಕಟನೆಗಳನ್ನು ಉಲ್ಲೇಖಿಸುವ ವೇಳೆ ಬೇರೆ ಸ್ಥಳಗಳಲ್ಲಿ ಬಳಸಲ್ಪಟ್ಟಿರುವ ಅದೇ ಪದವಾಗಿರುತ್ತದೆ (ಯೋಬ 4:13; 33:15). ಈ ನಿರ್ದಿಷ್ಟವಾದ ಸಂದರ್ಭದಲ್ಲಿ, ಮೂಲಪಿತೃವಿನ ಗಾಢವಾದ ನಿದ್ರೆಯಿದಾಂಗಿ **ಕಾರ್ಗತ್ತಲು ಅವನ ಮೇಲೆ ಕವಿಯಿತು; ಅವನು ಭಯಭ್ರಾಂತನಾದನು**. ಬೈಬಲಿನಲ್ಲಿ ಜನರು ಅನೇಕ ಸಾರಿ ದೇವರ ಪ್ರಸನ್ನತೆಯ ಮುಂದೆ ಧೈರ್ಯಗುಂದಿಸುವಂಥ ಭಾವವನ್ನು ಅನುಭವ ಮಾಡುತ್ತಾರೆ. ಒಂದು ವೇದನೆಯ ಪ್ರವಾದನೆಯು ಇರುವಾಗ, ಭವಿಷ್ಯದಲ್ಲಿ ವ್ಯಕ್ತಿಗಳಿಗೆ ಅಥವಾ ಅವರ ಸಂತತಿಯವರಿಗೆ ಕಠಿಣ ಸಮಯಗಳನ್ನು ಬರುವವೆಂದು ಮುಂತಿಳಿಸುವಂಥ ಸಂದರ್ಭದಲ್ಲಿ ವಿಶೇಷವಾಗಿ ಹೀಗೆ ಅನುಭವವಾಗುವುದುಂಟು.

**ವಚನಗಳು 13, 14. ಯೆಹೋವನು** ತನ್ನ ವಾಗ್ದಾನವನ್ನು ಸ್ಪಷ್ಟಗೊಳಿಸಿದನು, ಆತನ ವಂಶಸ್ತರು ಕಾನಾನ್ ದೇಶವನ್ನು ಸ್ವಾಧೀನಪಡಿಸಿಕೊಳ್ಳುವರೆಂದು ಅಬ್ರಹಾಮನು ಪುನರಾಶ್ವಾಸನೆಯನ್ನು ನೀಡುತ್ತಾನೆ. ಹೇಗೂ, ಮೊದಲು ಅವರು **ಅನ್ಯದೇಶದಲ್ಲಿ ಕೆಲವು ಕಾಲವಾಸವಾಗಿದ್ದು** [גֵּר, "ನೆಲೆಗೊಂಡಿರುವ ಪರದೇಶಸ್ಥ," ಎಂಬುದರಿಂದ ಬಂದದ್ದು] ಇರುವರು. ಅಬ್ರಹಾಮನು ಅನಂತರದಲ್ಲಿ ಸಾರಳಿಗೋಸ್ಕರ ಒಂದು ಹೂಣಿಡುವ ಸ್ಥಳವನ್ನು ಕೇಳುವವನಾಗಿ ಹೆಬ್ರೋನಿನ ಜನರೊಂದಿಗೆ ಮಾತಾಡುವ (23:4) ವೇಳೆ ಕಾನಾನಿನೊಳಗೆ ತನಗಿದ್ದ ಸ್ವಂತ ಸ್ಥಾನದ ಇದೇ ಪದವನ್ನು *(ಗೆರ)* ಬಳಸಿದನು. ಇದು ಸ್ವಾಧೀನ ಪಡಿಸಿಕೊಂಡ ನಂತರದಲ್ಲಿ ಕಾನಾನ್ ದೇಶದಲ್ಲಿ ವಾಸಿಸುತ್ತಿದ್ದ ಪರದೇಶದ ನಿವಾಸಿಗಳನ್ನು (ಅನ್ಯಜನರನ್ನು) ಬಣ್ಣಿಸುವದಕ್ಕೆ ಸಹ ಇದೇ ಪದವು ಬಳಸಲ್ಪಟ್ಟಿರುತ್ತದೆ (ಯಾಜಕಕಾಂಡ 16:29; 17:8, 12, 15; 18:26; 19:10, 33, 34). ಕೆಲವರಲ್ಲಿ ಈ ದಿನದ ವರೆಗೂ ಇರುವ ಗೊಂದಲವೇನೆಂದರೆ, ಕಾನಾನ್ ದೇಶದಲ್ಲಿ ಸ್ವತಃ ಇಸ್ರಾಯೇಲ್ಯರಿಗೆ ಸಹ ಇದೇ ಪದವು *(ಗೆರ)* ಬಳಸಲ್ಪಟ್ಟಿರುವದು (ಯಾಜಕಕಾಂಡ 25:23; 1 ಪೂರ್ವಕಾಲವೃತ್ತಾಂತ 29:15).

ಅಬ್ರಹಾಮನ ಸಂತತಿಯವರು **ದಾಸರಾಗಿ ನಾನೂರು ವರುಷ ಭಾದೆಪಡುವ** ಮುಂಚೆ ವಾಸ ಮಾಡುವ ಆ ದೇಶದ ಹೆಸರು ಏನೆಂದು ದೇವರು ಆತನಿಗೆ ತಿಳಿಸಲಿಲ್ಲ (15:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಲ್ಲದೆ ಬಾಧೆಪಡಿಸಿದ **ದೇಶವನ್ನು** ಯಾವ ವಿಧದಲ್ಲಿ **ಶಿಕ್ಷಿಸು**ವನು ಎಂಬುದನ್ನಾಗಲಿ ಆತನಿಗೆ ಬಯಲುಗೊಳಿಸಲಿಲ್ಲ (ನೋಡಿರಿ ವಿಮೋಚನಕಾಂಡ 7-11; 14) ಅಥವಾ ಕ್ರಮೇಣದಲ್ಲಿ ಅವರು **ಬಹಳ ಆಸ್ತಿವಂತರಾಗಿ** ಅಲ್ಲಿಂದ ಬಿಡುಗಡೆಯಾಗಿ ಹೋಗುವದರ ಸುತ್ತ ಸಂಭವಿಸುವ ಪರಿಸ್ಥಿತಿಗಳಾವವು ಎಂಬುದನ್ನಾಗಲಿ ತಿಳಿಸುವದಿಲ್ಲ (ನೋಡಿರಿ ವಿಮೋಚನಕಾಂಡ 12:35, 36). ಬಹುಶಃ ಅಬ್ರಹಾಮನಿಗೆ ಇತ್ತೀಚೆಗೆ ಆಗಿದ್ದ ಅನುಭವದ ನಿಮಿತ್ತವಾಗಿ, ಆತನ ಸಂತತಿಯವರು ಬಾಧೆ ಪಡಿಸಲ್ಪಟ್ಟು ಕೊನೆಗೆ ಬಹಳ ಆಸ್ತಿವಂತರಾಗಿ ಹೊರಗೆ ಬರುವ ದೇಶವು ಐಗುಪ್ತ ಆಗಿರಲಿದೆ ಎಂದು ಊಹಿಸಿಕೊಂಡಿರಬಹುದಾಗಿದೆ; ಹೇಗೂ ವಾಕ್ಯದಲ್ಲಿ ಇದರ ಯಾವ ಸುಳಿವೂ ಕೊಡಲ್ಪಟ್ಟಿರುವದಿಲ್ಲ.

**ವಚನ 15.** ದೇವರು ಬಯಲುಗೊಳಿಸಿದ್ದೇನೆಂದರೆ, ಆತನ ವಂಶಸ್ಥರಂತಲ್ಲದೆ,

ಅಬ್ರಹಾಮನು ವೇದನೆಕರವಾದ ಭವಿಷ್ಯದಿಂದ ತಪ್ಪಿಸಲ್ಪಟ್ಟು **ಸಮಾಧಾನದೊಡನೆ** [ಆತನ] **ಪಿತೃಗಳ ಬಳಿಗೆ ಸೇರಲಿದ್ದನು; ತುಂಬಾ ವೃದ್ಧನಾಗಿ ಉತ್ತರಕ್ರಿಯೆಯನ್ನು ಹೊಂದ**ಲಿದ್ದನು. ಆತನು ಈಗಾಗಲೇ ಫರೋಹನ ವಿಷಯದಲ್ಲಿ ಐಗುಪ್ತದೊಳಗೆ ಅನುಭವಿಸಿದ್ದ ವ್ಯಾಕುಲಪಡಿಸುವ ಅನುಭವ ಮತ್ತು ಮೂಡಣದ ನಾಲ್ಕು ಮಂದಿ ಅರಸರ ವಿರುದ್ಧ ಯುದ್ಧಕ್ಕೆ ತದ್ವಿರುದ್ಧವಾಗಿ, ಜನಾಂಗದ ಪಿತೃವು ವೃದ್ಧಾಪ್ಯದ ತನಕ ಜೀವಿಸುವನು ಮತ್ತು ಸಮಾಧಾನದಿಂದ ಮರಣಿಸುವನು ಎಂಬುದಾಗಿ ಯೆಹೋವನು ತಿಳಿಯಪಡಿಸಿದನು. ಅದರರ್ಥವು ಆತನಿಗೆ ಇನ್ನು ಮೇಲೆ ಯಾವ ಕಷ್ಟಗಳೇ ಬರುವದಿಲ್ಲ ಎಂದಾಗಿರಲಿಲ್ಲ, ಆದರೆ ಆತನು ಅನುಭವಿಸಿದ ಕಷ್ಟಗಳಿಗಿಂತಲೂ ಆತನ ಆಶೀರ್ವಾದಗಳು ಅತ್ಯಧಿಕವಾಗಿರಲಿದ್ದವು. ಖಂಡಿತವಾಗಿಯೂ, ಅಬ್ರಹಾಮನು ತನ್ನ ಭೂಲೋಕದ ಪ್ರಯಾಣದ ಅಂತ್ಯದ ಕಡೆಗೆ ಬಂದಾಗ, ಆತನು "ಪೂರ್ಣಾಯುಷ್ಯದಿಂದ ದಿನತುಂಬಿದ ಮುದುಕನಾಗಿ" (175 ವರ್ಷಗಳು) ಮರಣಿಸಿದನು ಮತ್ತು "ಜೀವನದಲ್ಲಿ ಸಂತೃಪ್ತ" ನಾಗಿದ್ದನು (25:7, 8).

**ವಚನ 16.** ಭವಿಷ್ಯದ ಕುರಿತಾಗಿ ಅಬ್ರಹಾಮನಿಗಿದ್ದ ವೈಯಕ್ತಿಕ ಕಳಕಳಿಗಳನ್ನು ಹೋಗಲಾಡಿಸಿದ ಬಳಿಕ, ದೇವರು ಆತನ ಸಂತತಿಯವರ ಅಂತ್ಯಾವಸ್ಥೆಯ ಕಡೆಗೆ ಪುನಃ ತಿರುಗಿಕೊಂಡನು, **ನಾಲ್ಕನೆಯ ತಲಾಂತರದಲ್ಲಿ ಇಲ್ಲಿಗೆ** [ಅಂದರೆ, ಕಾನಾನಿಗೆ] **ತಿರಿಗಿಬರುವರು** ಎಂದು ಹೇಳಿದನು. ಈ ಹೇಳಿಕೆಯು 15:13ರಲ್ಲಿನ ಹೇಳಿಕೆಗೆ ತದ್ವಿರುದ್ಧವಾಗಿದೆ ಎಂದು ವಾದಿಸುತ್ತಾರೆ, ಅಲ್ಲಿ ಅದು ಇಸ್ರಾಯೇಲ್ಯರು ಐಗುಪ್ತದಲ್ಲಿ "ನಾನೂರು ವರುಷ" ಇರುವರೆಂದು ಬಣ್ಣಿಸುತ್ತದೆ. ಹೇಗೂ, "ತಲಾಂತರ" ಎಂಬುದಕ್ಕಿರುವ דּוֹר *(ಡೊರ)* ಎಂಬ ಇಬ್ರಿಯ ಪದವು ಸಮಯದ ಒಂದು ಅವಧಿಯನ್ನು ಸೂಚಿಸುತ್ತದೆ ಹೊರತು ಎಷ್ಟು ವರ್ಷಗಳು ಎಂಬುದನ್ನಲ್ಲ. ಉದಾಹರಣೆಗೆ, ಮೋಶೆಯು ಐಗುಪ್ತದಿಂದ ಪಲಾಯನ ಮಾಡಿ, ಚಿಪ್ಪೋರಳನ್ನು ಸಂಧಿಸಿ ಮದುವೆ ಮಾಡಿಕೊಂಡ ವೇಳೆ ಸುಮಾರು ನಾಲ್ವತ್ತು ವಯಸ್ಸಿನವನಾಗಿದ್ದನು (ಅಪೊಸ್ತಲರ ಕೃತ್ಯಗಳು 7:23-29); ಮತ್ತು ಇಸ್ರಾಯೇಲ್ಯರು ಅವರ ಕಠಿಣ ಅಪನಂಬಿಕೆ ಮತ್ತು ಅವಿಧೇಯತೆಗಳ ಕಾರಣದಿಂದ ನಾಲ್ವತ್ತು ವರ್ಷಗಳ ಕಾಲ - ಒಂದು "ತಲಾಂತರ" (*ಡೊರ*; ಅರಣ್ಯಕಾಂಡ 32:13) - ಅರಣ್ಯದಲ್ಲಿ ಅಲೆದಾಡುವಂತೆ ದಂಡನೆ ವಿಧಿಸಲ್ಪಟ್ಟರು. ಮೋಶೆಯ ಕಾಲದಲ್ಲಿ ಒಂದು ತಲಾಂತರವು ಸುಮಾರು ನಾಲ್ವತ್ತು ವರ್ಷಗಳದ್ದಾಗಿತ್ತಾದರೂ, ಅಬ್ರಹಾಮನ ಕಾಲದಲ್ಲಿ ಅದನ್ನು ಅಂದಾಜು ಒಂದು ನೂರು ವರ್ಷಗಳು ಎಂಬುದಾಗಿ ಅರ್ಥಮಾಡಿಕೊಳ್ಳಬಹುದಾಗಿದೆ, ಯಾಕೆಂದರೆ ಇಸಾಕನು ಹುಟ್ಟಿದಾಗ ಅಬ್ರಹಾಮನು ಆ ವಯಸ್ಸಿನವನಾಗಿದ್ದನು (17:17; 21:5) ಮತ್ತು ಮೂಲಪಿತೃವು 175 ವರ್ಷಗಳ ಕಾಲ ಬದುಕಿದನು (25:7).

15:13ರ "ನಾನೂರು ವರುಷ" ಎಂಬುದು ಒಂದು ಪೂರ್ಣ ಸಂಖ್ಯೆಯಾಗಿದೆಯೇ, ಹೊರತು ನಿರ್ದಿಷ್ಟ ಸಂಖ್ಯೆಯಲ್ಲ (ನೋಡಿರಿ ಅಪೊಸ್ತಲರ ಕೃತ್ಯಗಳು 7:6). ಇದು ವಿಮೋಚನಕಾಂಡ 12:40, 41ರಲ್ಲಿರುವ ಕಾಲಾನುಕ್ರಮದ ಉಲ್ಲೇಖದಿಂದ ಸ್ಪಷ್ಟವಾಗಿ ತಿಳಿಯುತ್ತದೆ: "ಇಸ್ರಾಯೇಲ್ಯರು ಐಗುಪ್ತದೇಶದಲ್ಲಿ ವಾಸವಾಗಿದ್ದದ್ದು ನಾನೂರಮೂವತ್ತು ವರುಷ. ನಾನೂರಮೂವತ್ತು ವರುಷಗಳು ಕಳೆದನಂತರ ಅದೇ ದಿವಸದಲ್ಲಿ ಯೆಹೋವನ ಸೈನ್ಯಗಳೆಲ್ಲಾ ಐಗುಪ್ತದೇಶವನ್ನು ಬಿಟ್ಟು ಹೊರಟುಹೋದವು."

15:16ರಲ್ಲಿ ಕಡೆಯ ಹೇಳಿಕೆಯು ಅಬ್ರಹಾಮನ ಸಂತತಿಯವರಿಗೆ ದೇಶವನ್ನು ಕೊಡುವದಕ್ಕೆ ದೇವರು ಏಕೆ ವಿಳಂಬ ಮಾಡಿದನೆಂಬುದನ್ನು ವಿವರಿಸುತ್ತದೆ: **ಅಮೋರಿಯರ ಅಪರಾಧವು ಇನ್ನೂ ಪೂರ್ಣಸ್ಥಿತಿಗೆ ಬರಲಿಲ್ಲ.** "ಅಮೋರಿಯರು" ಎಂಬ ಪದವು ಹಳೆಯ

ಒಡಂಬಡಿಕೆಯಲ್ಲಿ ಬದಲಾಗುತ್ತಲಿರುತ್ತದೆ; ಕೆಲವು ಸಾರಿ ಅದು ದೇಶದಲ್ಲಿದ್ದ ವಿವಿಧ ಗುಂಪುಗಳೊಳಗಿನ ಒಂದು ಗುಂಪನ್ನು ಸೂಚಿಸುತ್ತದೆ (15:21; ವಿಮೋಚನಕಾಂಡ 3:8), ಆದರೆ ಅದು ಕಾನಾನ್ ದೇಶದಲ್ಲಿ ವಾಸವಿದ್ದ ಎಲ್ಲಾ ಜನರನ್ನು ಸಹ ಸೂಚಿಸಬಹುದಾಗಿದೆ (15:16; ಆಮೋಸ 2:10).[13] ಈ ಪದಕ್ಕೆ ಇಲ್ಲಿ ಮೇಲಿರುವ ಎರಡನೆಯ ಅರ್ಥವು ಇರುತ್ತದೆ, ಯಾಕೆಂದರೆ ಅಮೋರಿಯ ಅಪರಾಧವು "ಪೂರ್ಣಸ್ಥಿತಿಗೆ" (שָׁלֵם, *ಶಾಲೆಮ್)* ಬರುವ ತನಕ ಅಥವಾ "ಪೂರ್ಣಪ್ರಮಾಣ" (NIV) ತಲುಪುವ ತನಕ ಕಾನಾನ್ ದೇಶವನ್ನು ಗೆದ್ದುಕೊಳ್ಳುವ ಕೆಲಸವು ಆರಂಭವಾಗಕೂಡದಾಗಿತ್ತು. ಯೆಹೋವನು ಅಮೋರಿಯರ (ಕಾನಾನ್ಯರ) ಅನೈತಿಕತೆಯು ಅತ್ಯಂಥ ಭ್ರಷ್ಟಗೊಂಡು ಇನ್ನು ಮೇಲೆ ದೇವರು ಅವರ ಅನೈತಿಕ ನಡವಳಿಕೆಯನ್ನು ಸಹಿಸಿಕೊಳ್ಳಲಾರನು ಎಂಬಷ್ಟರ ಮಟ್ಟಿಗೆ ಬರುವ ತನಕ ಆತನ ಅವರ ಕಡೆಗೆ ದೀರ್ಘಶಾಂತಿಯಿಂದ ಇರಲಿದ್ದನು ಎಂಬುದು ಇದರರ್ಥವಾಗಿದೆ.[14] ಆದದರಿಂದ, ಕಾನಾನ್ ದೇಶವನ್ನು ಗೆದ್ದುಕೊಳ್ಳುವುದು ಮತ್ತು ಅದರಲ್ಲಿ ನೆಲೆಗೊಳ್ಳುವುದು ದೇವರ ಸಾರ್ವಭೌಮ ನ್ಯಾಯದ ಮೇಲೆ ಆಧಾರವಾಗಿತ್ತೇ (ಯಾಜಕಕಾಂಡ 18:24, 25; ಧರ್ಮೋಪದೇಶಕಾಂಡ 9:5) ಹೊರತು ಕೆಲವು ಸಾರಿ ಅಭಿಪ್ರಾಯ ಪಡಲ್ಪಟ್ಟಿರುವ ಪ್ರಕಾರ ಇಸ್ರಾಯೇಲ್ಯರ ಸಂಪೂರ್ಣ ಆಕ್ರಮಣಶೀಲತೆಯಿಂದ ಆಗಿರಲಿಲ್ಲ.

ಹಲವಾರು ಉತ್ಖನನ ವಸ್ತುಗಳು ಮತ್ತು ರಾಸ ಶಾಮ್ರಾ ಎಂಬ ಸ್ಥಳದಲ್ಲಿ ದೊರೆತ ಅಮೋರಿಯರ (ಪಶ್ಚಿಮದಲ್ಲಿದ್ದವರ) ಪ್ರಾಚೀನ ಉಗರಿತ್ ಸಾಹಿತ್ಯದ ಬಹಳಷ್ಟು ಭಾಗವು ಕಾನಾನ್ಯರರು ಎಷ್ಟರ ಮಟ್ಟಿಗೆ ಭ್ರಷ್ಟಗೊಂಡಿದ್ದರೆಂಬುದನ್ನು ತಿಳಿಸುತ್ತದೆ, ಈ ಸ್ಥಳವು ಉತ್ತರ ಲೆಬನೊನಿನ ಸಿರಿಯದ ಕರಾವಳಿಯಲ್ಲಿರುತ್ತದೆ. ಅವರ ಆರಾಧನೆಯು ಬಹುದೇವರಾಧನೆಯಾಗಿತ್ತು, ಮತ್ತು ಅದರಲ್ಲಿ ಚಿಕ್ಕ ಮಕ್ಕಳ ನರಬಲಿಗಳು ಸೇರಿರುತ್ತಿದ್ದವು, ಗಂಡು ಮತ್ತು ಹೆಣ್ಣು ಪಾಷಂಥ ವೇಶ್ಯಯರು ದೇವಸ್ಥಾನಗಳಲ್ಲಿ ಸೇವೆ ಮಾಡುತ್ತಿದ್ದರು, ಮತ್ತು ವಿವಿಧ ರೀತಿಯ ಕಣಿ ಹೇಳುವಿಕೆ ಮತ್ತು ಮಾಟಮಂತ್ರಗಳು ನಡೆಯುತ್ತಿದ್ದವು. ಈ ಕೃತ್ಯಗಳು ಮೋಶೆಯ ಧರ್ಮಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟವು (ಯಾಜಕಕಾಂಡ 18:21-25; ಧರ್ಮೋಪದೇಶಕಾಂಡ 18:9-12).

ಹೇಗೂ, ಉತ್ತರ ರಾಜ್ಯವಾದ ಇಸ್ರಾಯೇಲಿನ ರಾಜರೆಲ್ಲರು, ಮತ್ತು ದಕ್ಷಿಣದ ಯೆಹೂದ ರಾಜ್ಯದ ಬಹಳಷ್ಟು ರಾಜರು ಅನ್ಯಧರ್ಮಿಯರ ಪಾಷಂಥ ಮತಗಳನ್ನು ಮತ್ತು ಅವರ ಭ್ರಷ್ಟಗೊಂಡ ಆಚಾರಗಳನ್ನು ಉತ್ತೇಜಿಸಿದರು (1 ಅರಸು 14:21-24; 21:24-26). ದೇವರ ಜನರು ಅವರ ದೇಶವನ್ನು ಕಳೆದುಕೊಂಡು ಸೆರೆಯಾಳುಗಳಾಗಿ ಒಯ್ಯಲ್ಪಟ್ಟಿದ್ದ ಮೂಲ ಕಾರಣವು ಅದೇ ಆಗಿತ್ತು. ಯೆಹೋವನು ಅವರಿಗೆ ವಿಗ್ರಹಾರಾಧನೆ, ಆಚಾರಗಳು, ಕೊಲೆ, ಮತ್ತು ಸಕಲ ವಿಧವಾದ ಘೋರ ದುಷ್ಕೃತ್ಯಗಳನ್ನು ಬಿಟ್ಟು ಪಶ್ಚಾತ್ತಾಪ ಪಡುವಂತೆ ನಾನೂರು ವರ್ಷಗಳ ಕಾಲಾವಕಾಶವನ್ನು ನೀಡಿದನು, ಅದೇ ರೀತಿಯೇ ಅಮೋರಿಯರಿಗೂ ನೀಡಿದನು; ಆದರೆ ಅವರು ಹಾಗೆ ಮಾಡುವದಕ್ಕೆ ನಿರಾಕರಿಸಿದಾಗ, ಅವರು - ಕಾನಾನಿನಲ್ಲಿ ಈ ಮುಂಚೆ ಇದ್ದ ನಿವಾಸಿಗಳ ರೀತಿಯಲ್ಲಿ - ಕಾನಾನ್ ದೇಶದ ಸ್ವಾಧೀನತೆಯನ್ನು ಕಳೆದುಕೊಂಡರು (ಧರ್ಮೋಪದೇಶಕಾಂಡ 29:22-28; 2 ಅರಸು 21:1-11; ಯೆಹೆಜ್ಕೇಲ 16:35-52; ದಾನಿಯೇಲ 9:1-14).

## ಒಡಂಬಡಿಕೆಯನ್ನು ಪೂರ್ತಿಗೊಳಿಸಿದ್ದು (15:17-21)

**[17]ಹೊತ್ತು ಮುಣುಗಿ ಕಾರ್ಗತ್ತಲಾದಾಗ ಇಗೋ ಹೊಗೆಹಾಯುವ ಒಲೆಯೂ ಉರಿಯುವ**

**ದೀವಟಿಗೆಯೂ ಕಾಣಿಸಿ ಆ ತುಂಡುಗಳ ನಡುವೆ ಹೋದವು. [18]ಆ ದಿನದಲ್ಲಿ ಯೆಹೋವನು ಅಬ್ರಾಮನ ಸಂಗಡ ಒಡಂಬಡಿಕೆ ಮಾಡಿಕೊಂಡು - ಐಗುಪ್ತದೇಶದ ನದಿಯಿಂದ ಯೂಫ್ರೇಟೀಸ್ ಮಹಾನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ ಅಂದನು; [19]ಅಂದರೆ ಕೇನಿಯರೂ ಕೆನಿಜೀಯರೂ ಕದ್ಮೋನಿಯರೂ [20]ಹಿತ್ತಿಯರೂ ಪೆರಿಜೀಯರೂ ರೆಫಾಯರೂ ಅಮೋರಿಯರೂ [21]ಕಾನಾನ್ಯರೂ ಗಿರ್ಗಾಷಿಯರೂ ಯೆಬೂಸಿಯರೂ ವಾಸವಾಗಿರುವ ದೇಶವನ್ನು ಕೊಡುವೆನೆಂದು ವಾಗ್ದಾನ ಮಾಡಿದನು.**

**ವಚನ 17. ಹೊತ್ತು ಮುಣುಗಿದ** ಹಾಗೆ, ದೇವರು ಅಬ್ರಹಾಮನ ಸಂಗಡ ತನ್ನ ಒಡಂಬಡಿಕೆಯನ್ನು ಮಾಡುತ್ತಿರುವ ವೇಳ ಕತ್ತಲೆಯು ಒಂದು ಪ್ರಭಾವಶಾಲಿ ದೃಶ್ಯಕ್ಕೆ ವೇದಿಕೆಯನ್ನು ಸಿದ್ಧಗೊಳಿಸಿತ್ತು: **ಹೊಗೆಹಾಯುವ ಒಲೆಯೂ ಉರಿಯುವ ದೀವಟಿಗೆಯೂ ಕಾಣಿಸಿ** [ಭೂಮಿಯ ಮೇಲೆ ಬಿದ್ದಿದ್ದ] **ಆ ತುಂಡುಗಳ ನಡುವೆ ಹೋದವು.** "ಒಲೆ" ಎಂಬುದಕ್ಕಿರುವ ಇಬ್ರಿಯ ಪದವು (תַּנּוּר, *ಥನ್ನುರ)* ಮಣ್ಣಿನಿಂದ ಮಾಡಲ್ಪಟ್ಟಿರುವ ಗುಮ್ಮಟವುಳ್ಳ ದಿಂಡನ್ನು ಸೂಚಿಸುತ್ತಿರಬಹುದಾಗಿದೆ, ಅದು ಗಾತ್ರದಲ್ಲಿ ಕೇವಲ ಎರಡು ಅಥವಾ ಮೂರು ಅಡಿಗಳಷ್ಟಿರುತ್ತಿತ್ತು. ಹೊಗೆ ಮತ್ತು ಬೆಂಕಿಗಳು ದೇವರ ಪ್ರಸನ್ನತೆಗೆ ಸಂಕೇತವಾಗಿರುತ್ತವಾದ್ದರಿಂದ (ವಿಮೋಚನಕಾಂಡ 3:2; 14:24; 19:18; 20:18; 24:17; ಕೀರ್ತನೆ 18:8), ಯೆಹೋವನೇ ಅಲ್ಲಿ ಸಾಂಕೇತಿಕವಾಗಿ ಮಾತಾಡುತ್ತಿದ್ದಾನೆ, ಆತನು ಪ್ರಾಣಿಗಳ ಮಾಂಸದ ಸಾಲುಗಳ ನಡುವೆ ಧಾರ್ಮಿಕ ವಿಧಿವಿಧಾನದಂತೆ ನಡೆದು ಸಾಗಿದ್ದನು.

**ವಚನ 18.** ಹಾಗೆ ಮಾಡುವ ಮೂಲಕ, ದೇವರು **ಅಬ್ರಾಮನ ಸಂಗಡ** ಒಂದು ಏಕಪಕ್ಷೀಯ **ಒಡಂಬಡಿಕೆ ಮಾಡಿಕೊಂಡನು** (ಅಥವಾ "ಕತ್ತರಿಸಿದನು," *ಕಾರಾಥ).* ಒಂದು ದ್ವಿಪಕ್ಷೀಯ ಒಡಂಬಡಿಕೆಯನ್ನು ಮಾಡುವದಕ್ಕಾಗಿ, ಅಬ್ರಹಾಮನು ಅಥವಾ ಆತನನ್ನು ಪ್ರತಿನಿಧಿಸುವಂಥದ್ದೊಂದು ಒಡಂಬಡಿಕೆಯನ್ನು ಅಧಿಕೃತಗೊಳಿಸುವದಕ್ಕಾಗಿ ಪ್ರಾಣಿಯ ಶವಗಳ ನಡುವೆ ಹಾದು ಹೋಗುವದು ಅಗತ್ಯವಿತ್ತು. ಬದಲಾಗಿ, ಸ್ವತಃ ಯೆಹೋವನೇ ಒಂದು ಅತ್ಯಂಥ ಶಾಸ್ತ್ರೋಕ್ತ ವಿಧದಲ್ಲಿ ತಾನು ಈ ಒಡಂಬಡಿಕೆಯನ್ನು ನೆರವೇರಿಸುವೆನೆಂದು ಖಾತ್ರಿಪಡಿಸಿದನು.

ಯೆಹೋವನು 15:9, 10 ಮತ್ತು ಯೆರೆಮೀಯ 34:18, 19ರಲ್ಲಿ ಸೂಚ್ಯಾರ್ಥವಾಗಿರುವ ಶಾಪವನ್ನು ಸ್ವತಃ ತನ್ನ ಮೇಲೆ ತೆಗೆದುಕೊಂಡನೋ? ಒಂದು ವೇಳೆ ಆತನು "ನಾನು ಈ ಒಡಂಬಡಿಕೆಯನ್ನು ಕಾಪಾಡಿಕೊಳ್ಳದಿದ್ದರೆ ಈ ಪ್ರಾಣಿಗಳಿಗಾಗಿರುವ ಗತಿಯು ನನಗಾಲಿ" ಎಂಬ ಸಂಗತಿಯೊಂದನ್ನು ದೃಢಪಡಿಸುತ್ತಿದ್ದಲ್ಲಿ, ಯೆಹೋವನು ತನ್ನ ಮೇಲೆ ಮರಣ ದಂಡನೆಯನ್ನು ಬರಲೆಂದು ಹೇಳಿಕೊಂಡಿದ್ದು ಕೇವಲ ಒಂದು ರೂಪಕೋಕ್ತಿಯಾಗಿರುತ್ತದಷ್ಟೆ, ಯಾಕೆಂದರೆ ಆತನು ವಾಸ್ತವಿಕದಲ್ಲಿ ಮರಣಿಸುವದಕ್ಕೆ ಸಾಧ್ಯವಿರಲಿಲ್ಲ. ಪ್ರಕರಣವು ಏನೇ ಆಗಿದ್ದರೂ ಸರಿಯೇ, ದೇವರು ಏನೇ ಮಾತುಗಳನ್ನಾಡಿದ್ದರೂ ಸರಿಯೇ, ಅಬ್ರಹಾಮನು ಈ ದರ್ಶನದಲ್ಲಿ ಒಂದು ಹೃದಯಂಗಮ ದೃಶ್ಯವನ್ನು ಕಂಡಿದ್ದನು.

ಅಬ್ರಹಾಮನ **ಸಂತತಿಯವರು** ಸುಮಾರು ನಾನೂರು ವರ್ಷಗಳ ಕಾಲ ದೇಶ ಸ್ವಾಮ್ಯವನ್ನು ಪಡೆದುಕೊಳ್ಳದವರಾಗಿದ್ದರಾದರೂ, ಯೆಹೋವನು ಹೀಗೆ ಹೇಳಿದನು, **ಈ ದೇಶವನ್ನೆಲ್ಲಾ** [ಅವರಿಗೆ] **ಕೊಟ್ಟಿದ್ದೇನೆ.** ಬಹುಪಾಲು ಆಧುನಿಕ ತರ್ಜುಮೆಗಳು "ಕೊಡುತ್ತೇನೆ" (נָתַן, *ನಾಥಾನ)* ಎಂಬ ಕ್ರಿಯಾಪದವು ಒಂದು ಪರಿಪೂರ್ಣ ರೂಪದಲ್ಲಿರುತ್ತದೆ ಎಂಬುದನ್ನು ನಿರ್ಲಕ್ಷ್ಯಿಸಿರುತ್ತವೆ, ಆ ಪದವು ಗತಕಾಲದಲ್ಲಿ ಪೂರ್ತಿಗೊಂಡಿರುವ ಒಂದು ಕ್ರಿಯೆಯನ್ನು ಸೂಚಿಸುವದಾಗಿದೆ. ಅವುಗಳು ಅದನ್ನು "ನಾನು ಈ ದೇಶವನ್ನು ಕೊಡುವೆನು" ಎಂಬ ಒಂದು

ಅಸ್ಪಷ್ಟತೆಯೊಂದಿಗೆ ತಪ್ಪಾಗಿ ಅನುವಾದಿಸುತ್ತವೆ (RSV; NRSV; NIV; NEB). NASBಯು "ಈ ದೇಶವನ್ನು ಕೊಟ್ಟಿದ್ದೇನೆ" ಎಂದು ನಿಖರವಾಗಿ ಅನುವಾದಿಸಿರುತ್ತದೆ. ಇಲ್ಲಿ ಕ್ರಿಯಾಪದವು ಒಂದು "ಪ್ರವಾದನಾತ್ಮಕ ಪೂರ್ಣವಾಚಕ" ಆಗಿರುತ್ತದೆ, ಅದು "ದೂರದ ಭವಿಷ್ಯದಲ್ಲಿನ ಒಂದು ಘಟನೆಯನ್ನು ಈಗಾಗಲೇ ಸಂಭವಿಸಿರುತ್ತದೋ ಎಂಬಂತೆ" ಸೂಚಿಸುವದಕ್ಕೆ ಬಳಸಲ್ಪಡುತ್ತದೆ.[15] ಅಂತಹ ಸನ್ನಿವೇಶದಲ್ಲಿನ ಘಟನೆಯು - ಯೆಹೋವನು ವಾಗ್ದಾನ ಮಾಡಿದ ಪ್ರಕಾರವೇ - ನೆರವೇರುವುದು ಎಷ್ಟೊಂದು ಖಚಿತವಾಗಿರುತ್ತದೆಂದರೆ ಅದು ಈಗಾಗಲೇ ಸಂಭವಿಸಿದೆ ಎಂಬಂತೆ ಮಾತಾಡಲ್ಪಡಬಹುದಾಗಿತ್ತು.

ಯೆಹೋವನ ಸಂಭಾಷಣೆಯ ಅಂತ್ಯವು ದೇಶದ ಸ್ವಾಮ್ಯದ ವ್ಯಾಪ್ತಿಯ ಮೇಲೆ ಮುಖ್ಯ ಗಮನವನ್ನು ಹೊಂದಿತ್ತು, ನೈಋತ್ಯದ ಕಡೆಗೆ **ಐಗುಪ್ತದೇಶದ ನದಿಯ** ವರೆಗೂ ವಿಸ್ತರಿಸುತ್ತೆಂದು ಗಡಿಯನ್ನು ಗೊತ್ತುಪಡಿಸುತ್ತಾನೆ. "ಐಗುಪ್ತದೇಶದ ನದಿ [נָהָר, *ನಾಹಾರ]*" ಎಂಬ ಮಾತು ಹಳೆಯ ಒಡಂಬಡಿಕೆಯಲ್ಲಿ ಒಂದೇ ಒಂದು ಸಾರಿ ಕಾಣಿಸಿಕೊಳ್ಳುತ್ತದೆ, ಮತ್ತು ಅದು ನೈಲ್ ನದಿಯನ್ನು (יְאֹר, *ಯೆವೊರ*) ಸೂಚಿಸುವದಕ್ಕೆ ಬಳಸುವ ಪದವಾಗಿರುವದಿಲ್ಲ. ಅದು ಬಹುಶಃ ಸೀನಾಯಿ ಪರ್ವತದ ವಾಯುವ್ಯದಲ್ಲಿ, ದಕ್ಷಿಣ ಇಸ್ರಾಯೇಲಿನಲ್ಲಿರುವ ಗಾಜಾ ಪ್ರಾಂತ್ಯದಿಂದ ನೈಋತ್ಯಕ್ಕೆ ಸುಮಾರು ಐವತ್ತು ಮೈಲಿಗಳಷ್ಟು ದೂರದ ವಾಡಿ-ಎಲ್-ಅರಿಶ್ ಎಂಬುದರೊಂದಿಗೆ ಗುರುತಿಸಲ್ಪಡುತ್ತದೆ. R. K. Harrisonನ ಪ್ರಕಾರವಾಗಿ, ಅದು ಹೆಚ್ಚು ನಿಖರವಾಗಿ "ಐಗುಪ್ತದ ವಾಡಿ-ರಭಸ ಪ್ರವಾಹ"[16] ಎಂದು ಅರ್ಥನಿರೂಪಣೆ ಮಾಡಲ್ಪಡಬಹುದು. ಇದು ಬಹಳಷ್ಟು ಕಾಲದಲ್ಲಿ ಒಂದು ಒಣಗಿದ ನದಿಪಾತ್ರ ಸ್ಥಳವಾಗಿರುತ್ತಿತ್ತು,[17] ಆದರೆ ಸೀನಾಯಿ ಪರ್ವತಗಳ ಉತ್ತರದ ಕೇಂದ್ರಭಾಗದಲ್ಲಿ ಮಳೆಯಾಗುವ ವೇಳೆ ರಭಸವಾದ ಪ್ರವಾಹವಾಗಿ ಮಾರ್ಪಡುತ್ತಿತ್ತು, ನೀರು ಮೆಡಿಟೆರ್ರೇನಿಯನ್ ಸಮುದ್ರದ ಕಡೆಗೆ ರಭಸವಾಗಿ ಹರಿಯುತ್ತಲಿರುತ್ತಿತ್ತು.

ಮೊದಲ ಬಾರಿಗೆ, ದೇವರು ಅಬ್ರಹಾಮನ ಸಂತತಿಯವರು "ಐಗುಪ್ತದ ನದಿಯಿಂದ" ಈಶಾನ್ಯದಲ್ಲಿರುವ **ಯೂಫ್ರೇಟೀಸ್ ಮಹಾನದಿಯವರೆಗೂ** ಇರುವ ದೇಶವನ್ನು ಸ್ವಾಧೀನಪಡಿಸಿಕೊಳ್ಳುವರು ಎಂಬುದಾಗಿ ವಾಗ್ದಾನ ಮಾಡುತ್ತಾನೆ (ಧರ್ಮೋಪದೇಶಕಾಂಡ 1:7; ಯೆಹೋಶುವ 1:4). ಹೇಗೂ, ನೂರಾರು ವರ್ಷಗಳ ನಂತರವಷ್ಟೆ ದಾವೀದ ಮತ್ತು ಸೊಲೊಮೋನರ ಕಾಲದ ತನಕವೂ ಈ ದೇಶದ ಮೇಲೆ ಇಸ್ರಾಯೇಲ್ಯರು ರಾಜಕೀಯ ಹಾಗೂ ಆರ್ಥಿಕ ನಿಯಂತ್ರಣವನ್ನು ಸಾಧಿಸಿರಲಿಲ್ಲ (2 ಸಮುವೇಲ 8:3-15; 1 ಅರಸು 4:21, 24). ಹಾಗಿದ್ದಾಗ್ಯೂ, ಅದರ ಮೇಲೆ ಅವರಿಗಿರುವ ನಿಯಂತ್ರಣವು ಕೇವಲ ಕೆಲವು ದಶಕಗಳ ವರೆಗೆ ಮಾತ್ರವೇ ಉಳಿದಿತ್ತು ಯಾಕೆಂದರೆ ಸ್ಥಳೀಯ ಜನರು ಬಂಡಾಯವೆದ್ದು ಇಸ್ರಾಯೇಲ್ಯರ ನೊಗವನ್ನು ಕಿತ್ತೆಸೆಯುವದಕ್ಕೆ ಆರಂಭಿಸಿದ್ದರು. ಸೊಲೊಮೋನನ ಮರಣದ ಬಳಿಕ ರಾಜ್ಯವು ಅಧಿಕೃತವಾಗಿ ಇಬ್ಭಾಗವಾಗಿತ್ತು; ಮತ್ತು ನಾಗರೀಕ ಯುದ್ಧದಿಂದಾಗಿ ಅದು ಮತ್ತಷ್ಟು ದುರ್ಬಲಗೊಂಡಿತ್ತು. ಆದದರಿಂದ, ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ದೇಶದಲ್ಲಿನ ಸಾಕಷ್ಟು ಪ್ರಮಾಣದ ಭೂಮಿಯ ಮೇಲಿನ ತಮ್ಮ ನಿಯಂತ್ರಣವನ್ನು ಇಸ್ರಾಯೇಲ್ಯರು ಶಾಶ್ವತವಾಗಿ ಕಳೆದುಕೊಂಡಿದ್ದರು.

**ವಚನ 19.** ಒಡಂಬಡಿಕೆಯ ದರ್ಶನದ ಜೊತೆಗೆ, ಯೆಹೋವನು ಅಬ್ರಹಾಮನಿಗೆ ಈಗ ಸದ್ಯದಲ್ಲಿ ವಾಗ್ದಾನ ದೇಶವನ್ನು ಆಕ್ರಮಿಸಿಕೊಂಡಿರುವಂಥ ಆದರೆ ಆತನ ಸಂತತಿಯವರಿಗೆ ಒಪ್ಪಿಸಲ್ಪಡಲಿದ್ದ ಹತ್ತು ಜನಾಂಗಗಳ ಹೆಸರುಗಳನ್ನು ನೀಡುತ್ತಾನೆ. ಈ ಪಟ್ಟಿಯು 19ನೇ ವಚನದಿಂದ ಆರಂಭವಾಗುವದಾಗಿದ್ದು, ಸಂಪೂರ್ಣತೆಗೆ ಸಂಕೇತವಾಗಿರಬಹುದಾಗಿದೆ.

ಹೆಸರಿಸಲ್ಪಟ್ಟಿರುವವರು ಕಾನಾನಿನಲ್ಲಿರುವ ಸಕಲ ನಿವಾಸಿಗಳನ್ನು ಪ್ರತಿನಿಧಿಸುತ್ತವೆ. ಅನಂತರದಲ್ಲಿ ಹಳೆಯ ಒಡಂಬಡಿಕೆಯೊಳಗೆ ಕಂಡು ಬರುವ ಇದೇ ರೀತಿಯ ಇಪ್ಪತ್ತೇಳು ಪಟ್ಟಿಗಳೊಳಗೆ, ಜನರ ಗುಂಪುಗಳ ಸಂಖ್ಯೆಯು ಎರಡರಿಂದ ಹನ್ನೆರಡರ ನಡುವೆ ಇರುತ್ತವೆ, ಅಲ್ಲಿ ಬಯಸುವ ನಿರ್ದಿಷ್ಟತೆಗನುಗುಣವಾಗಿ ಇರುತ್ತದೆ.[18] ಬಹಳ ಸಾಮಾನ್ಯವಾದ ಪಟ್ಟಿಯು ಆರು ಜನಾಂಗಗಳನ್ನಾಗಲಿ (ವಿಮೋಚನಕಾಂಡ 3:8, 17; 23:23; 33:2; 34:11; ಧರ್ಮೋಪದೇಶಕಾಂಡ 20:17; ಯೆಹೋಶುವ 9:1) ಅಥವಾ ಏಳು ಜನಾಂಗಗಳನ್ನಾಗಲಿ ಒಳಗೊಂಡಿರುತ್ತವೆ (ಧರ್ಮೋ 7:1; ಯೆಹೋಶುವ 3:10; 24:11; ನೋಡಿರಿ ಅಪೊಸ್ತಲರ ಕೃತ್ಯಗಳು 13:19). ದೇವರು ಅವರನ್ನು ಕಾನಾನ್ ದೇಶದಿಂದ ಹೊರಕ್ಕೆ ಹಾಕುವೆನೆಂದು ಹೇಳಿದನು. ಆದಿಕಾಂಡ 15ನೇ ಅಧ್ಯಾಯದಲ್ಲಿರುವ ಏಕೈಕ ಪಟ್ಟಿಯು ಮಾತ್ರವೇ ಹತ್ತು ಹೆಸರುಗಳನ್ನು ಒಳಗೊಂಡಿದೆ, ಮತ್ತು ಈ ಪಟ್ಟಿಯಲ್ಲಿ ಮಾತ್ರವೇ **ಕೇನಿಯರೂ ಕೆನಿಜೀಯರೂ ಕದ್ಮೋನಿಯರೂ** ಕಾಣಿಸಿಕೊಳ್ಳುತ್ತಾರೆ, ಇವರು ಅಬ್ರಹಾಮನ ಕಾಲದ ವೇಳೆ ಕಾನಾನಿನ ದಕ್ಷಿಣ ಭಾಗದಲ್ಲಿ ವಾಸಿಸುತ್ತಿರಬಹುದಾದ ಜನರ ಗುಂಪುಗಳಾಗಿದ್ದಾರೆ.

ಇವರಲ್ಲಿ ಎಲ್ಲಾ ಮೂರು ಗುಂಪುಗಳವರು ಕ್ರಮೇಣದಲ್ಲಿ ಯೆಹೂದದ ಗೋತ್ರದೊಳಗೆ ಒಂದುಗೂಡಿರಬಹುದಾಗಿದೆ; ಹೇಗೂ, ಕದ್ಮೋನಿಯರ ಬೈಬಲಿನೊಳಗೆ ಇಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತಾರೆ, ಮತ್ತು ಅವರ ಬಗ್ಗೆ ಬೇರೆ ಯಾವ ವಿಷಯವೂ ತಿಳಿದು ಬಂದಿರುವದಿಲ್ಲ. ಕೇನಿಯರ ಕುರಿತಾಗಿ ನಮಗೆ ಕೇವಲ ಮೂರು ಕ್ಲುಪ್ತವಾದ ಉಲ್ಲೇಖಗಳಿದ್ದು ಅವರ ಬಗ್ಗೆ ಅಷ್ಟಾಗಿ ಹೆಚ್ಚಿನ ಮಾಹಿತಿ ಇರುವದಿಲ್ಲ. ಅವರು ನೆಗೆವ್ ಎಂಬಲ್ಲಿ ವಾಸಿಸುತ್ತಿದ್ದರು (ಅರಣ್ಯಕಾಂಡ 24:21; 1 ಸಮುವೇಲ 27:10), ಅವರಲ್ಲಿ ಕೆಲವರು ಉತ್ತರದ ಕಡೆಗೆ ಜೆಬೂಲೂನ ಗೋತ್ರದರ ಪ್ರಾಂತ್ಯದೊಳಗೆ ಸ್ಥಳಾಂತರಗೊಂಡರು (ನ್ಯಾಯಸ್ಥಾಪಕ 4:11-17). ಕೆನಿಜೀಯರು ಕಾಲೇಬನ ಕಾರಣದಿಂದ ಮನ್ನಣೆಯನ್ನು ಪಡೆದುಕೊಂಡ ಒಂದು ಜನಾಂಗವಾಗಿದ್ದರು, ಅವರ ಪೂರ್ವಜರು ಆತನಿಂದ ಬಂದವರಾಗಿದ್ದರು (ಅರಣ್ಯಕಾಂಡ 32:12; ಯೆಹೋಶುವ 14:6, 14). ಕಾಲೇಬನು ಹನ್ನೆರಡು ಮಂದಿ ಗೂಢಾಚಾರರಲ್ಲಿ ಒಬ್ಬನಾಗಿದ್ದನು; ಯೆಹೋಶುವನ ಜೊತೆಯಾಗಿ ಆತನು ಕಾನಾನ್ ದೇಶದ ಬಗ್ಗೆ ಒಳ್ಳೇ ವರದಿಯನ್ನು ತೆಗೆದುಕೊಂಡು ಬಂದಿದ್ದನು (ಅರಣ್ಯಕಾಂಡ 13:30; 14:6-9, 24, 30). ಅಲ್ಲದೆ ವಿಜಯದಲ್ಲಿ ಆತನು ಸಹ ಯೆಹೋಶುವನ ಜೊತೆಗೂಡಿ ಯುದ್ಧ ಮಾಡಿದ್ದನು, ಮತ್ತು ಆತನು ಒತ್ನೀಯೇಲನ ಸಂಬಂಧಿಕನಾಗಿದ್ದನು, ಈ ಒತ್ನೀಯೇಲನು ನ್ಯಾಯಸ್ಥಾಪಕರಲ್ಲಿ ಒಬ್ಬನಾಗಿದ್ದವನು (ನ್ಯಾಯಸ್ಥಾಪಕ 1:11-20).

**ವಚನಗಳು 20, 21.** ಕಾನಾನ್ ದೇಶದಲ್ಲಿ ನಿವಾಸ ಮಾಡುತ್ತಿದ್ದ ಜನರ ಪಟ್ಟಿಯೊಳಗೆ **ಹಿತ್ತಿಯರು** ಕಾಣಿಸಿಕೊಳ್ಳುತ್ತಾರೆ. ಅವರು ಹೆಬ್ರೋನಿನನ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದರು, ಅಲ್ಲಿಯೇ ಅಬ್ರಹಾಮನು ಅನಂತರದಲ್ಲಿ ನೆಲೆಗೊಂಡಿದ್ದನು (ನೋಡಿರಿ 23:1-20). **ಪೆರಿಜೀಯರು** ಕಾನಾನ್ಯ ಜನಾಂಗಗಳ ಪಟ್ಟಿಯಲ್ಲಿ ನಿಯತ ಕ್ರಮವಾಗಿ ಕಾಣಿಸಿಕೊಳ್ಳುವ ಇನ್ನೊಂದು ಹೆಸರಾಗಿದೆ. ಈ ಗೋತ್ರದವರು ದೇಶದ ಮಧ್ಯಭಾಗದ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದ್ದರು (ಯೆಹೋಶುವ 11:3) ಮತ್ತು ಎಫ್ರಾಯೀಮ್ ಮತ್ತು ಮನಸ್ಸೆಯವರ ಜನರಿಂದ ಹೊರಕ್ಕೆ ಓಡಿಸಲ್ಪಟ್ಟರು (ಯೆಹೋಶುವ 17:15-18). **ರೆಫಾಯರು** ಸಿರಿಯದ ತೆಂಕಲಿನಲ್ಲಿ ಮತ್ತು ಯೆರೂಸಲೇಮಿಗೆ ದಕ್ಷಿಣದಲ್ಲಿ ಚದುರಿ ಹೋಗಿದ್ದರು, ಆದರೆ ಅವರಲ್ಲಿ ಬಹುಪಾಲು ಜನರು ಬಾಷಾನಿನಲ್ಲಿ, ಗಲಿಲಾಯ ಸಮುದ್ರದ ಪೂರ್ವ ದಿಕ್ಕಿನ ಕಡೆಗೆ ವಾಸವಾಗಿದ್ದರು (ನೋಡಿರಿ 14:5). ಇಲ್ಲಿ ಹೆಸರಿಸಲ್ಪಟ್ಟಿರುವ ಇತರರು ಎಂದರೆ **ಅಮೋರಿಯರೂ ಕಾನಾನ್ಯರೂ**

**ಗಿರ್ಗಾಷಿಯರೂ ಯೆಬೂಸಿಯರೂ** ಮುಂತಾದ ಜನಾಂಗಗಳವರು (10:15, 16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

## ಅನ್ವಯಿಸುವಿಕೆ

### ಸುರಕ್ಷತೆ ಮತ್ತು ಒದಗಿಸುವಿಕೆ (ಅಧ್ಯಾಯ 15)

*ಆತನ ಭಯ ಮತ್ತು ಹತಾಶೆ.* ಅಬ್ರಹಾಮನು ಭಯಭರಿತನಾಗಿದ್ದನು. ಆತನು ಮುಂದಿರುವಂಥ ಅಪಾಯ ಗ್ರಹಿಸಿಕೊಂಡಿದ್ದನು ಮತ್ತು ಆತನ ಸುರಕ್ಷತೆಯ ವಿಷಯದಲ್ಲಿ ಭಯಗೊಂಡಿರುವ ಸಾಧ್ಯತೆಯಿದೆ. ಆತನು ಇತ್ತೀಚೆಗಷ್ಟೇ ನಾಲ್ಕು ಮಂದಿ ಅರಸರ ವಿರುದ್ಧ ಅಸಂಭಾವ್ಯವಾದ ಜಯವನ್ನು ಗಳಿಸಿದವನಾಗಿ ಹಿಂದಿರುಗಿ ಬಂದಿದ್ದನು (14:16-24), ಆದರೆ ಅವರು ತಮಗಿಂದ ಬಲಾಢ್ಯವಾದ ಸೈನ್ಯಗಳನ್ನು ಕರೆದುಕೊಂಡು ಹಿಂದಿರುಗಿ ಬಂದು ಬಿಟ್ಟರೆ ಏನು ಗತಿಯಾಗುವುದು? ಹೆಚ್ಚು ಸಂಭಾವ್ಯವಾಗಿ, ಈ ಹಂತದಲ್ಲಿ ತಾನು ಈಗ ಎಂಭತ್ತು ವಯಸ್ಸಿನ ಆಸುಪಾಸಿನಲ್ಲಿದ್ದೇನೆ[19] ಮತ್ತು ತನಗೆ ಒಬ್ಬ ಮಗನಿಲ್ಲ ಎಂಬುದನ್ನು ಗ್ರಹಿಸಿಕೊಂಡಿದ್ದರಿಂದ ಆತನಿಗೆ ಕಳಕಳಿ ಉಂಟಾಗಿರಬಹುದಾಗಿದೆ.

ಕೆಲವು ಸಾರಿ ದುಷ್ಟ ಶಕ್ತಿಗಳ ವಿರುದ್ಧ ಒಂದು ದೊಡ್ಡ ಬಿಡುಗಡೆ ಅಥವಾ ಜಯವನ್ನು ಅನುಭವಿಸಿದ ನಂತರ ಜನರು ಇದೇ ವಿಧವಾದ ಹತಾಶೆ ಮತ್ತು ಭಯಗಳನ್ನು ಅನುಭವಿಸುತ್ತಾರೆ. ದೃಷ್ಟಾಂತಗಳನ್ನು (1) ಮೋಶೆಯಲ್ಲಿ ಕಾಣಬಹುದು, ಆತನು ದೇವರ ಮನುಷ್ಯನಾಗಿದ್ದು, ಸಮುದ್ರದ ಬಳಿಯಲ್ಲಿ ಯೆಹೋವನು ಅವರನ್ನು ಫರೋಹನ ಸೈನ್ಯದಿಂದ ಬಿಡುಗಡೆಗೊಳಿಸಿ ಇಸ್ರಾಯೇಲ್ಯರಿಗೆ ಒದಗಿಸಿ ಕೊಟ್ಟ ಬಳಿಕ ಹೀಗೆ ಸಂಭವಿಸಿತ್ತು (ವಿಮೋಚನಕಾಂಡ 17:4); (2) ದಾವೀದನು, ದೇವರಿಗೆ ಪ್ರಿಯನಾದ ಮನುಷ್ಯನಾಗಿದ್ದವನು, ಸೌಲನ ಪ್ರಾಣವನ್ನು ಉಳಿಸುವ ಮೂಲಕ ನೀತಿ ಮತ್ತು ಕರುಣೆಗಳನ್ನು ತೋರ್ಪಡಿಸಿದ ಬಳಿಕ ಆತನಲ್ಲಿ ಭಯವು ಆವರಿಸಿತ್ತು (1 ಸಮುವೇಲ 27:1); ಮತ್ತು (3) ದೇವರ ಪ್ರವಾದಿಯಾದ ಎಲೀಯನಲ್ಲಿ ಕಾಣುತ್ತೇವೆ, ಬಾಳ್ ಮತ್ತು ಅಶೇರ ದೇವರುಗಳ ಪ್ರವಾದಿಗಳ ಮೇಲೆ ಯೆಹೋವನು ಜಯ ಹೊಂದಿ ಈತನ ಸೇವೆಯನ್ನು ಎತ್ತಿ ಹಿಡಿದ ಬಳಿಕ ಆತನಲ್ಲಿ ಭಯವು ಆವರಿಸಿತ್ತು (1 ಅರಸು 19:1-14).

ನಂಬಿಕೆಯ ಜನರು ಭಾವಗಳಿರುವ ಜನರು ಸಹ ಆಗಿರುತ್ತಾರೆ, ಮತ್ತು ಆ ಭಾವಗಳನ್ನು ಅಲಕ್ಷ್ಯ ಮಾಡಬಾರದು, ನಿರ್ಲಕ್ಷ್ಯಿಸಬಾರದು, ಅಥವಾ ಅಲ್ಲಗಳೆಯಬಾರದು. ಹೇಗೂ, ಭಾವನಾತ್ಮಕತೆಯಲ್ಲಿ ಮಿತಿಮೀರುವದರ ಕಾರಣದಿಂದ, ನಾವು ಕೆಲವು ಸಾರಿ ಅತಿರೇಕದ ವಿರುದ್ಧ ದಿಕ್ಕಿನಲ್ಲಿ ಸಾಗಿ ಕ್ರೈಸ್ತತ್ವವನ್ನು ಬುದ್ಧಿ ಮತ್ತು ಚಿತ್ತಕ್ಕೆ ಸಂಬಂಧ ಪಟ್ಟ ವಿಷಯವೆಂದು ಕಾಣುವದಕ್ಕೆ ಪ್ರಯತ್ನಿಸುವ ಒಲವು ಹೊಂದಿರುತ್ತೇವೆ; ನಾವು ಎಲ್ಲಾ ಭಾವಗಳ್ನು ಸಂದೇಹದಿಂದ ಕಾಣುತ್ತಿರಬಹುದಾಗಿದೆ. ಈ ಮನೋಭಾವವು ಜನರು ಸಂದೇಹಗಳನ್ನು, ಭಯಗಳನ್ನು, ಅಥವಾ ಹತಾಶೆಯನ್ನು ಅನುಭವಿಸುವಾಗ ತಮ್ಮ ಬಗ್ಗೆ ಅಪರಾಧಭಾವನೆ ಅಥವಾ ಅಸುರಕ್ಷತೆಯ ಭಾವನೆಯನ್ನು ಅನುಭವಿಸುತ್ತಾರೆ; ಆದರೆ ದೇವರು ಪ್ರೀತಿಸ್ವರೂಪಿಯಾದ ಪರಲೋಕದ ತಂದೆಯಾಗಿದ್ದಾನೆ, ಮತ್ತು ಆತನೊಂದಿಗೆ ನಾವು ಒಂದು ಯಥಾರ್ಥವಾದ ಸಂಬಂಧವನ್ನಿಟ್ಟುಕೊಳ್ಳಬೇಕೆಂದು, ನಮ್ಮ ಭಾರಗಳನ್ನು ಹಾಗೂ ಚಿಂತೆಗಳನ್ನು ಹಂಚಿಕೊಳ್ಳಬೇಕೆಂದು ಬಯಸುತ್ತಾನೆ. ಆತನ ಜನರು ಅವರ ನಂಬಿಕೆಯಲ್ಲಿ ಹೋರಾಟವನ್ನು ಹಾಗೂ ಭಾವನಾತ್ಮಕವಾಗಿ ಬಾಧೆಯನ್ನು ಅನುಭವಿಸುತ್ತಿರುವ ವೇಳೆ

ಸಂತೋಷವುಳ್ಳವರಂತೆ ನಟಿಸಬೇಕೆಂದು ದೇವರು ಬಯಸುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ನಾವು ನಮ್ಮ ಚಿಂತೆಯನ್ನು ಆತನ ಮೇಲೆ ಹಾಕಬೇಕೆಂದು ಆತನು ಬಯಸುತ್ತಾನೆ ಯಾಕೆಂದರೆ ಆತನು ನಿಜವಾಗಿಯೂ ನಮ್ಮ ಬಗ್ಗೆ ಕಾಳಜಿಯುಳ್ಳವನಾಗಿದ್ದಾನೆ (1 ಪೇತ್ರ 5:7). ಸಂದೇಹ ಮತ್ತು ಭಯದ ಸಮಯಗಳಲ್ಲಿ ಜನರು ದೇವರನ್ನು ಕೂಗಿಕೊಳ್ಳುವಾಗ, ಅವರಿಗೆ ಆತನಿಂದ ಮತ್ತು ಆತನ ಜನರಿಂದ ಪ್ರೀತಿಪೂರ್ವಕವಾದ ಭರವಸ ಮತ್ತು ಪ್ರೋತ್ಸಾಹಗಳ ಅಗತ್ಯವಿರುತ್ತವೆ.

*ದೇವರಿಂದ ಆತನಿಗೆ ಆದರಣೆ.* ಅಬ್ರಹಾಮನು ಭಯಗಳನ್ನು ಮತ್ತು ಸಂಶಯಗಳನ್ನು ಅನುಭವಿಸುತ್ತಿದ್ದಾನೆಂದು ಯೆಹೋವನಿಗೆ ಗೊತ್ತಿತ್ತು. ಆತನು ದೂಷಿಸುವವನಾಗಿ ಅವನನ್ನು ಮಾತಾಡಿಸಲಿಲ್ಲ, ಆದರೆ ಆತನ ಭಯಗಳನ್ನು ಹೋಗಲಾಡಿಸುವ ದರ್ಶನದೊಂದಿಗೆ ಮಾತಾಡಿಸುತ್ತಾನೆ. ಆದಿಕಾಂಡ 15ನೇ ಅಧ್ಯಾಯವು ಹೀಗೆ ಹೇಳುವ ಮೂಲಕ ಆರಂಭಗೊಳ್ಳುತ್ತದೆ, "ಅಬ್ರಾಮನಿಗೆ ದರ್ಶನದಲ್ಲಿ ಯೆಹೋವನ ವಾಕ್ಯವುಂಟಾಯಿತು; ಏನಂದರೆ - ಅಬ್ರಾಮನೇ, ಭಯಪಡಬೇಡ" (15:1). ಬೈಬಲಿನಲ್ಲಿ "ಭಯಪಡಬೇಡ" ಎಂಬ ಪ್ರೋತ್ಸಾಹಕರ ಮಾತುಗಳು ಇದೇ ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತವೆ. ದೇವರು ಅವುಗಳನ್ನು ಹಲವಾರು ಸಂದರ್ಭಗಳಲ್ಲಿ ಪುನರುಚ್ಚರಿಸುತ್ತಾನೆ: ಇಸಾಕನಿಗೆ, ಗೇರಾರಿನಲ್ಲಿ ಕೆಲವು ದನಕಾಯುವವರೊಂದಿಗೆ ವ್ಯಾಜ್ಯವಾದ ಬಳಿಕ ಈ ಮಾತುಗಳು ಹೇಳಲ್ಪಟ್ಟವು (26:24); ಯಾಕೋಬನಿಗೆ, ಆತನು ಐಗುಪ್ತಕ್ಕೆ ಸ್ಥಳಾಂತರಗೊಳ್ಳುವದರ ವಿಷಯವಾಗಿ ಹೇಳಲ್ಪಟ್ಟವು (46:3); ಮತ್ತು ಇಸ್ರಾಯೇಲ್ಯರು ಐಗುಪ್ತದಿಂದ ಹೊರಟು ಬರುವ ವೇಳೆ ಅರಣ್ಯದಲ್ಲಿದ್ದಾಗ ಹಲವಾರು ಸಾರಿ ಹೇಳಲ್ಪಟ್ಟವು (ವಿಮೋಚನಕಾಂಡ 14:13; 20:20; ಅರಣ್ಯಕಾಂಡ 14:9; ಧರ್ಮೋಪದೇಶಕಾಂಡ 1:21). ಪ್ರತಿಯೊಂದು ಪರಿಸ್ಥಿತಿಯಲ್ಲಿ, ದೇವರು ತನ್ನನ್ನು "ಇರುವಾತನು" ಎಂದು ಗುರುತು ಹೇಳಿಕೊಂಡನು ಅಥವಾ ಮೋಶೆಯು ಆತನನ್ನು ದೇವರು ಅಥವಾ "ಯೆಹೋವ" ಎಂದು ಕರೆದನು ಮತ್ತು ಆತನು ತನ್ನ ಜನರಿಗೋಸ್ಕರ ಏನು ಮಾಡಿದ್ದಾನೆ ಅಥವಾ ಮಾಡುವನು ಎಂಬುದನ್ನು ತಿಳಿಸಿದನು.

ಹೊಸ ಒಡಂಬಡಿಕೆಯೊಳಗೆ ಅನೇಕ ಸಾರಿ, ಸ್ವತಃ ಯೇಸು ಅಥವಾ ದೇವದೂತರು "ಭಯ ಪಡಬೇಡ" ಎಂಬ ಮಾತನ್ನು ಬಳಸಿದರು. ಈ ಮಾತುಗಳು ದೇವರ ಪ್ರಸನ್ನತೆಯು ಆತನ ಜನರ ಸಂಗಡವಿರುತ್ತದೆ ಮತ್ತು ಆತನು ಅವರನ್ನು ಆಶೀರ್ವದಿಸಲು ಬಯಸುತ್ತಾನೆ ಎಂಬುದನ್ನು ದೃಢಪಡಿಸಿದವು. ಈ ಆದರಣೆಯುಂಟು ಮಾಡುವ ಹೇಳಿಕೆಯನ್ನು ಜಕರೀಯನಿಗೆ, ಯೋಸೇಫನಿಗೆ, ಮರಿಯಳಿಗೆ, ಶಿಷ್ಯರಿಗೆ, ಪೌಲ, ಮತ್ತು ಯೋಹಾನನಿಗೆ ಹೇಳಲ್ಪಟ್ಟಿತು.[20] ದೇವರು ಅಬ್ರಹಾಮನಿಗೆ ಭಯ ಪಡಬೇಡ ಎಂದು ಹೇಳಿದಾಗ, ಆತನ ಅತ್ಯಂಥ ದೊಡ್ಡ ಅಗತ್ಯತೆ ಎಂದರೆ ಇನ್ನಷ್ಟು ವಾಗ್ದಾನಗಳನ್ನು ಮಾಡುವದಲ್ಲ, ಆದರೆ ಯೆಹೋವನು ಆತನ ಸಂಗಡ ಇದ್ದಾನೆ ಮತ್ತು ಆತನನ್ನು ಆಶೀರ್ವದಿಸುವದಕ್ಕಾಗಿ ನಿರಂತರವಾಗಿ ಆತನ ಜೀವಿತದಲ್ಲಿ ಕಾರ್ಯ ಮಾಡುತ್ತಲಿರುವನು ಎಂಬ ಪುನರಾಶ್ವಾಸನೆಯು ಆತನಿಗೆ ಬೇಕಿತ್ತು.

ದೇವರು ಮುಂದುವರೆಸುತ್ತಾ ಹೀಗೆ ಹೇಳಿದನು, "ನಾನು ನಿನಗೆ ಗುರಾಣಿಯಾಗಿದ್ದೇನೆ [מָגֵן, *ಮಾಗೆನ*]" (15:1). ಈ ಮಾತಿನ ಮೂಲಕ, ನಾಶನದ ಸಮಯಗಳಲ್ಲಿ ಆತನು ಅಬ್ರಹಾಮನಿಗೆ ಭದ್ರತೆಯನ್ನು ಒದಗಿಸುವ ಗುರಾಣಿಯಾಗಿರುವೆನು ಎಂಬುದು ಆತನ ತಾತ್ಪರ್ಯವಾಗಿತ್ತು. ಹೊಸ ಒಡಂಬಡಿಕೆಯಲ್ಲಿ, ಪೌಲನು ಕ್ರೈಸ್ತರಿಗೆ "ಕೆಡುಕನ ಅಗ್ನಿಬಾಣಗಳನ್ನೆಲ್ಲಾ ಆರಿಸುವದಕ್ಕೆ ಶಕ್ತರಾಗು" ವದಕ್ಕೆ "ನಂಬಿಕೆಯೆಂಬ ಗುರಾಣಿಯನ್ನು" ಹಿಡಿದುಕೊಳ್ಳಿರಿ ಎಂದು ಬೇಡಿಕೊಂಡನು (ಎಫೆಸ 6:16).

ಅಂತಹ ಸಲಹೆಯು ಕೆಲವು ಸದುದ್ದೇಶದ ಕ್ರೈಸ್ತರಿಗೆ ತದ್ವಿರುದ್ಧವಾಗಿರುತ್ತದೆ. ಅವರು ದೇವರಲ್ಲಿ ಮತ್ತು ಕ್ರಿಸ್ತನಲ್ಲಿನ ನಂಬಿಕೆಯು ಎಷ್ಟೊಂದು ದುರ್ಬಲವೆಂದರೆ ಅದಕ್ಕೆ ಯಾವದೇ ಎದುರಿಸುವಿಕೆ ಅಥವಾ ಗಂಡಾಂತರ ಉಂಟಾಗದಂತೆ ನೋಡಿಕೊಳ್ಳಬೇಕು ಮತ್ತು ಎಲ್ಲಾ ಸಮಯಗಳಲ್ಲಿಯೂ ಅದನ್ನು ಕಾಪಾಡಿಕೊಳ್ಳಬೇಕು ಎಂಬುದಾಗಿ ಅವರು ಯೋಚಿಸುತ್ತಾರೆ. ಸಾಂಕೇತಿಕವಾಗಿ ಮಾತಾಡುವದಾದರೆ, ನಮ್ಮ ನಂಬಿಕೆಯನ್ನು ಯಾರೊಬ್ಬರೂ ನಮ್ಮಿಂದ ಕಸಿದುಕೊಳ್ಳದಂತೆ ಅದನ್ನು ನಮ್ಮ ಅಂಗಿಗಳೊಳಗೆ (ಆಯುಧ) ಬಚ್ಚಿಡಬೇಕು (ಗುರಾಣಿಯಲ್ಲಿಡಬೇಕು) ಎಂದು ನಮಗೆ ಹೇಳುವರು. ಪೌಲನು ಇದಕ್ಕೆ ತದ್ವಿರುದ್ಧವಾದದ್ದನ್ನು ಹೇಳುತ್ತಿರುವಂತೆ ಕಾಣಿಸುತ್ತದೆ, ತತ್ಪರಿಣಾಮವಾಗಿ ಆತನು ನಮಗೆ ಹೇಳುವದೇನೆಂದರೆ, "ನೀವು ನಂಬಿಕೆಯನ್ನು ಕಾಪಾಡುವ [ನಿಮ್ಮ ಗುರಾಣಿ] ಅಗತ್ಯವಿಲ್ಲ. ಅದನ್ನು ನಿಮ್ಮ ಮುಂದೆ ಇಡಿರಿ ಮತ್ತು ಅದನ್ನು ಅಭ್ಯಾಸಿಸಿರಿ, ಮತ್ತು ಅದು ನಿಮ್ಮನ್ನು ಕಾಪಾಡುವುದು!"

ತರುವಾಯ, ದೇವರು ಒಂದು ಅತ್ಯಧಿಕ "ಬಹುಮಾನ" ದೊರಕುವುದು ಎಂದು ವಾಗ್ದಾನ ಮಾಡುವ ಮೂಲಕ ಸಂತೈಸಿದನು (15:1). ಈ ಸಂದರ್ಭದಲ್ಲಿ, ಮೂಲಪಿತೃವು ಅಂತಹ ವಾಗ್ದಾನದಿಂದ ಸಂತೃಪ್ತನಾಗಿರಲಿಲ್ಲ. ಅದರರ್ಥವು ಎಷ್ಟೋ ವರ್ಷಗಳ ಮುಂಚೆ ಊರ್ ಪಟ್ಟಣವನ್ನು ಬಿಟ್ಟು ಬಂದ ದಿನದಿಂದ ಯೆಹೋವನು ಆತನಿಗೋಸ್ಕರ ಇದುವರೆಗೂ ಮಾಡುತ್ತಾ ಬಂದಿರುವದನ್ನು ಶ್ಲಾಘಿಸಲಿಲ್ಲ ಎಂದಲ್ಲ. ನಿಸ್ಸಂದೇಹಕರವಾಗಿಯೂ, ದೇವರು ತನಗೆ ಅತ್ಯಧಿಕ ಐಶ್ವರ್ಯವನ್ನು, ಮಂದೆಗಳನ್ನು, ಮತ್ತು ಹಿಂಡುಗಳನ್ನು ಕೊಟ್ಟು ಆಶೀರ್ವದಿಸಿದ್ದಕ್ಕಾಗಿ, ಆತನ ವೈರಿಗಳಿಂದ ತಪ್ಪಿಸಿ ಕಾಪಾಡಿದ್ದಕ್ಕಾಗಿ, ಮತ್ತು ಕಾನಾನ್ ದೇಶದ ವಾಗ್ದಾನಕ್ಕಾಗಿ ದೇವರಿಗೆ ಕೃತಜ್ಞತೆಯುಳ್ಳವನಾಗಿದ್ದನು; ಆದಾಗ್ಯೂ ಈ ಆಶೀರ್ವಾದಗಳನ್ನು ಬಾಧ್ಯವಾಗಿ ಹೊಂದಿಕೊಳ್ಳಲು ಆತನಿಗೆ ವಾರಸುದಾರನೇ ಇರಲಿಲ್ಲ. ಈ ಆಳವಾದ ಚಿಂತೆಯು ಅಬ್ರಹಾಮನನ್ನು ದೇವರ ಮುಂದೆ ಯಥಾರ್ಥವಾಗಿದ್ದು ತನ್ನ ಹೃದಯದಲ್ಲಿರುವದನ್ನು ಬಯಲುಗೊಳಿಸುವಂತೆ ನಡಿಸಿತ್ತು.

*ಈತನು ದೇವರ ವಾಗ್ದಾನದ ವಿಷಯದಲ್ಲಿ ನಿರಾಶೆಗೊಂಡಿದ್ದು.* ಮುಖ್ಯವಾಗಿ, ಅಬ್ರಹಾಮನು ತನಗೆ ಸ್ವಾಭಾವಿಕ ಬಾಧ್ಯಸ್ಥನು ಇಲ್ಲವೆಂಬ ಕಾರಣಕ್ಕಾಗಿ ನಿರಾಶೆಗೊಂಡಿದ್ದನು. ಪ್ರಾಚೀನ ಕಾಲಗಳಲ್ಲಿ, ಒಂದು ದಂಪತಿಯು ಮದುವೆ ಮಾಡಿಕೊಂಡಾಗ, ಯೆಹೋವನು ತಮಗೆ ಮಕ್ಕಳನ್ನು ನೀಡಿ ಆಶೀರ್ವದಿಸಲಿ ಎಂಬುದೇ ಅವರ ಪ್ರಮುಖವಾದ ಹಂಬಲಿಕೆಯಾಗಿರುತ್ತಿತ್ತು. ಮದುವೆ ಮಾಡಿಕೊಂಡ ದಂಪತಿಗೆ ಮಕ್ಕಳನ್ನು ಪಡೆಯಲು ಸಾಧ್ಯವಾಗದಿದ್ದಾಗ, ಅವರ ಬಂಜೆತನವನ್ನು ಅವರ ಮೇಲಿರುವ ಒಂದು ಶಾಪವೆಂಬಂತೆ ಕಾಣಲಾಗುತ್ತಿತ್ತು (25:21; 30:1, 2; 1 ಸಮುವೇಲ 1:1, 2, 7, 19).

ಅಬ್ರಹಾಮನು ಒಂದು ಬಲಿಷ್ಠ ಜನಾಂಗವಾಗುವನು ಎಂದು ದೇವರು ಸತತವಾಗಿ ವಾಗ್ದಾನ ಮಾಡಿದ್ದಾಗ್ಯೂ, ಆತನು ಎಂಭತ್ತು ವಯಸ್ಸಿನ ಆಸುಪಾಸಿನಲ್ಲಿದ್ದನು ಮತ್ತು ಸಾರಳು - ಎಪ್ಪತ್ತರ ಆಸುಪಾಸಿನಲ್ಲಿದ್ದಳು - ಬಂಜೆಯಾಗಿದ್ದಳು (ನೋಡಿರಿ 12:4; 16:3; 17:17). ಸಂತಾನವಿಲ್ಲದೆ ಇದ್ದದ್ದು ಒಂದು ಭಾರವಾದ ಹೊರೆಯಾಗಿದ್ದು ಅಬ್ರಹಾಮನ ಹೃದಯದಕ್ಕೆ ದೊಡ್ಡ ವೇದನೆಯನ್ನುಂಟು ಮಾಡಿತ್ತು. ಅವನಿಗೆ ಮತ್ತು ಆತನ ಹೆಂಡತಿಗೆ ತ್ವರಿತವಾಗಿ ವಯಸ್ಸಾಗುತ್ತಿದ್ದದರಿಂದ, ಈ ವಾಗ್ದಾನವನ್ನು ಯೆಹೋವನು ಹೇಗೆ ನೆರವೇರಿಸುವನೆಂಬುದನ್ನು ಆತನಿಗೆ ಊಹಿಸಿಕೊಳ್ಳಲಾಗಲಿಲ್ಲ. ಮೂಲಪಿತೃವು ಅಷ್ಟೊಂದು ವರ್ಷಗಳ ಕಾಲ ವಿಳಂಬವಾದ ನಿರೀಕ್ಷೆಯೊಂದಿಗೆ ಕಾದುಕೊಂಡಿದ್ದನಾದ್ದರಿಂದ, ಆತನ ಆತ್ಮವನ್ನು ನಿರಾಶೆಯು ತುಂಬಿಕೊಂಡಿತು; ಸ್ವಾಭಾವಿಕವಾಗಿಯೇ ಅದರ ಹಿಂದೆ ಹತಾಶೆಯು ಉಂಟಾಗಿತ್ತು. ದೇವರು

ಅವನಿಗೊಬ್ಬ ಬಾಧ್ಯಸ್ಥನನ್ನು ಕೊಡುವದಕ್ಕೆ ಏನನ್ನೂ ಮಾಡುತ್ತಿಲ್ಲವೆನೋ ಎಂಬಂತೆ ಕಾಣಿಸುತ್ತಿತ್ತು; ಆದ್ದರಿಂದ ಅಬ್ರಹಾಮನು ದೇವರ ಮುಂದೆ ತಾನು ಮಕ್ಕಳಿಲ್ಲದವನು ಎಂದು ದೂರು ಹೇಳಿದನು ಮತ್ತು ತಾನು ದಮಸ್ಕದ ಎಲೀಯೆಜರನನ್ನು ನನ್ನ ಬಾಧ್ಯಸ್ಥನನ್ನಾಗಿ ಮಾಡಿದ್ದೇನೆಂದು ತಿಳಿಸಿದನು (15:2, 3).

ದೇವರು ತನ್ನ ವಾಗ್ದಾನವನ್ನು ಹೆಚ್ಚು ನಿರ್ದಿಷ್ಟವಾಗಿ ತಿಳಿಸುವ ಮೂಲಕ ಅಬ್ರಹಾಮನನ್ನು ಧೈರ್ಯಪಡಿಸಿದನು. ಅಬ್ರಹಾಮನಿಗೆ ಮತ್ತೊಂದಾವರ್ತಿ ಯೆಹೋವನ ವಾಕ್ಯವು ಉಂಟಾದಾಗ, ಎಲೀಯೆಜರನು ಆತನ ಬಾಧ್ಯಸ್ಥನಾಗಿರಲು ಆಗುವದಿಲ್ಲ ಎಂದು ಆತನಿಗೆ ತಿಳಿಸಲಾಯಿತು. ಆತನ ಶರೀರದಿಂದಲೇ ಒಬ್ಬ ಮಗುವು ಹುಟ್ಟುವನು, ಮತ್ತು ಆ ಮಗುವಿನ ಸಂತತಿಯವರು ಅಬ್ರಹಾಮನಿಗೆ ಮಾಡಿದ್ದ ಎಲ್ಲಾ ಆಶೀರ್ವಾದಗಳನ್ನು ಬಾಧ್ಯವಾಗಿ ಹೊಂದಿಕೊಳ್ಳುವರು (15:4). ಯೆಹೋವನು ಆ ವಾಗ್ದಾನದ ಬಳಿಕ ಒಂದು ದೃಷ್ಟಾಂತವನ್ನು ಕೊಟ್ಟನು: ಆತನು ಅಬ್ರಹಾಮನಿಗೆ ಆಕಾಶದ ಕಡೆಗೆ ನೋಡಿ ಸಾಧ್ಯವಾದರೆ ನಕ್ಷತ್ರಗಳನ್ನು ಲೆಕ್ಕಿಸು ಎಂದು ಹೇಳಿದನು. “ನಿನ್ನ ಸಂತಾನವು ಅಷ್ಟಾಗುವದು” ಎಂದು ಹೇಳಿ ದೇವರು ಮುಕ್ತಾಯಗೊಳಿಸಿದನು (15:5). ನಂಬಿಕೆಯ ವಿಷಯದಲ್ಲಿ ಅಬ್ರಹಾಮ ಮತ್ತು ಸಾರಳರು ಒಂದು ಕಠಿಣವಾದ ಪಾಠವನ್ನು ಕಲಿಯಬೇಕಾಗಿತ್ತು - ನಾವೆಲ್ಲರೂ ಕಲಿಯುವ ಅಗತ್ಯವಿರುವಂಥ ಒಂದು ಪಾಠ: *ಯೆಹೋವನ ವಾಗ್ದಾನವು ಆತನ ಚಿತ್ತದ ಪ್ರಕಾರವಾಗಿ ಆತನ ವೇಳಾಪಟ್ಟಿಗನುಗುಣವಾಗಿ ನೆರವೇರತಕ್ಕದ್ದು.* ದೇವರ ಜನರು ನೀತಿವಂತನಿಗೆ ಆಶೀರ್ವಾದ ಅಥವಾ ದುಷ್ಟನ ಮೇಲಿನ ನ್ಯಾಯತೀರ್ಪು ವಿಳಂಬವಾಗುತ್ತೆಂಬ ಗ್ರಹಿಕೆಯಿಂದ ಯಾವಾಗಲೂ ಹೋರಾಟವನ್ನು ಅನುಭವಿಸಿರುತ್ತಾರೆ.

ಕೀರ್ತನೆಗಾರನು ಯೆಹೋವನಿಗೆ ವಿಳಂಬ ಮಾಡಬೇಡ, ಆದರೆ “ನಿದ್ರೆ” ಯಿಂದ “ಎಚ್ಚರವಾಗು” ಮತ್ತು ತನ್ನ ಜನರನ್ನು “ಬಿಟ್ಟೇಬಿಡಬೇಡ” ಎಂದು ಬೇಡಿಕೊಳ್ಳುತ್ತಾನೆ (ಕೀರ್ತನೆ 44:23). ದೇವರು ಇಸ್ರಾಯೇಲ್ಯರನ್ನು “ಜನಾಂಗಗಳಲ್ಲಿ ... ಚದುರಿಸಿಬಿಟ್ಟು” ಅವರ “ಬಾಧೆಯನ್ನೂ ಹಿಂಸೆಯನ್ನೂ” ಮರೆತು ಬಿಟ್ಟಿದ್ದಾನೆ ಎಂದು ಆತನು ನಂಬಿದ್ದನು (ಕೀರ್ತನೆ 44:11, 24; ನೋಡಿರಿ 9:19; 102:13). ಅದೇ ರೀತಿಯಲ್ಲಿಯೇ, ಸುಮಾರು ನಾಲ್ವತ್ತು ವರ್ಷಗಳ ಸೇವೆಯ ವೇಳೆಯಲ್ಲಿ, ಯೆರೆಮೀಯನು ಆರು ಪ್ರಲಾಪಗಳಲ್ಲಿ ಯೆಹೋವನಿಗೆ ತನ್ನ ಹತಾಶೆಯನ್ನು ಮತ್ತು ದಿಗಿಲನ್ನು ವ್ಯಕ್ತಪಡಿಸಿದ್ದನು. ದುಷ್ಟರ ಮೇಲೆ ನ್ಯಾಯತೀರ್ಪನ್ನು ಬರಮಾಡುವದಕ್ಕೆ ಯೆಹೋವನು ಏಕೆ ವಿಳಂಬ ಮಾಡಿದನೆಂಬುದು ಆತನಿಗೆ ಅರ್ಥವಾಗಲಿಲ್ಲ. ಪ್ರವಾದಿಯು ತನ್ನ ಸೇವೆಯಲ್ಲಿ ನಂಬಿಗಸ್ತನಾಗಿರುವದನ್ನು ಮುಂದುವರೆಸಿದ್ದನು, ಆದರೆ ಯೆರೂಸಲೇಮಿನ ಜನರು ಆತನನ್ನು ಅಪಹಾಸ್ಯ ಮಾಡುತ್ತಿದ್ದರು ಮತ್ತು ಅವನ ಕುರಿತು ಲೇವಡಿ ಮಾಡುತ್ತಿದ್ದರು. ತಾನು ಹುಟ್ಟಿ ಬೆಳೆದ ಊರಿನ ಜನರು ಸಹ, ಆತನ ಬಂಧುಗಳು ಸೇರಿದಂತೆ ಎಲ್ಲರೂ ಆತನನ್ನ ನಿಂದಿಸುತ್ತಿದ್ದರು, ಆತನ ವಿರುದ್ಧ ಸಂಚು ಮಾಡುತ್ತಿದ್ದರು, ಮತ್ತು ಆತನ ಪ್ರಾಣವನ್ನು ತೆಗೆಯುವದಕ್ಕೆ ಅಪೇಕ್ಷಿಸಿದರು (ಯೆರೆಮೀಯ 11:18-23; 15:10-18; 17:14-18; 18:18-23; 20:7-18).

ಹೊಸ ಒಡಂಬಡಿಕೆಯಲ್ಲಿ, ಪೇತ್ರನು ದುಷ್ಟರಿಗೆ ನ್ಯಾಯತೀರಿಸಲು ಮತ್ತು ನೀತಿವಂತನ ನ್ಯಾಯವನ್ನು ಸಮರ್ಥಿಸಲು ಕರ್ತನು ಹಿಂದಿರುಗಿ ಬರುವನೆಂಬುದರ ಬಗ್ಗೆ ಕುಚೋದ್ಯ ಮಾಡುತ್ತಿದ್ದವರ ಕುರಿತು ಬಲ್ಲವನಾಗಿದ್ದನು. ಆತನು ತನ್ನ “ವಾಗ್ದಾನ” ವನ್ನು ನೆರವೇರಿಸುವದಕ್ಕೆ ತಡಮಾಡುವದೇ ಅವರು ದೂಷಣೆ ಮಾಡುವದಕ್ಕೆ ಕಾರಣವೆಂದು ತಿಳಿಸುತ್ತಾನೆ. ಹಾಗಿದ್ದರೂ, ಯಾರೂ “ನಾಶವಾಗ” ಬಾರದು, ಆದರೆ “ಎಲ್ಲರೂ ದೇವರ ಕಡೆಗೆ

ತಿರುಗಿಕೊಳ್ಳಬೇಕು" ಎಂಬುದಕ್ಕೋಸ್ಕರವೇ ವಿಳಂಬವಾಗುತ್ತಿದೆ ಎಂಬುದನ್ನು ಅಪೊಸ್ತಲನು ತಿಳಿಸುತ್ತಾನೆ (2 ಪೇತ್ರ 3:3, 4, 9). ಪರಲೋಕದಲ್ಲಿನ ಯಜ್ಞವೇದಿಯ ಕೆಳಗಿದ್ದ ನೀತಿವಂತ ರಕ್ತಸಾಕ್ಷಿಗಳು ಹೀಗೆ ಮೊರೆಯಿಡುವದಾಗಿ ಚಿತ್ರಿಸಲ್ಪಟ್ಟಿದ್ದಾರೆ, "ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" (ಪ್ರಕಟನೆ 6:10).

ದೇವರು ಅನೇಕ ಸಾರಿ ಉದ್ದೇಶಗಳನ್ನಿಟ್ಟುಕೊಂಡಿದ್ದು ಅವುಗಳನ್ನು ಮಾನವ ಬುದ್ಧಿಯು ವಿವೇಚಿಸಲಾರದು. ದೇವರ ವಾಗ್ದಾನವು ನೆರವೇರುವದಕ್ಕೆ ವಿಳಂಬವಾಗುತ್ತಿದೆ ಎಂಬುದರ ಕುರಿತು ದೂರು ಹೇಳಿದವರಲ್ಲಿ ಅಬ್ರಹಾಮನು ಮೊದಲಿಗನಾಗಿರಬಹುದಾಗಿದೆ, ಆದರೆ ಆತನು ಖಂಡಿತವಾಗಿಯೂ ಕೊನೆಯವನಂತೂ ಆಗಿರಲಿಲ್ಲ. ಇಸಾಕನನ್ನು ಗರ್ಭಧರಿಸಬೇಕೆಂದರೆ ತಮ್ಮ ಶರೀರಗಳು "ಮೃತಪ್ರಾಯ" ಆಗುವ ವರೆಗೂ ದೇವರು ಕಾಯುವನು ಎಂಬ ಯೋಚನೆಯು ಅಬ್ರಹಾಮ ಮತ್ತು ಸಾರಳರಿಗೆ ಇರಲಿಲ್ಲ (ರೋಮಾ 4:19). ಇದಕ್ಕೆ ಕಾರಣವು ಏನೆಂದರೆ "ಯೆಹೋವನಿಗೆ ಅಸಾಧ್ಯವಾದದ್ದು" ಯಾವದೂ ಇಲ್ಲ ಎಂಬುದನ್ನು ತೋರಿಸಿ ಕೊಡುವದೇ ಆಗಿತ್ತು (18:14). ಅಂಥ ಜೀವದಾಯಕ ಶಕ್ತಿಯನ್ನು ಚಲಾಯಿಸುವ ಮೂಲಕ, ದೇವರು ಮಹಿಮೆಯು ತನಗೇ ಸಿಕ್ಕುವಂತೆ ಖಚಿತ ಪಡಿಸಿಕೊಳ್ಳುವವನಾಗಿದ್ದನು. ಒಬ್ಬ ಸತ್ಯ ದೇವರು ಎಂಬುದಾಗಿ ಭವಿಷ್ಯದ ತಲೆಮಾರುಗಳು ಆತನನ್ನು ನಂಬಿ ಆತನ ಸೇವೆ ಮಾಡುವದಕ್ಕೆ ಮನಸ್ಸುಳ್ಳವರಾಗುವದಕ್ಕೆ ಕಾರಣವನ್ನು ಒದಗಿಸುತ್ತಿದ್ದಾನೆ. ವಿಶ್ವಾಸಿಗಳ ತಂದೆಯು, ಎಲ್ಲಾ ಯುಗಗಳಲ್ಲಿನ ದೇವರ ಜನರ ಹಾಗೆಯೇ, ಒಂದು ಸರಳವಾದ, ವಿಶ್ವಾಸಿಸುವ ನಂಬಿಕೆಯಲ್ಲಿ "ಯೆಹೋವನನ್ನು ನಿರೀಕ್ಷಿಸುವದಕ್ಕೆ" (ಯೆಶಾಯ 40:31) ಕಲಿತುಕೊಳ್ಳುವ ಅಗತ್ಯವಿತ್ತು.

*ಆತನು ನಂಬಿಕೆಯಿಂದ ಪ್ರತಿಕ್ರಿಯಿಸಿದ್ದು.* ಆತನು ಮುಂಚೆ ಮಾಡಿದ್ದ ಪ್ರಕಾರವೇ, ದೇವರು ತಾನು ಯಾರು ಮತ್ತು ಮಾನವರನ್ನು ಆಶೀರ್ವದಿಸುವದಕ್ಕಾಗಿ ಏನು ಮಾಡುತ್ತಾನೆ ಎಂಬುದರ ಕುರಿತಾದ ಶುಭವಾರ್ತೆಯನ್ನು ಅಬ್ರಹಾಮನಿಗೆ ಸಾರಿದನು. ಆತನ ಮಗನು ಆತನ ಹೊಟ್ಟೆಯಲ್ಲಿಯೇ ಹುಟ್ಟುವನು ಮತ್ತು ಆತನ ಸಂತತಿಯವರು ಆಕಾಶದಲ್ಲಿರುವ ನಕ್ಷತ್ರಗಳಷ್ಟು ಅಸಂಖ್ಯಾತರಾಗುವರು ಎಂದು ಆತನಿಗೆ ಭರವಸವನ್ನು ನೀಡಿದನು. ಈ ಶುಭವಾರ್ತೆಗೆ ಪ್ರತಿಕ್ರಿಯಿಸುತ್ತಾ, "ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (15:6). ಖಂಡಿತವಾಗಿಯೂ, ಇದು ಮೂಲಪಿತೃವಿನ ನಂಬಿಕೆಯ ಆರಂಭ ಆಗಿರಲಿಲ್ಲ. "ನಂಬಿಕೆಯಿಂದಲೇ" ಅಬ್ರಹಾಮನು ಮೂಲತಃ ಮೆಸಪೊಟಾಮ್ಯದಲ್ಲಿ ಉಂಟಾದ ಕರೆಗೆ ಪ್ರತಿಕ್ರಿಯಿಸಿದ್ದನು, ಆಗ ಆತನು "ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು" (ಇಬ್ರಿಯ 11:8) ಎಂದು ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳುತ್ತಾನೆ.

ಒಬ್ಬ ವ್ಯಕ್ತಿಯು ದೇವರೊಂದಿಗೆ ನಡೆಯುವದಕ್ಕೆ ಕಲಿಯುವ ಹಾಗೆ ನಂಬಿಕೆಯು ಹಂತ ಹಂತವಾಗಿ ಬೆಳೆಯುತ್ತದೆಂದು ಬೈಬಲ್ ತಿಳಿಸುತ್ತದೆ. ಕರ್ತನ ಶಿಷ್ಯರು ತಮ್ಮ ವೃತ್ತಿಗಳನ್ನು ತೊರೆದು ಆತನನ್ನು ಹಿಂಬಾಲಿಸಿದ ವಿಶ್ವಾಸಿಗಳಾಗಿದ್ದರು; ಆದರೆ ಆಗಾಗ ಆತನು ಅವರನ್ನು "ಅಲ್ಪ ನಂಬಿಕೆ" ಉಳ್ಳವರಾಗಿದ್ದಕ್ಕಾಗಿ ಗದರಿಸಿದನು (ಮತ್ತಾಯ 6:30; 8:26; 16:8; 17:20). ತಮಗೆ ದೊಡ್ಡ ನಂಬಿಕೆಯ ಅಗತ್ಯವಿದೆ ಎಂಬುದನ್ನು ಶಿಷ್ಯರು ಗ್ರಹಿಸಿಕೊಂಡರು, ಆದ್ದರಿಂದ

ಅವರು ಕರ್ತನಿಗೆ ತಮ್ಮ ನಂಬಿಕೆಯನ್ನು "ಹೆಚ್ಚಿಸು" ಎಂದು ಕೇಳಿಕೊಂಡರು (ಲೂಕ 17:5). ಕೆಲವು ಸಮಯಗಳಲ್ಲಿ, ಯೇಸುವು ವಿವಿಧ ವ್ಯಕ್ತಿಗಳನ್ನು ಅವರಲ್ಲಿದ್ದ "ದೊಡ್ಡ ನಂಬಿಕೆ" ಯನ್ನು ನೋಡಿ ಶ್ಲಾಘಿಸಿದ್ದನು (ಮತ್ತಾಯ 8:10; 15:28). ಅಲ್ಲದೆ ಯೇಸುವಿನಲ್ಲಿ ನಂಬಿಕೆಯಿಟ್ಟವರು ರಕ್ಷಣೆ ಹೊಂದಲಿಲ್ಲ ಯಾಕೆಂದರೆ ಅವರು ಇನ್ನೂ ಪಾಪದ ಬಂಧನದಲ್ಲಿದ್ದರು ಎಂದು ಸಹ ನಾವು ಯೋಹಾನನ ಸುವಾರ್ತೆಯಿಂದ ಬಲ್ಲೆವು (ಯೋಹಾನ 8:31-44). ಕೆಲವೊಬ್ಬ ಯೆಹೂದಿ ಅಧಿಕಾರಿಗಳು ಯೇಸುವಿನಲ್ಲಿ "ನಂಬಿಕೆ" ಇಟ್ಟರು ಆದರೆ ಸಭಾಮಂದಿರಗಳಿಂದ ಹೊರಕ್ಕೆ ಹಾಕಲ್ಪಡುವ ಭಯದಿಂದಾಗಿ ಆತನಲ್ಲಿನ ತಮ್ಮ ನಂಬಿಕೆಯನ್ನು ಅರಿಕೆ ಮಾಡಲಿಲ್ಲ. "ಯಾಕಂದರೆ ದೇವರಿಂದ ಬರುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವೇ ಅವರಿಗೆ ಇಷ್ಟವಾಗಿತ್ತು" (ಯೋಹಾನ 12:42, 43).

ಅಬ್ರಹಾಮನ ನಂಬಿಕೆಯು ಯೇಸುವಿನ ಶಿಷ್ಯರ ನಂಬಿಕೆಯಂತೆಯೇ ಇತ್ತು. ಆತನು ದೇವರ ಸಂಗಡ ನಡೆದಾಡುವ ಮೂಲಕ ಆರಂಭಗೊಳಿಸಿದನು, ಆದರೆ ಕೆಲವು ಸಮಯಗಳಲ್ಲಿ ಆತನ ನಂಬಿಕೆಯು ಅಲ್ಪವಾಗಿತ್ತು ಮತ್ತು ಹೆಚ್ಚಿಸಲ್ಪಡುವ ಅಗತ್ಯದಲ್ಲಿತ್ತು. ಶಿಷ್ಯರು ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ಬೆಳೆದು ಪರಿಪಕ್ವಗೊಳ್ಳುವದಕ್ಕಾಗಿ ಶ್ರಮಿಸಬೇಕಾಗಿತ್ತು. ಅವರು ಯೇಸುವನ್ನು ಹಿಂಬಾಲಿಸಿದರು ಮತ್ತು ಮೂರು ವರ್ಷಗಳ ಕಾಲ ಆತನೊಂದಿಗೆ ಸಾರ್ವಜನಿಕವಾಗಿ ಸಂಬಂಧವಿಟ್ಟುಕೊಂಡಿದ್ದರು; ಆದಾಗ್ಯೂ ಆತನು ತೋಟದಲ್ಲಿ ಬಂಧಿಸಲ್ಪಟ್ಟ ವೇಳೆ ಅವರನ್ನು ಭಯವು ಆವರಿಸಿಕೊಂಡಿತ್ತು, ಅದರಿಂದಾಗಿ ಅವರು ಕತ್ತಲೆಯೊಳಗೆ ಮರೆಯಾಗಿ ಓಡಿ ಹೋಗುವಂತಾಗಿತ್ತು.

ಅಬ್ರಹಾಮನು ಸೊದೋಮಿನ ರಾಜ, ಮೆಲ್ಕೀಚೆದೆಕ, ಮತ್ತು ಮೋರಿಯ ಸಹೋದರರ ಮುಂದೆ ಯೆಹೋವನು ಪರಾತ್ಪರನಾದ ದೇವರಾಗಿದ್ದಾನೆಂಬುದಾಗಿ ತನ್ನ ನಂಬಿಕೆಯನ್ನು ಆತನಲ್ಲಿ ಸಾರ್ವಜನಿಕವಾಗಿ ಅರಿಕೆ ಮಾಡಿದನು (14:22-24). ಅಬ್ರಹಾಮನ ಜೀವಿತದೊಳಗೆ ಈ ಹೊತ್ತಿಗೆ, ಆತನು ಯೆಹೋವನ ವಾಗ್ದಾನವನ್ನು ಮಾತ್ರವೇ ಅಲ್ಲ, ಆದರೆ ಆತನಲ್ಲಿ ವೈಯಕ್ತಿಕವಾಗಿ ಸಹ ನಂಬಿಕೆಯಿಟ್ಟಿದ್ದನು; ಮತ್ತು ಆತನು ಮುಂಚೆಗಿಂತಲೂ ಆಳವಾದ ಸಮರ್ಪಣೆಯನ್ನು ಆತನಿಗೋಸ್ಕರ ಮಾಡಿಕೊಂಡನು. ಆದದರಿಂದ, ವಾಕ್ಯವು ಹೀಗೆ ಹೇಳುತ್ತದೆ, "[ಯೆಹೋವನು] ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (15:6). ಪೌಲನು ಈ ವಿಚಾರವನ್ನು ಎರವಲು ಪಡೆದು ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿ ಬಳಕೆ ಮಾಡುತ್ತಾನೆ, ನೀತಿಯು ಇರಬಹುದಾದ ಎರಡು ಸಂಭಾವ್ಯ ದಾರಿಗಳನ್ನು ಎತ್ತಿ ತೋರಿಸುತ್ತಾನೆ: (1) ಒಬ್ಬನು ಅಂಥ ಸ್ಥಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಸಾಕಷ್ಟು ಸತ್ಕಾರ್ಯಗಳನ್ನು ಮಾಡುವ ಮೂಲಕ ನೀತಿಯನ್ನು ಸಾಧಿಸುತ್ತಾನೆ, ಅಥವಾ (2) ನೀತಿಯನ್ನು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ಕೃಪೆಯಿಂದಲೇ ಒಂದು ವರವಾಗಿ ಪಡೆದುಕೊಳ್ಳಲಾಗುತ್ತದೆ (ರೋಮಾ 4:1-5). ದೇವರ ದೃಷ್ಟಿಯಲ್ಲಿ "ನೀತಿವಂತನು" ಎಂಬ ಸ್ಥಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಅಥವಾ ಯೋಗ್ಯರಾಗುವದಕ್ಕೆ ಸಾಕಾಗುವಷ್ಟು ಸತ್ಕಾರ್ಯಗಳನ್ನು ಮಾಡಲು ಸಾಧ್ಯವಿದ್ದಿದ್ದಲ್ಲಿ, ನಾವು ಅದರ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಾ ಹೀಗೆ ಹೇಳುವದಕ್ಕೆ ಸಾಧ್ಯವಿರುತ್ತಿತ್ತು, "ನಾನು ಏನು ಮಾಡಿದ್ದೇನೆಂದು ನೋಡಿದಿಯಾ!" ಹೇಗೂ, ಅದು ಅಸಾಧ್ಯವಾದದ್ದು! ನಾವು ಹೇಳಲು ಸಾಧ್ಯವಿರುವದೆಲ್ಲಾ ಇಷ್ಟೇ, ಏನೆಂದರೆ "ನನ್ನಂತಹ ಅಯೋಗ್ಯನಾದ ವ್ಯಕ್ತಿಗೋಸ್ಕರ, ನನ್ನ ರಕ್ಷಕನಾದ ಯೇಸುವಿನ ಮೂಲಕವಾಗಿ ದೇವರು ನನಗೋಸ್ಕರ ಏನು ಮಾಡಿದ್ದಾನೆ ನೋಡು." ರಕ್ಷಣೆಯು ಮಾನವ ಸಾಧನೆಗಳ ಮೂಲಕ ಸಿಕ್ಕುವದಿಲ್ಲ; ಅದು ಯೇಸುವು ಮಾಡಿದ ದೈವಿಕ ಪಾಪಪ್ರಾಯಶ್ಚಿತ್ತದ ಮೂಲಕ

ಮಾತ್ರವೇ ಕೊಡಲ್ಪಡುತ್ತದೆ, ಆತನು ಮಾನವರಿಗೆ ಕೃಪೆಯ ಮೂಲಕವಾಗಿ "ನೀತಿಯ ವರದಾನವು" ಸಿಕ್ಕಲೆಂಬುದಕ್ಕಾಗಿ ಲೋಕದ ಪಾಪಗಳಿಗೋಸ್ಕರ ಮರಣಿಸಿದನು (ರೋಮಾ 3:20-22; 5:17). ಯೆಹೋವನು ನಮ್ಮ ಲೆಕ್ಕಕ್ಕೆ ನಂಬಿಕೆಯ ಮೂಲಕವಾಗಿ ನೀತಿಯನ್ನು ಎಣಿಸುತ್ತಾನೆ - ಅಬ್ರಹಾಮನಿಗೆ ಮಾಡಿದ ಪ್ರಕಾರವೇ. ನಾವು "ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಾಗ," ಅಬ್ರಹಾಮನಿಗೆ ಮಾಡಲ್ಪಟ್ಟ ದೈವಿಕ "ವಾಗ್ದಾನ" ದ ಪ್ರಕಾರವಾಗಿ ನಾವು ಆತನ ಮಕ್ಕಳಾಗುತ್ತೇವೆ ಮತ್ತು "ಬಾಧ್ಯರು" ಆಗುತ್ತೇವೆ (ಗಲಾತ್ಯ 3:26-29).

*ಆತನ ನಂಬಿಕೆಯು ದೃಢೀಕರಿಸಲ್ಪಟ್ಟಿತು.* ಮೊದಲನೆಯದಾಗಿ, ದೇವರು ಶುಭವಾರ್ತೆಯನ್ನು ಮಾತಾಡುವ ಮೂಲಕ, ಮೂಲಪಿತೃವಿಗೆ ತಾನು ಯಾರು ಮತ್ತು ಆತನಿಗೋಸ್ಕರ ಏನು ಮಾಡಿರುತ್ತಾನೆಂಬುದನ್ನು ನೆನಪಿಸುವ ಮೂಲಕ ಅಬ್ರಹಾಮನ ನಂಬಿಕೆಯನ್ನು ಉತ್ತೇಜಿಸಿದನು. ಆತನು ಹೀಗೆ ಹೇಳಿದನು, "ಈ ದೇಶದ ಬಾಧ್ಯತೆಯನ್ನು ನಿನಗೆ ಕೊಡುವದಕ್ಕೋಸ್ಕರ ನಿನ್ನನ್ನು ಊರ್ ಎಂಬ ಕಲ್ದೀಯರ ಪಟ್ಟಣದಿಂದ ಬರಮಾಡಿದ ಯೆಹೋವನೇ ನಾನು" (15:7). ಪೌಲನು ಸುವಾರ್ತೆಯನ್ನು ರೋಮಾಪುರದಲ್ಲಿ ಮತ್ತು ಕೊರಿಂಥದಲ್ಲಿ ಇದೇ ಕಾರಣಕ್ಕೋಸ್ಕರ ಸಾರಬೇಕೆಂದು ಬಯಸಿದ್ದನು: ಯೇಸುವಿನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳ ಮೂಲಕವಾಗಿ ದೇವರು ಅವರಿಗೋಸ್ಕರ ಏನು ಮಾಡಿದ್ದಾನೆಂಬುದನ್ನು ಅವರಿಗೆ ಜ್ಞಾಪಿಸುವ ಮೂಲಕ ಅವರ ಕ್ರೈಸ್ತೀಯ ನಂಬಿಕೆಯನ್ನು ಬಲಗೊಳಿಸಿ ದೃಢೀಕರಿಸುವದೇ (ರೋಮಾ 1:15, 16; 1 ಕೊರಿಂಥ 15:1-4).

ಸರಿಯಾಗಿ ಚಲಾಯಿಸುವದಾದರೆ, ಜ್ಞಾಪಕ ಶಕ್ತಿಯು ವ್ಯಕ್ತಿಗಳಲ್ಲಿ ನಂಬಿಕೆ ಮತ್ತು ನಿರೀಕ್ಷೆಗಳೆರಡನ್ನೂ ಪ್ರಚೋದಿಸುತ್ತದೆ. ಸಮಸ್ಯೆಯು ಏನೆಂದರೆ ನಾವು ನೆನಪಿಟ್ಟುಕೊಳ್ಳಬೇಕಾದ ಸಂಗತಿಗಳನ್ನು ಮರೆಯುವವರು ಮತ್ತು ಮರೆಯಬೇಕಾದ ಸಂಗತಿಗಳನ್ನು ನೆನಪಿಟ್ಟುಕೊಳ್ಳುವವರು ಆಗಿರುತ್ತೇವೆ. ನಮ್ಮ ಅಥವಾ ನಮ್ಮ ಪ್ರಿಯರ ವಿರುದ್ಧವಾಗಿ ಮಾಡಿರುವ ತಪ್ಪುಗಳನ್ನು ನಾವು ಮರೆಯುವುದು ವಿರಳ, ಆದಾಗ್ಯೂ ಕ್ರೈಸ್ತೀಯ ಜೀವಿತದ ಕೆಲವು ತತ್ವಗಳು ನಮಗೆ ನೆನಪಿಟ್ಟುಕೊಳ್ಳಲು ಕಠಿಣವಾಗಿ ತೋರುತ್ತವೆ. ಅಪರಾಧಭಾವನೆ ಅಥವಾ ಕಹಿಭಾವನೆಯು ಕ್ರಿಸ್ತನಲ್ಲಿ ನಮಗಿರುವ ಸಂತೋಷವನ್ನು ದೋಚಿಕೊಳ್ಳುತ್ತದೆ ಮತ್ತು ಬೇರೆಯವರಿಗೆ ನೀಡುವ ಸಾಕ್ಷಿಯನ್ನು ನಾಶಗೊಳಿಸುತ್ತದೆ.

ಪೌಲನು ತಾನು ಪರಿವರ್ತನೆಗೊಳ್ಳುವದಕ್ಕೆ ಮುಂಚೆ ಕ್ರೈಸ್ತರಿಗೆ ನೀಡಿದ ಹಿಂಸೆಯ ಅಪರಾಧಭಾವನೆಯಲ್ಲಿ ಅಥವಾ ಯೆಹೂದಿಕರಣಗೊಳಿಸುವ ಸಹೋದರರ ಮತ್ತು ಸುಳ್ಳು ಸಹೋದರರ ಕೈಗಳಲ್ಲಿ ತಾನು ಅನ್ಯಾಯವಾಗಿ ಅನುಭವಿಸಿದ ದಬ್ಬಾಳಿಕೆಯಲ್ಲಿ ಹೊರಳಾಡಿರಬಹುದಾಗಿದೆ. ಹೇಗೂ, ಆತನು ಹೀಗೆ ಹೇಳಿದನು, "ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತುಬಿಟ್ಟು ಮುಂದಿನವುಗಳನ್ನು ಹಿಡಿಯುವದಕ್ಕೆ ಎದೆ ಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ" (ಫಿಲಿಪ್ಪಿ 3:13, 14). ಪೌಲನು ಕರ್ತನನ್ನು ಮಹಿಮೆಪಡಿಸುವದಕ್ಕೋಸ್ಕರ ಮಾತ್ರವೇ ತನ್ನ ಹಿಂದಿನ ಪಾಪಗಳ ಪ್ರಸ್ತಾಪವನ್ನು ಮಾಡಿದನು, ಆ ಕರ್ತನು ಆತನ ಜೀವಿತವನ್ನು ಸಂಪೂರ್ಣವಾಗಿ ಬದಲಾಯಿಸಿ ಆತನನ್ನು ಬೇರೆಯವರಿಗೆ ಸುವಾರ್ತೆ ಸಾರುವದಕ್ಕೋಸ್ಕರ ಕಳುಹಿಸುವ ಮೂಲಕ ಅವನಿಗೆ ಕರುಣೆ ಮತ್ತು ಕ್ಷಮಾಪಣೆಗಳನ್ನು ತೋರಿಸಿದ್ದನು. ಪೌಲನು ತನ್ನ ವೈಯಕ್ತಿಕ ಚರಿತ್ರೆಯನ್ನು ಪುನಃ ಪ್ರಸ್ತಾಪಿಸಿದ್ದು ವಿಷಣ್ಣತೆಯಿಂದ ಗತಕಾಲದಲ್ಲಿಯೇ ತಲ್ಲೀಣವಾಗಿರುವದಾಗಿರಲಿಲ್ಲ; ಬದಲಾಗಿ,

ಅದೊಂದು ರೀತಿಯಲ್ಲಿ, “ದೇವರು ನನ್ನನ್ನು - ಪಾಪಿಗಳಲ್ಲಿಯೇ ಮುಖ್ಯಸ್ಥನಾದಂಥವನು - ಪ್ರೀತಿಸಿ, ಕ್ಷಮಿಸಿದ್ದರೆ, ಮತ್ತು ರಕ್ಷಣೆ ಮಾಡಿರುವದಾದರೆ ಎಲ್ಲರಿಗೂ ನಿರೀಕ್ಷೆಯು ಇರುತ್ತದೆ, ಅವರು ಏನೇ ಪಾಪಗಳನ್ನು ಅಥವಾ ಅಪರಾಧಗಳನ್ನು ಮಾಡಿದ್ದರೂ ಸರಿಯೇ ಅವರಿಗೆ ನಿರೀಕ್ಷೆ ಇರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 9:1-22; 22:3-21; 26:2-23; 1 ತಿಮೊಥೆ 1:12-17).

ಎರಡನೆಯದಾಗಿ, ದೇವರು ಅಬ್ರಹಾಮನ ಸಂತತಿಯವರು ದೇಶವನ್ನು ಪಡೆದುಕೊಳ್ಳುವರು ಎಂಬುದಾಗಿ ಆತನೊಂದಿಗೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೂಲಕ ಆತನ ನಂಬಿಕೆಯನ್ನು ದೃಢೀಕರಿಸಿದನು. ಪ್ರಾಚೀನ ಜಗತ್ತಿನಲ್ಲಿ, ಒಡಂಬಡಿಕೆಗಳನ್ನು ಸುಮ್ಮನೆ ಹಗುರವಾಗಿ ಮಾಡುತ್ತಿರಲಿಲ್ಲ ಅಥವಾ ಹುಡುಗಾಟಿಕೆಯಿಂದ ಉಲ್ಲಂಘಿಸಲಾಗುತ್ತಿರಲಿಲ್ಲ. ಒಂದು ಒಡಂಬಡಿಕೆಯನ್ನು ಉಲ್ಲಂಘಿಸುವದು ಗಂಭೀರ ವಿಷಯವಾಗಿತ್ತು, ಮತ್ತು ಹಾಗೆ ಮಾಡುವದರಿಂದ ಅಪರಾಧ ಮಾಡಿದವನಿಗೆ ಮರಣ ದಂಡನೆಯನ್ನು ಬರಮಾಡುವದಾಗಿತ್ತು (ನೋಡಿರಿ ಯೆರೆಮೀಯ 34:12-22). ಬಹುಪಾಲು ಒಡಂಬಡಿಕೆಗಳಿಗೆ ಒಂದು ಅಥವಾ ಅಧಿಕ ಪ್ರಾಣಿಗಳನ್ನು ಯಜ್ಞಗಳಾಗಿ ಅರ್ಪಿಸಿ ರಕ್ತಧಾರೆಯನ್ನು ಮಾಡಲಾಗುತ್ತಿತ್ತು, ಜೊತೆಗೆ ಒಡಂಬಡಿಕೆಯನ್ನು ಕಾಪಾಡಿಕೊಳ್ಳಲಾಗುವದೆಂದು ಯೆಹೋವನ ಮುಂದೆ ಒಂದು ಪ್ರಮಾಣವನ್ನು ಮಾಡಬೇಕಾಗಿರುತ್ತಿತ್ತು.

ಈ ಸಂದರ್ಭದಲ್ಲಿ, ಅಬ್ರಹಾಮನು ಒಡಂಬಡಿಕೆಯನ್ನು ಸ್ಥಾಪಿಸುವದಕ್ಕೆ ಕೆಲವು ಪ್ರಾಣಿಗಳನ್ನು ಕೊಲ್ಲಬೇಕಾಗಿತ್ತಾದರೂ, ಪ್ರಮಾಣವನ್ನು ಮಾಡಿದವನು ದೇವರೊಬ್ಬನೇ ಆಗಿದ್ದನು. ಅದು ಭವಿಷ್ಯದ ಕುರಿತಾದ ಒಂದು ಹೇಳಿಕೆಯೊಂದಿಗೆ ಆರಂಭವಾಗಿತ್ತು: “ನೀನು ಚೆನ್ನಾಗಿ ತಿಳಿಯತಕ್ಕದ್ದೇನಂದರೆ ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು” (15:13). ಆ ಬಳಿಕ ಪೀಡಕರಿಗೆ “ಶಿಕ್ಷಿಸಿಸುವೆನು” ಎಂದು ವಾಗ್ದಾನ ಮಾಡಿದನು ಮತ್ತು ಅಬ್ರಹಾಮನ ಸಂತಾನದವರು “... ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು” (15:14) ಎಂದು ಹೇಳಿದನು. ಅಂತಿಮವಾಗಿ ಒಂದು ಭರವಸವನ್ನು ಕೊಡುವವನಾಗಿ, ಆತನು ಹೀಗೆ ಒತ್ತಿ ಹೇಳಿದನು, “ಐಗುಪ್ತದೇಶದ ನದಿಯಿಂದ ಯೂಫ್ರೇಟೀಸ್ ಮಹಾನದಿಯವರೆಗೂ ಈ ದೇಶವನ್ನೆಲ್ಲಾ ನಿನ್ನ ಸಂತತಿಯವರಿಗೆ ಕೊಟ್ಟಿದ್ದೇನೆ” (15:18).

ದೇವರು ಮೋಶೆಯ ಮೂಲಕವಾಗಿ ಇಸ್ರಾಯೇಲ್ಯರೊಂದಿಗೆ ಸೀನಾಯಿ ಪರ್ವತದಲ್ಲಿ ಮಾಡಿಕೊಂಡ ಒಡಂಬಡಿಕೆಯು ಇದರಲ್ಲಿದ್ದ ಅನೇಕ ವೈಶಿಷ್ಟ್ಯಗಳನ್ನೇ ಒಳಗೊಂಡಿತ್ತು. ಅಬ್ರಹಾಮನೊಂದಿಗೆ ಮಾಡಿಕೊಂಡ ಒಡಂಬಡಿಕೆಯಲ್ಲಿರುವಂತೆಯೇ, ಅದು ದೇವರು ಯಾರು ಮತ್ತು ಇಸ್ರಾಯೇಲ್ಯರನ್ನು ಆಶೀರ್ವದಿಸಿ ಬಿಡುಗಡೆಗೊಳಿಸುವದಕ್ಕೆ ಆತನು ಏನು ಮಾಡಿದ್ದಾನೆ ಎಂಬುದರ ಕುರಿತಾದ ಶುಭವಾರ್ತೆಯೊಂದಿಗೆ ಆರಂಭಗೊಂಡಿತು: “ನೀನು ದಾಸತ್ವದಲ್ಲಿದ್ದ ಐಗುಪ್ತದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ ನಿನ್ನ ದೇವರು ನಾನೇ” (ವಿಮೋಚನಕಾಂಡ 20:2). ಬಳಿಕ ಅದು ದಶಾಜ್ಞೆಗಳಲ್ಲಿ ಮತ್ತು ಇತರ ಶಾಸನಗಳಲ್ಲಿ ಮುಂದುವರೆಯುತ್ತದೆ (ವಿಮೋಚನಕಾಂಡ 20:3-23:33), ಇವುಗಳು ಅವರು ಒಂದು “ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರು” ವದಕ್ಕೆ (ವಿಮೋಚನಕಾಂಡ 19:6) ಅಗತ್ಯವಾಗುವ ಮಾರ್ಗಸೂಚಿಗಳಾಗಿ ಕೊಡಲ್ಪಟ್ಟಿದ್ದವು. ತರುವಾಯ, ಮೋಶೆಯು “ಜನರ ಬಳಿಗೆ ಬಂದು ಯೆಹೋವನ ಎಲ್ಲಾ ಮಾತುಗಳನ್ನೂ ನ್ಯಾಯವಿಧಿಗಳನ್ನೂ ವಿವರಿಸಲು ಜನರೆಲ್ಲರು -

ಯೆಹೋವನ ಮಾತುಗಳನ್ನೆಲ್ಲಾ ಅನುಸರಿಸಿ ನಡೆಯುವೆವು ಎಂದು ಒಕ್ಕಟ್ಟಾಗಿ ಉತ್ತರ ಕೊಟ್ಟರು" (ವಿಮೋಚನಕಾಂಡ 24:3). ಬಳಿಕ ಪ್ರಾಣಿಗಳನ್ನು ಸರ್ವಾಂಗಹೋಮವಾಗಿ ಮತ್ತು ಸಮಾಧಾನ ಯಜ್ಞಗಳಾಗಿ ಅರ್ಪಿಸಲಾಯಿತು, ಮೋಶೆಯು ರಕ್ತವನ್ನು ತೆಗೆದುಕೊಂಡು ಯಜ್ಞವೇದಿಯ ಮೇಲೆ ಪ್ರೋಕ್ಷಿಸಿದನು. ಆತನು ಇನ್ನಷ್ಟು ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಪ್ರೋಕ್ಷಿಸಿದನು, ಹೀಗೆ ದೇವರನ್ನೂ ಜನರನ್ನೂ ಒಂಧು ದೃಢವಾದ ಒಡಂಬಡಿಕೆಯ ಸಂಬಂಧದಲ್ಲಿ ಒಳಪಡಿಸಿದನು. ಅದು ಪೂರ್ಣಗೊಂಡ ಬಳಿಕ, ಆತನು ಹೀಗೆ ಹೇಳಿದನು, "ಇಗೋ, ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ" (ವಿಮೋಚನಕಾಂಡ 24:8).

ಅನಂತರದಲ್ಲಿ ಬೈಬಲಿನ ಲೇಖಕರು ಈ ಒಡಂಬಡಿಕೆಯ ಭಾಷೆಯನ್ನು ಎರವಲು ಪಡೆದು ಯೇಸುವನ್ನು ದೇವರ ಕುರಿಮರಿ ಎಂದು ಬಣ್ಣಿಸಿದರು, ಆತನ ರಕ್ತವು ಲೋಕದ ಪಾಪಗಳ ಪರಿಹಾರಾರ್ಥವಾಗಿ ಸುರಿಸಲ್ಪಟ್ಟಿತು (ಯೆಶಾಯ 53:10, 12; ಯೋಹಾನ 1:29, 36; ರೋಮಾ 3:25; 1 ಯೋಹಾನ 1:7; 2:2). ಪಸ್ಕದ ಭೋಜನದ ವೇಳೆ ಕರ್ತನ ರಾತ್ರಿ ಭೋಜನದ ಸಂಸ್ಕಾರವನ್ನು ಸ್ಥಾಪಿಸುವ ವೇಳೆ, ಯೇಸುವು ರೊಟ್ಟಿಯ ವಿಷಯವಾಗಿ ಹೀಗೆ ಹೇಳಿದನು, "ಇದು ನನ್ನ ದೇಹ." ಪಾತ್ರೆಯನ್ನು ತೆಗೆದುಕೊಂಡು ಅದರ ವಿಷಯವಾಗಿ ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾಯ 26:26, 28). ಅಬ್ರಹಾಮನೊಂದಿಗೆ ಮತ್ತು ಮೋಶೆಯೊಂದಿಗೆ ಮಾಡಿಕೊಂಡ ಒಡಂಬಡಿಕೆಗಳಲ್ಲಿ ಅರ್ಪಿಸಲ್ಪಟ್ಟ ರಕ್ತದ ಯಜ್ಞಗಳು ದೇವರು ಮತ್ತು ಆತನ ಜನರ ನಡುವಿನ ಸಂಬಂಧವನ್ನು ಸ್ಥಿರಪಡಿಸಿದ ಹಾಗೆಯೇ, ಯೇಸುವಿನ ರಕ್ತವು ದೇವರ ಮಕ್ಕಳಾಗಿ ನಮ್ಮ ಸಂಬಂಧವನ್ನು ಖಾತ್ರಿಪಡಿಸುತ್ತದೆ. ಪ್ರಾಣಿಗಳ ಯಜ್ಞಗಳು ಕಾನಾನ್ ದೇಶದ ವಾಗ್ದಾನವನ್ನು ಊರ್ಜಿತಗೊಳಿಸಿದರೆ, ನಮ್ಮ ಸರ್ವಕಾಲಕ್ಕೂ ಪರಿಪೂರ್ಣವಾಗಿರುವ ಯಜ್ಞವು - ಯೇಸು - ನಮಗೆ "ಪರಲೋಕವೆಂಬ" ಒಂದು "ಉತ್ತಮ ದೇಶ" ದ ಆಶೀರ್ವಾದವನ್ನು ಒದಗಿಸುತ್ತದೆ (ಇಬ್ರಿಯ 11:16; ನೋಡಿರಿ 12:22).

*ಮುಕ್ತಾಯ.* ವಾಗ್ದಾನ ಮಾಡಲ್ಪಟ್ಟಿರುವದನ್ನು ಪಡೆದುಕೊಳ್ಳಬೇಕೆಂದರೆ, ನಾವು ಯೆಹೋವನ ಕಡೆಗೆ ನಮಗಿರುವ ಸಮರ್ಪಣೆಯಲ್ಲಿ ನಂಬಿಗಸ್ತರಾಗಿ ನೆಲೆಗೊಳ್ಳತಕ್ಕದ್ದು ಮತ್ತು "ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯ" ವನ್ನು ಬೆಳೆಸಿಕೊಳ್ಳಕೂಡದು (ಇಬ್ರಿಯ 3:12). ಇಸ್ರಾಯೇಲ್ಯರ ಮೊದಲ ತಲೆಮಾರಿನ ಬಹಳಷ್ಟು ಜನರಿಗೆ ಇದೇ ಸಂಭವಿಸಿತ್ತು. ಅವರು ತಮ್ಮ ಒಡಂಬಡಿಕೆಯ ಸಮರ್ಪಣೆಯಲ್ಲಿ ಹಿಂಜರಿದರು, ದೇವರನ್ನು ತಿರಸ್ಕರಿಸಿದರು, ಮತ್ತು ಅರಣ್ಯದಲ್ಲಿ ಮರಣ ಹೊಂದಿದರು. ಆದದರಿಂದ, ಅವರು ವಾಗ್ದಾನ ದೇಶದಲ್ಲಿ ಎಂದಿಗೂ "ವಿಶ್ರಾಂತಿ" ಯನ್ನು ಅನುಭವಿಸಲಿಲ್ಲ (ಇಬ್ರಿಯ 4:3). ಪ್ರಥಮ ಶತಮಾನದಲ್ಲಿ, ಯೆಹೂದಿ ಕ್ರೈಸ್ತರಲ್ಲಿ ಕೆಲವರು ಹೊಸ ಒಡಂಬಡಿಕೆಯ ಅಡಿಯಲ್ಲಿ ಪಾಪಗಳ ಪರಿಹಾರಕ್ಕಾಗಿರುವ ಏಕೈಕ ಯಜ್ಞವಾಗಿರುವ ಕ್ರಿಸ್ತನಿಂದ ವಿಮುಖರಾಗುವ ಅಪಾಯದಲ್ಲಿದ್ದರು (ಇಬ್ರಿಯ 10:26). ಅವರ ಮನೋಭಾವಗಳು ಮತ್ತು ಕೃತ್ಯಗಳು ಗಂಭೀರವಾದವುಗಳೆಂದು ಅವರಿಗೆ ಎಚ್ಚರಿಸಲಾಯಿತು; ಅವರು "ದೇವಕುಮಾರನನ್ನು ತುಳಿದ" ಮತ್ತು "ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ" ಮಾಡಿದ ಅಪರಾಧಕ್ಕೊಳಗಾಗಬಹುದು ಎಂದು ಎಚ್ಚರಿಸಲ್ಪಟ್ಟರು (ಇಬ್ರಿಯ 10:29). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಅವರಿಗೆ ಕರ್ತನ ಕಡೆಗೆ ಪುನಃ ತಿರುಗಿಕೊಳ್ಳಿರಿ, ಇಲ್ಲವಾದರೆ ಅವರಿಗೆ

ಮರಣಕ್ಕಿಂತಲೂ "ಎಷ್ಟೋ ಕ್ರೂರವಾದ ದಂಡನೆ" ಕಾದಿದೆ ಎಂದು ಬುದ್ಧಿವಾದ ಹೇಳಿದನು (10:29).

ಪ್ರತಿಯೊಂದು ಯುಗದಲ್ಲಿನ ದೇವರ ಜನರಿಗೆ ಸಹ ಇದೇ ಎಚ್ಚರಿಕೆಯು ಅನ್ವಯವಾಗುತ್ತದೆ: ನಾವು ಕ್ರಿಸ್ತನ ಯಜ್ಞವನ್ನು ಎಂದಿಗೂ ಅಸಡ್ಡೆ ಮಾಡಬಾರದು ಅಥವಾ ಅದಿಲ್ಲದೆ ನಮ್ಮ ರಕ್ಷಣೆ ಮತ್ತು ನಿತ್ಯವಾದ ಗಮ್ಯತೆಯು ಸುರಕ್ಷಿತವಾಗಿದೆ ಎಂಬಂತೆ ಅದನ್ನು ನಮ್ಮ ನುಡಿಗಳಿಂದಾಗಲು ಅಥವಾ ಕೃತ್ಯಗಳಿಂದಾಗಲಿ ಅಗೌರವನ್ನು ಎಂದಿಗೂ ತೋರಕೂಡದು. ಪೇತ್ರನು ಘೋಷಿಸಿದ್ದೇನೆಂದರೆ "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯಗಳು 4:12).

## ದೇವರ ವಾಗ್ದಾನಗಳಲ್ಲಿರುವ ಶರತ್ತಿನ ಸ್ವಭಾವ (15:7-21)

ಇಂದು ಕೆಲವರು ಸಮರ್ಥಿಸುವ ಜನಪ್ರಿಯ ಅಭಿಪ್ರಾಯವು ಏನೆಂದರೆ ಇಸ್ರಾಯೇಲ್ ದೇಶವು (ಪ್ರಾಚೀನ ಕಾನಾನ್) ಯೆಹೂದ್ಯರಿಗೆ ಮಾತ್ರವೇ ಸೇರಿದ್ದು ಯಾಕೆಂದರೆ ದೇವರು ಅದನ್ನು ಅವರಿಗೆ ಶರತ್ತುರಹಿತವಾಗಿ ಮತ್ತು ರದ್ದುಗೊಳಿಸಲ್ಪಡಲಾಗದಂಥ ವರದಾನವಾಗಿ[21] ಕೊಟ್ಟನು ಎಂಬುದೆ. ಈ ಅಭಿಪ್ರಾಯವನ್ನು ಪ್ರತಿಪಾದಕರು ಸಹ ಹಳೆಯ ಒಡಂಬಡಿಕೆಯ ಅನೇಕ ಪ್ರವಾದನೆಗಳು ಶರತ್ತುಗಳನ್ನು ಒಳಗೊಂಡಿರುತ್ತವೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ, ಇನ್ನು ಕೆಲವರು ದೇಶದ ಕುರಿತಾದ ಪ್ರವಾದನೆಗಳು ಶರತ್ತಿನಿಂದ ಕೂಡಿಲ್ಲ ಯಾಕೆಂದರೆ ದೇವರು ಅಬ್ರಹಾಮನಿಗೆ ಮತ್ತು ಆತನ ಸಂತತಿಯವರಿಗೆ ದೇಶವನ್ನು ಶಾಶ್ವತವಾಗಿ ಕೊಡುವೆನೆಂದು ಒಂದು *ಪ್ರಮಾಣ* ಮಾಡಿ ಹೇಳಿದನು ಎಂದು ಸಮರ್ಥನೆ ಮಾಡುತ್ತಾರೆ. ಹೇಗೂ, ದೇವರು ಮತ್ತು ಆತನ ಗುಣಗಳ ಬಗ್ಗೆ ಮಾತಾಡುವಾಗ ಹೊರತು ಪಡಿಸಿ, "ಶಾಶ್ವತ" (עוֹלָם, *ಒಲಾಮ್*) ಎಂಬ ಪದವು ತಾತ್ಕಾಲಿಕವಾಗಿರುವ ಮತ್ತು "ಒಂದು ಯುಗ" ಅಥವಾ "ಒಂದು ಅನಿರ್ದಿಷ್ಟ ಕಾಲಮಾನ" (ಸುದೀರ್ಘ ಅಥವಾ ಕ್ಲುಪ್ತ) ವರೆಗೆ ಇರುವಂಥ ತತ್ವಗಳು ಹಾಗೂ ಆಚಾರಗಳ ಕುರಿತು ಸೂಚಿಸುವದಾಗಿದೆ, ಹೊರತು ಒಂದು "ನಿತ್ಯತ್ವ" ಅಲ್ಲ. ಅಷ್ಟುಮಾತ್ರವಲ್ಲದೆ, ಪ್ರವಾದನೆಗಳು ಮತ್ತು ವಾಗ್ದಾನಗಳು, ಒಂದು ದೈವಿಕ ಪ್ರಮಾಣದ ಜೊತೆಗೆ ಇದ್ದಾಗ್ಯೂ ಅವುಗಳು ಶರತ್ತುಬದ್ಧವಾಗಿರುತ್ತವೆ ಎಂಬುದನ್ನು ನಾವು ತಿಳಿದಿರತಕ್ಕದ್ದು.

1. *ದೇಶದ ಕುರಿತಾದ ವಾಗ್ದಾನದಲ್ಲಿರುವ ಶರತ್ತುಬದ್ಧ ಸ್ವಭಾವ.* ಮೋಶೆಯು ಅರಣ್ಯದಲ್ಲಿ ಮಾಡಿದ ಪ್ರಸಂಗಗಳೊಂದರಲ್ಲಿ, ಅವರು ವಾಗ್ದಾನ ದೇಶವನ್ನು ಪ್ರವೇಶಿಸುವದಕ್ಕೆ ಸ್ವಲ್ಪ ಕಾಲದ ಮುಂಚೆ, ಆತನು ಜನರಿಗೆ ಸ್ಪಷ್ಟವಾಗಿ ಎಚ್ಚರಿಸಿದನು,

> ನಿಮ್ಮ ದೇವರಾದ ಯೆಹೋವನು ನಿಮ್ಮ ಪಿತೃಗಳಾದ ಅಬ್ರಹಾಮ್ ಇಸಾಕ್ ಯಾಕೋಬರಿಗೆ ಪ್ರಮಾಣ [שָׁבַע, *ಶಬಾ*] ಮಾಡಿಕೊಟ್ಟ ದೇಶದಲ್ಲಿ ನಿಮ್ಮನ್ನು ಸೇರಿಸಿದಾಗ ... ಯೆಹೋವನನ್ನು ಮರೆಯಬಾರದು, ನೋಡಿರಿ ... ಸುತ್ತಲಿರುವ ಜನಾಂಗಗಳು ಸೇವಿಸುವ ದೇವರುಗಳನ್ನು ನೀವು ಆರಾಧಿಸಬಾರದು. ನಿಮ್ಮ ಮಧ್ಯದಲ್ಲಿರುವ ನಿಮ್ಮ ದೇವರಾದ ಯೆಹೋವನು ತನಗೆ ಸಲ್ಲಬೇಕಾದ ಗೌರವವನ್ನು ಇನ್ನೊಬ್ಬನಿಗೆ ಸಲ್ಲಗೊಡಿಸದ ದೇವರು; *ಆತನು ನಿಮ್ಮ ಮೇಲೆ ಕೋಪಗೊಂಡರೆ ನಿಮ್ಮನ್ನು ಭೂಮಿಯ ಮೇಲೆ ಉಳಿಯದಂತೆ ನಾಶಮಾಡಾನು* (ಧರ್ಮೋಪದೇಶಕಾಂಡ 6:10-15; ಒತ್ತಿ ಹೇಳಿದ್ದು ನನ್ನದು).

ಮೋಶೆಯ ಪ್ರಕಾರವಾಗಿ, ಇಸ್ರಾಯೇಲ್ಯರು ಯೆಹೋವನಿಗೆ ಅಪನಂಬಿಗಸ್ತರಾಗುವದಾದರೆ, ಆ ಜನಾಂಗವು ದೇಶವನ್ನು ಕಳೆದುಕೊಳ್ಳುವದು ಮಾತ್ರವೇ ಅಲ್ಲ, ಆದರೆ ಅದರ ತನ್ನ

ಅಸ್ತಿತ್ವವನ್ನೇ ಕಳೆದುಕೊಳ್ಳಲಿದ್ದರು. ವಾಗ್ದಾನ ದೇಶದಲ್ಲಿ ಇಸ್ರಾಯೇಲ್ಯರು ಬದುಕುಳಿಯುವ ಕುರಿತು ಯೆಹೋವನು ಪ್ರಮಾಣ ಮಾಡಿದನಾದರೂ, ಅದು ನಿರಂತರವಾಗಿ ನೆರವೇರುವುದು ಶರತ್ತುಬದ್ಧವಾಗಿತ್ತು.

ಒಡಂಬಡಿಕೆಯ ಆಶೀರ್ವಾದಗಳು ಮತ್ತು ಶಾಪಗಳ ನಡುವೆ (ದರ್ಮೋಪದೇಶಕಾಂಡ 28:1-21), ಮೋಶೆಯು ಇಸ್ರಾಯೇಲ್ಯರ ಸಂಗಡ ದೇವರು ಮಾಡಿದ ಒಡಂಬಡಿಕೆಯಲ್ಲಿರುವ ಶರತ್ತುಬದ್ಧವಾದ "ಮಾಡುವದಾದರೆ ..." ಸ್ವಭಾವವನ್ನು ಕುರಿತು ಒತ್ತಿ ಹೇಳಿದನು:

> ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ... ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು ... *ನೀವು ನಿಮ್ಮ ದೇವರಾದ* ಯೆಹೋವನ *ಆಜ್ಞೆಗಳನ್ನು ಅನುಸರಿಸಿ ಆತನು ಹೇಳಿದ ಮಾರ್ಗದಲ್ಲೇ ನಡೆದರೆ ಆತನು ವಾಗ್ದಾನ ಮಾಡಿದಂತೆ* [*ಶಬಾ*] ನಿಮ್ಮನ್ನು ತನಗೋಸ್ಕರ ಮೀಸಲಾದ ಜನರನ್ನಾಗಿ ಸ್ಥಾಪಿಸುವನು ... ಯೆಹೋವನು ನಿಮ್ಮ ಪಿತೃಗಳಿಗೆ ಪ್ರಮಾಣ ಮಾಡಿದ [*ಶಬಾ*] ಮೇರೆಗೆ ನಿಮಗೆ ಕೊಡುವ ದೇಶದಲ್ಲಿ ಆತನು ನಿಮಗೆ ಸಂತಾನಪಶುವ್ಯವಸಾಯಗಳ ಸಮೃದ್ಧಿಯನ್ನುಂಟುಮಾಡುವನು. ಆದರೆ ನೀವು ನಿಮ್ಮ ದೇವರಾದ ಯೆಹೋವನ ಮಾತಿಗೆ ಕಿವಿಗೊಡದೆ ... ಹೋದರೆ ಈ ಅಶುಭಗಳು ನಿಮಗೆ ಪ್ರಾಪ್ತವಾಗುವವು ... ವ್ಯಾಧಿಯು ನಿಮಗೆ ಹತ್ತಿಕೊಂಡೇ ಇರುವಂತೆ ಯೆಹೋವನು ಮಾಡಿ ನೀವು ಸ್ವಾಧೀನಮಾಡಿಕೊಳ್ಳುವದಕ್ಕೆ ಹೋಗುವ ದೇಶದಲ್ಲಿ ನಿಮ್ಮಲ್ಲಿ ಒಬ್ಬರೂ ಉಳಿಯದಂತೆ ಮಾಡುವನು (ಧರ್ಮೋಪದೇಶಕಾಂಡ 28:1-21; ಒತ್ತಿಹೇಳಿದ್ದು ನನ್ನದು).

ದೇವರು ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ಕೊಡುವೆನೆಂದು ಪ್ರಮಾಣ ಮಾಡಿ ಹೇಳಿದನಾದರೂ, ವಾಗ್ದಾನವು ಶರತ್ತುಬದ್ಧವಾಗಿತ್ತು, ಜನರು ಆತನಿಗೆ ವಿಧೇಯರಾಗುವದರ ಮೇಲೆ ಅವಲಂಭಿತವಾಗಿತ್ತು ಎಂಬುದು ಸ್ಪಷ್ಟವಾಗಿದೆ. ವಾಸ್ತವಿಕದಲ್ಲಿ, ಬೈಬಲಿನ ಲೇಖಕರು ಪ್ರಮಾಣವನ್ನು ಇಬ್ಬಾಯಿ-ತುದಿವುಳ್ಳದ್ದೆಂದು ಹೇಳಿರುತ್ತಾರೆ: ಇಸ್ರಾಯೇಲ್ಯರು ದೇವರಿಗೆ ವಿಧೇಯರಾದರೆ ಆಶೀರ್ವಾದಗಳನ್ನು ಮತ್ತು ಅವಿಧೇಯರಾದರೆ ಶಾಪಗಳನ್ನು ಪಡೆಯುವರು. ಕ್ರಿ.ಪೂ. 605ರಲ್ಲಿ ಸಂಭವಿಸಿದ ಮೊದಲನೆಯ ಸೆರೆವಾಸದಲ್ಲಿ ಇದ್ದವರೊಳಗೆ ಒಬ್ಬನಾಗಿದ್ದ ದಾನಿಯೇಲನು, ಇಸ್ರಾಯೇಲ್ಯರು ದೇಶವನ್ನು ಕಳೆದುಕೊಂಡು ಬಾಬಿಲೋನಿನಲ್ಲಿ ಸೆರೆಯಾಳಾಗಿ ಹೋಗುವದರ ಕುರಿತು ಹೀಗೆಯೇ ವಿವರಿಸಿದನು.

> ಇಸ್ರಾಯೇಲ್ಯರೆಲ್ಲರೂ ನಿನ್ನ ಧರ್ಮಪ್ರಮಾಣವನ್ನು ಮೀರಿ ನಿನ್ನ ಮಾತನ್ನು ಕೇಳಲೊಲ್ಲದೆ ಓರೆಯಾಗಿ ಹೋದರು; ಆದಕಾರಣ ನಿನ್ನ ಶಾಪದ ಕೇಡುಗಳೂ ದೇವಸೇವಕನಾದ ಮೋಶೆಯ ಧರ್ಮಶಾಸ್ತ್ರದಲ್ಲಿ ನೀನು ಆಣೆಯಿಟ್ಟು [שְׁבוּעָה, *ಶೆಬು ಆಹ*] ಪ್ರಕಟಿಸಿದ ವಿಪತ್ತುಗಳೂ ನಮ್ಮ ಮೇಲೆ ಸುರಿಯಲ್ಪಟ್ಟಿವೆ; ... [ಆಹಾ, ನಮ್ಮ ದೇವರು] ನಮ್ಮ ಮೇಲೆ ದೊಡ್ಡ ಕೇಡನ್ನು ಬರಮಾಡಿ ನಮ್ಮನ್ನೂ ನಮ್ಮನ್ನಾಳುವ ಅಧಿಪತಿಗಳನ್ನೂ ಕುರಿತು ಗದರಿಸಿ ಹೇಳಿದ ಮಾತುಗಳನ್ನು ನೆರವೇರಿಸಿದ್ದಾನೆ; ಯೆರೂಸಲೇಮಿಗೆ ಆದಂಥ ಕೇಡು ಭೂಮಂಡಲದಲ್ಲಿ ಎಲ್ಲಿಯೂ ಎಂದೂ ಆಗಲಿಲ್ಲವಲ್ಲಾ (ದಾನಿಯೇಲ 9:11, 12; ಒತ್ತಿ ಹೇಳಿದ್ದು ನನ್ನದು).

ಕ್ರಿ.ಪೂ. 587ರಲ್ಲಿ, ಯೆರೂಸಲೇಮಿನ ಮೇಲೆ ಬಾಬಿಲೋನಿನವರು ಹಾಕಿದ್ದ ಮುತ್ತಿಗೆಯ ವೇಳೆ ಯೆಹೂದ ರಾಜ್ಯದ ಅಂತ್ಯವು ಸಮೀಪವಾಗುತ್ತಿದ್ದ ಹಾಗೆ, ಯೆರೆಮೀಯನು

ಪ್ರಲಾಪಿಸಿದನು. ಪ್ರವಾದಿಗೆ ಸತ್ಯವು ಗೊತ್ತಿತ್ತು ಮತ್ತು ದೇವರ ಎಚ್ಚರಿಕೆಗಳನ್ನು ತಿಳಿಸಿದ್ದನು. ಯೆಹೂದದ ಮೇಲೆ ವಿನಾಶವು ಬರಲಿದೆ, ದೇಶವನ್ನು ಅವರಿಗೆ ಬಾಧ್ಯವಾಗಿ ಕೊಡುವೆನೆಂದು ದೇವರು ಪ್ರಮಾಣ ಮಾಡಿರುವಾಗಲೂ ಅದು ಅವರ ಮೇಲೆ ಬರಲಿದೆ, ಯಾಕೆಂದರೆ ಜನರು ಅವಿಧೇಯರಾಗಿದ್ದಾರೆ ಎಂದು ಆತನು ಬರೆದನು:

> ನೀನು ಮಹತ್ಕಾರ್ಯಗಳನ್ನೂ ಉತ್ಪಾತಗಳನ್ನೂ ನಡಿಸಿ ಭುಜಪರಾಕ್ರಮವನ್ನು ತೋರಿಸಿ ... ನಿನ್ನ ಜನರಾದ ಇಸ್ರಾಯೇಲ್ಯರನ್ನು ಐಗುಪ್ತದೇಶದೊಳಗಿಂದ ಬರಮಾಡಿ ಅವರ ಪಿತೃಗಳಿಗೆ ವಾಗ್ದಾನಮಾಡಿದ [ಶಬಾ] ಪ್ರಕಾರ ... ಈ ದೇಶವನ್ನು ಅವರಿಗೆ ಅನುಗ್ರಹಿಸಿದಿ; ಅವರು ಅದನ್ನು ಸೇರಿ ಅನುಭವಿಸಿದರೂ *ನಿನ್ನ ಮಾತಿಗೆ ಕಿವಿಗೊಡಲಿಲ್ಲ, ನಿನ್ನ ಧರ್ಮಾನುಸಾರ ನಡೆಯಲಿಲ್ಲ; ನೀನು ಆಜ್ಞಾಪಿಸಿದವುಗಳಲ್ಲೆಲ್ಲಾ ಒಂದನ್ನೂ ಮಾಡಲಿಲ್ಲ* ... ಆದಕಾರಣ ನೀನು ಈ ಕೇಡನ್ನೆಲ್ಲಾ ಅವರ ಮೇಲೆ ಬರಮಾಡಿದ್ದೀ. ಇಗೋ, ಮುತ್ತಿಗೆಯ ದಿಬ್ಬಗಳು, ಪಟ್ಟಣವನ್ನು ಆಕ್ರಮಿಸುವದಕ್ಕೆ ಬಂದಿದ್ದಾರೆ; ... ಕ್ಷೀಣವಾಗಿ ವಿರೋಧಿಗಳಾದ ಕಸ್ದೀಯರ ಕೈಗೆ ಸಿಕ್ಕಿದೆ; ನೀನು ನುಡಿದದ್ದು ನೆರವೇರಿದೆ, ಇಗೋ, ನೋಡುತ್ತಿದ್ದೀ (ಯೆರೆಮೀಯ 32:21-24; ಒತ್ತಿ ಹೇಳಿದ್ದು ನನ್ನದು).

ಯೆರೆಮೀಯ ನಂತರ ಪ್ರವಾದಿಗಳಿಗೆ ತಮ್ಮ ಸಮಕಾಲೀನರಿಗೆ ಅವರು ಪಶ್ಚಾತ್ತಾಪ ಪಟ್ಟು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ದೇಶವನ್ನು ಕಳೆದುಕೊಳ್ಳುವರೆಂದು ಮನವರಿಕೆ ಮಾಡುವದಕ್ಕೆ ಬಹಳ ಕಷ್ಟಪಟ್ಟರು. ಇಂದು ಕೆಲವರು ಇರುವ ಪ್ರಕಾರವೇ, ಆ ಯೆಹೂದ್ಯರು ದೇಶದ ಕುರಿತಾದ ಪ್ರವಾದನೆಗಳು ಶರತ್ತುಬದ್ಧವಾಗಿದ್ದವೆಂಬ ವಾಸ್ತವಾಂಶವನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸಿದರು. ಜನರು ತಮ್ಮ ಪಿತೃಗಳಿಗೆ ಪ್ರಮಾಣ ಮಾಡಿದ್ದ ವಾಗ್ದಾನಗಳ ಒಂದು ಬದಿಯ ಹಿಡಿಕೆಯನ್ನು ಮಾತ್ರವೇ ಹಿಡುಕೊಂಡಿದ್ದರು, ಅವುಗಳನ್ನು ಅಬಾಧಿತ ಎಂದು ವ್ಯಾಖ್ಯಾನಿಸುತ್ತಿದ್ದರು. ಅವರು ದೇವರಿಗೆ ಮತ್ತು ಮೋಶೆಯ ಧರ್ಮಶಾಸ್ತ್ರಕ್ಕೆ ನಂಬಿಗಸ್ತರಾಗಿರತಕ್ಕದ್ದು ಎಂಬ ವಾಸ್ತವಾಂಶವನ್ನು ನಿರ್ಲಕ್ಷ್ಯ ಮಾಡಿದರು.

2. *ಸಿಂಹಾಸನದ ಕುರಿತಾದ ವಾಗ್ದಾನದಲ್ಲಿದ್ದ ಶರತ್ತುಬದ್ಧ ಸ್ವಭಾವ.* ದೇವರ ಕೆಲವೊಂದು ವಾಗ್ದಾನಗಳ ಶರತ್ತುರಹಿತವೆಂಬಂತೆ ಕಾಣಿಸಬಹುದು ಯಾಕೆಂದರೆ ಪ್ರತಿಯೊಂದು ಸನ್ನಿವೇಶದಲ್ಲಿಯೂ ನಿರ್ದಿಷ್ಟವಾದ ಶರತ್ತುಗಳು ತಿಳಿಸಲ್ಪಟ್ಟಿರುವದಿಲ್ಲ. ಇದಕ್ಕೊಂದು ದೃಷ್ಟಾಂತವೆಂದರೆ ದೇವರು 2 ಸಮುವೇಲ 7:16ರಲ್ಲಿ ದಾವೀದನ ಸಿಂಹಾನದ ಕುರಿತಾಗಿ ಮಾಡಿದ ಪ್ರಮಾಣ: "ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತವಾಗಿರುವದು." ಈ ಘೋಷಣೆಯಿಂದಾಗಿ ಯೆರೂಸಲೇಮ್ ಪಟ್ಟಣವು ಪತನವಾಗುವಂತೆ ಅಥವಾ ದಾವೀದನ ರಾಜವಂಶವು ಅಳಿದುಹೋಗುವಂತೆ ಎಂದಿಗೂ ದೇವರು ಅನುಮತಿಸುವದಿಲ್ಲ, ಜನಾಂಗವು ಎಷ್ಟೇ ಭ್ರಷ್ಟಗೊಂಡರೂ ಅಥವಾ ವಿಗ್ರಹಾರಾಧಕವಾದರೂ ಅಥವಾ ಮೋಶೆಯ ಧರ್ಮಶಾಸ್ತ್ರಕ್ಕೆ ಜನರು ಎಷ್ಟೇ ಅಪನಂಬಿಗಸ್ತರಾಗಿದ್ದರೂ ಸರಿಯೇ ಹೀಗಾಗುವದಿಲ್ಲ ಎಂದು ನಂಬುವಂತೆ ಯೆಹೂದ್ಯರನ್ನು ನಡಿಸಿತ್ತು.

ಕೀರ್ತನೆ 89 ಈ ಸಮಸ್ಯೆಗೆ ಉದಾಹರಣೆಯನ್ನು ಒದಗಿಸುತ್ತದೆ. ಲೇಖಕನು ದಾವೀದನಿಗೆ ದೇವರು ಮಾಡಿದ ಪ್ರಮಾಣಕ್ಕೆ ನಂಬಿಗಸ್ತನಾಗಿರುವನೆಂಬುದಕ್ಕಾಗಿ ಆತನನ್ನು ಸ್ತುತಿಸುವ ಮೂಲಕ ಆರಂಭಿಸಿ, ಹೀಗೆ ಹೇಳುತ್ತಾನೆ, "ನಾನು ಆರಿಸಿಕೊಂಡ ಸೇವಕನಾದ ದಾವೀದನ ಸಂಗಡ ಒಡಂಬಡಿಕೆಮಾಡಿಕೊಂಡು ಆಣೆಯಿಟ್ಟು [*ಶೆಬಾ*] ಶಾಶ್ವತವಾಗಿ ನಿನ್ನ ಸಂತತಿಯನ್ನು ಸ್ಥಾಪಿಸುವೆನು, ತಲತಲಾಂತರಗಳಿಗೂ ನಿನ್ನ ಸಿಂಹಾಸನವನ್ನು ಸ್ಥಿರಪಡಿಸುವೆನು ಎಂದು

ಹೇಳಿದ್ದೇನೆ ಎಂಬದೇ (ಕೀರ್ತನೆ 89:3, 4). ಬಳಿಕ, ದಾವೀದನ ಕರೆಯಿವಿಕೆ, ಅಭಿಷೇಕ, ಮತ್ತು ಯೆಹೋವನ ಸಂಗಡ ಆತನಿಗಿರುವ ಸಂಬಂಧದ ಕುರಿತು ಪುನರಾವರ್ತನೆ ಮಾಡಿದ ನಂತರ, ಕೀರ್ತನೆಗಾರನು ದೇವರ ಮಾತುಗಳನ್ನು ಪುನರುಚ್ಚರಿಸುತ್ತಾನೆ: "ನನ್ನ ಪವಿತ್ರತ್ವದಲ್ಲಿ ಆಣೆಯಿಟ್ಟು ಒಂದು ಸಂಗತಿ ಹೇಳಿದ್ದೇನೆ; ಅದರ ವಿಷಯದಲ್ಲಿ ದಾವೀದನಿಗೆ ಸುಳ್ಳುಗಾರನಾಗುವದಿಲ್ಲ. ಅದೇನಂದರೆ ಅವನ ಸಂತತಿಯು ಶಾಶ್ವತವಾಗಿ ಇರುವದು; ಅವನ ಸಿಂಹಾಸನವು ಸೂರ್ಯನಂತೆ ನನ್ನ ಎದುರಿನಲ್ಲಿದ್ದು ಚಂದ್ರನಂತೆ ನಿತ್ಯಕ್ಕೂ ಸ್ಥಿರವಾಗಿರುವದು. ಪರಲೋಕದ ಸಾಕ್ಷಿ ಸತ್ಯವೇ ಸರಿ" (ಕೀರ್ತನೆ 89:35-37).

ಹೇಗೂ, ಧಾಟಿಯು ಕೀರ್ತನೆಯ ಎರಡನೆಯ ಅರ್ಧಭಾಗದಲ್ಲಿ ವ್ಯತ್ಯಾಸವಾಗಿರುತ್ತದೆ. ಮಾರ್ಪಡದಂಥ ದೇವರ ಪ್ರೀತಿಯು ಮಾರ್ಪಟ್ಟಿರುತ್ತದೋ ಎಂಬಂತೆ ಅಲ್ಲಿ ಅನ್ನಿಸುತ್ತದೆ; ದಾವೀದನಿಗೆ ಮಾಡಲ್ಪಟ್ಟ ಒಡಂಬಡಿಕೆಯ ವಾಗ್ದಾನಕ್ಕೆ ಆತನ ನಂಬಿಗಸ್ತಿಕೆಯು ಪ್ರಶ್ನಾರ್ಹವಾಗಿತ್ತು. ದೇವರ "ಅಭಿಷಿಕ್ತ" (ಅರಸನು) "ಅಸಹ್ಯಿಸಿ ತಳ್ಳಿಬಿಟ್ಟ" ವ್ಯಕ್ತಿಯಾಗಿದ್ದನು (ಕೀರ್ತನೆ 89:38), ಮತ್ತು ದೇವರು ಎಂದಿಗೂ ಮಾಡುವದಿಲ್ಲ ಎಂದು ಪ್ರಮಾಣ ಮಾಡಿದ್ದ ಸಂಗತಿಯು ಈಗ ಸಂಭವಿಸಿ ಬಿಟ್ಟಿತ್ತು: "... ಅವನ ಕಿರೀಟವನ್ನು ನೆಲಕ್ಕೆ ಹಾಕಿ ಅಪವಿತ್ರ ಮಾಡಿದ್ದೀ. ಅವನ ದೇಶದ ಮೇರೆಗಳನ್ನು ಕೆಡವಿ ದುರ್ಗಗಳನ್ನು ಹಾಳುಮಾಡಿದ್ದೀ" (ಕೀರ್ತನೆ 89:39, 40). ಯೋಚಿಸಲಾಗದಂಥದ್ದು ಸಂಭವಿಸಿತ್ತು: "ಅವನ ತೇಜಸ್ಸನ್ನು ತಡೆದುಬಿಟ್ಟಿದ್ದಿ; ಅವನ ಸಿಂಹಾಸನವನ್ನು ನೆಲಕ್ಕುರುಳಿಸಿದ್ದೀ" (ಕೀರ್ತನೆ 89:44). ಇದರೊಂದಿಗೆ, ಕೀರ್ತನೆಗಾರನು ಒಂದು ಅಳಲಿನ ಪ್ರಶ್ನೆಯನ್ನು ಕೇಳಿದನು: "ಕರ್ತನೇ, ನೀನು ನಿನ್ನ ಸತ್ಯತೆಯಲ್ಲಿ ಆಣೆಯಿಟ್ಟು [*ಶೆಬಾ*] ದಾವೀದನಿಗೆ ವಾಗ್ದಾನಮಾಡಿ ನಡಿಸುತ್ತಿದ್ದ ಮುಂಚಿನ ಕೃಪಾಕಾರ್ಯಗಳು ಎಲ್ಲಿ?" (ಕೀರ್ತನೆ 89:49).

ಖಂಡಿತವಾಗಿಯೂ, ಯೆರೂಸಲೇಮ್ ಪಟ್ಟಣವು ಪತನಗೊಂಡದ್ದು, ದಾವೀದನ ರಾಜವಂಶವು ಅಳಿದುಹೋಗಿದ್ದು ದುಃಖಕರವಾದದ್ದು, ಮತ್ತು ದೇವರ ಜನರು ತಮ್ಮ ದೇಶವನ್ನು ಕಳೆದುಕೊಂಡಿದ್ದರು; ಆದರೆ ಈ ಹಂತದಲ್ಲಿ ಕೀರ್ತನೆಗಾರನ ತಿಳುವಳಿಕೆಯು ದೋಷದಿಂದ ಕೂಡಿತ್ತು ಯಾಕೆಂದರೆ ಮೋಶೆಯ ಒಡಂಬಡಿಕೆಗಿಂತಲೂ ದಾವೀದನ ಒಡಂಬಡಿಕೆಯ ಕಡೆಗೆ ಮುಖ್ಯವಾದ ಗಮನ ಕೊಟ್ಟನು. ಇಂದು ಕೆಲವು ಸುವಾರ್ತಿಕ ಕ್ರೈಸ್ತರು ದಾವೀದನಿಗೆ ದೇವರು ಮಾಡಿದ ಪ್ರಮಾಣವನ್ನು ಅಬಾಧಿತ ಮತ್ತು ಶರತ್ತಿಲ್ಲದ್ದು ಎಂಬುದಾಗಿ ಕಾಣುವವರಾಗಿದ್ದು ಅದೇ ತಪ್ಪನ್ನು ಆತನು ಸಹ ಮಾಡಿದ್ದನು, ವಾಸ್ತವಿಕದಲ್ಲಿ, ಬೇರೆ ಅನೇಕ ವಾಕ್ಯಭಾಗಗಳು ಅದರಲ್ಲಿರುವ ಶರತ್ತುಬದ್ಧ ಸ್ವಭಾವವನ್ನು ತಿಳಿಯಪಡಿಸುತ್ತವೆ.

ಇದರ ಒಂದು ಪ್ರಧಾನ ಉದಾಹರಣೆಯು ಯೆರೂಸಲೇಮಿನಲ್ಲಿನ ದೇವಾಲಯದ ಪ್ರತಿಷ್ಠೆಗೆ ಸಂಬಂಧಿಸಿದಂತೆ ಪ್ರಕಟಗೊಳಿಸಲ್ಪಟ್ಟಿದೆ, ಆ ವೇಳೆಯಲ್ಲಿ ದೇವರು ಸೊಲೊಮೋನನಿಗೆ ಸಿಂಹಾಸನ, ರಾಜ್ಯ, ದೇಶ, ಮತ್ತು ದೇವಾಲಯ ಇವುಗಳ ಕುರಿತಾದ ವಾಗ್ದಾನಗಳು ಶರತ್ತುಬದ್ಧವಾಗಿದೆ ಎಂದು ತಿಳಿಸಿದನು. ಇಸ್ರಾಯೇಲ್ಯರು ಯೆಹೋವನಿಗೆ ಅಪನಂಬಿಗಸ್ತರಾಗಿದ್ದು ಬೇರೆ ದೇವರುಗಳನ್ನು ಪೂಜಿಸುವದಾದರೆ ಈ ಎಲ್ಲಾ ವಾಗ್ದಾನಗಳನ್ನು ಕಳೆದುಕೊಳ್ಳುವರು ಎಂದು ಆತನು ಹೇಳಿದನು. 1 ಅರಸು 8ನೇ ಅಧ್ಯಾಯದಲ್ಲಿ ಸೊಲೊಮೋನನು ಮಾಡಿದ ಪ್ರಾರ್ಥನೆಗೆ ಪ್ರತ್ಯುತ್ತರವಾಗಿ, ದೇವರು ಹೀಗೆ ಹೇಳಿದನು,

> ನೀನು ನನಗೆ ಮಾಡಿದ ಪ್ರಾರ್ಥನೆಯನ್ನೂ ವಿಜ್ಞಾಪನೆಯನ್ನೂ ಕೇಳಿದ್ದೇನೆ. ನನ್ನ ನಾಮಮಹತ್ತು ನೀನು ಕಟ್ಟಿಸಿದ ಆಲಯದಲ್ಲಿ ಸದಾ ಇರುವಂತೆ ಅದನ್ನು ನನಗೋಸ್ಕರ ಪ್ರತಿಷ್ಠಿಸಿಕೊಂಡಿದ್ದೇನೆ; ... ನೀನು ನಿನ್ನ ತಂದೆಯಾದ ದಾವೀದನಂತೆ

> ಪೂರ್ಣಮನಸ್ಸಿನಿಂದಲೂ ಯಥಾರ್ಥಚಿತ್ತದಿಂದಲೂ ನನಗೆ ನಡೆದುಕೊಂಡು ... ಬರುವದಾದರೆ ಇಸ್ರಾಯೇಲ್ಯರಲ್ಲಿ ನಿನ್ನ ಸಿಂಹಾಸನವನ್ನು ಸದಾ ಸ್ಥಿರಪಡಿಸುವೆನು; ಇಸ್ರಾಯೇಲ್‌ಸಿಂಹಾಸನದ ಮೇಲೆ ನಿನ್ನ ಸಂತಾನದವರು ತಪ್ಪದೆ ಕೂತುಕೊಳ್ಳುವರು ಎಂಬದಾಗಿ ನಿನ್ನ ತಂದೆಯಾದ ದಾವೀದನಿಗೆ ನಾನು ಮಾಡಿದ ವಾಗ್ದಾನವನ್ನು ನೆರವೇರಿಸುವೆನು. ಆದರೆ ನೀವಾಗಲಿ ನಿಮ್ಮ ಮಕ್ಕಳಾಗಲಿ ... ನನ್ನನ್ನು ಬಿಟ್ಟು ಅನ್ಯದೇವತೆಗಳನ್ನು ಹಿಂಬಾಲಿಸಿ ಅವುಗಳಿಗೆ ಕೈ ಮುಗಿಯುವದಾದರೆ ಇಸ್ರಾಯೇಲ್ಯರನ್ನು ನಾನು ಅವರಿಗೆ ಕೊಟ್ಟ ದೇಶದಿಂದ ತೆಗೆದುಹಾಕಿ ನನ್ನ ಹೆಸರಿಗೋಸ್ಕರ ಪ್ರತಿಷ್ಠಿಸಿಕೊಂಡ ಆಲಯವನ್ನು ನಿರಾಕರಿಸಿಬಿಡುವೆನು. ಇಸ್ರಾಯೇಲ್ಯರು ಎಲ್ಲಾ ಜನಾಂಗಗಳವರ ಗಾದೆಗೂ ನಿಂದೆಗೂ ಆಸ್ಪದರಾಗುವರು (1 ಅರಸು 9:3-7).

ದಾವೀದನ ಶಾರೀರಿಕ ಸಿಂಹಾಸನದ ತಾತ್ಕಾಲಿಕ ಸ್ವಭಾವವು ಕೀರ್ತನೆ 132:11, 12 ವಚನಗಳಲ್ಲಿ ಒತ್ತಿ ಹೇಳಲ್ಪಟ್ಟಿದೆ, ಅಲ್ಲಿ ದೇವರ ಪ್ರಮಾಣವು ತನ್ನ ಬದುಕುಳಿಯುವಿಕೆಯನ್ನು ಜನರು ಮೋಶೆಯ ಒಡಂಬಡಿಕೆಗೆ ವಿಧೇಯರಾಗುತ್ತಾರೋ ಅಥವಾ ಇಲ್ಲವೋ ಎಂಬುದರ ಮೇಲೆ ಆಧಾರವಾಗಿಸುತ್ತದೆ:

> ಯೆಹೋವನು ದಾವೀದನಿಗೆ ಮಾಡಿದ ಪ್ರಮಾಣವು ಸ್ಥಿರವಾಗಿದೆ;
> ಆತನು ಅದನ್ನು ಬದಲಿಸುವದಿಲ್ಲ -
> ನಿನ್ನ ಸಂತಾನದವರನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು;
> ನಿನ್ನ ಮಕ್ಕಳು ನನ್ನ ನಿಬಂಧನೆಯನ್ನೂ ನಾನು ಆಜ್ಞಾಪಿಸಿದ ಕಟ್ಟಳೆಗಳನ್ನೂ
> ಕೈಕೊಂಡು ನಡೆಯುವದಾದರೆ
> ಅವರ ಮಕ್ಕಳು ನಿನ್ನ ಸಿಂಹಾಸನದಲ್ಲಿ ಸದಾಕಾಲ ಕೂತುಕೊಳ್ಳುವರು.

ಯೆಹೋವನು "ಮಾಡುವದಾದರೆ" ಎಂದು ಹೇಳಿದ್ದು ಈ ಹೇಳಿಕೆಯಲ್ಲಿರುವ ಅರ್ಹಗೊಳಿಸುವಂಥದ್ದಾಗಿದ್ದು ದಾವೀದನಿಗೆ ಮತ್ತು ಆತನ ಸಂತತಿಯವರಿಗೆ ಆತನು ಮಾಡಿದ ವಾಗ್ದಾನಗಳು ಅಬಾಧಿತವಾದವುಗಳಲ್ಲ ಎಂಬುದನ್ನು ತೋರಿಸಿ ಕೊಟ್ಟಿತು.

3. *ಸ್ವದೇಶಕ್ಕೆ ಹಿಂದಿರುಗುವ ವಾಗ್ದಾನದಲ್ಲಿರುವ ಶರತ್ತುಬದ್ಧ ಸ್ವಭಾವ.* ಸೆರೆಯಾಳುಗಳು ತಮ್ಮ ಆಯಾ ಸೆರೆವಾಸಗಳ ಕಾಲಮಾನಗಳು ಮುಗಿದ ಬಳಿಕ ಸ್ವದೇಶಕ್ಕೆ ಹಿಂದಿರುಗಿ ಬರುವ ಕುರಿತಾಗಿ, ಮಾತ್ರವಲ್ಲದೆ ದಾವೀದನ ಸಿಂಹಾಸನವನ್ನು ಪುನಃ ಸ್ಥಾಪಿಸುವದರ ಕುರಿತಾಗಿ ಹಲವಾರು ಪ್ರವಾದನೆಗಳು ಮುಂತಿಳಿಸಿದವು (ಯೆಹೆಜ್ಕೇಲ 37:1–28; ಯೆರೆಮೀಯ 23:1–8). ಈ ನಿರೀಕ್ಷೆಗಳು ಸಹ ಜನರು ಯೆಹೋವನ ಕಡೆಗೆ ಪುನಃ ತಿರುಗಿಕೊಳ್ಳುವದರ ಮೇಲೆ ಆಧಾರವಾಗಿದ್ದವು. ಇದರ ಕುರಿತಾದ ಒಂದು ಗಮನಿಸತಕ್ಕ ದೃಷ್ಟಾಂತವು 2 ಪೂರ್ವಕಾಲವೃತ್ತಾಂತ 30ರಲ್ಲಿ ಇರುತ್ತದೆ. ಇಸ್ರಾಯೇಲಿನ ಉತ್ತರ ರಾಜ್ಯವು ಪತನಗೊಂಡು ಅಶ್ಶೂರರ ಕೈಗಳಿಗೆ ವಶವಾದ ಬಳಿಕ, ಹಿಜ್ಕೀಯನು ಯೆಹೂದದಲ್ಲಿ ಸುಧಾರಣೆಗಳನ್ನು ತಂದನು. ಆತನು ತನ್ನ ಜನರ ಮತ್ತು ಅಶ್ಶೂರದೊಳಕ್ಕೆ ಸೆರೆಯಾಳುಗಳಾಗಿ ಒಯ್ಯಲ್ಪಟ್ಟವರಲ್ಲಿ ಬದುಕುಳಿದಿದ್ದ ಉತ್ತರ ರಾಜ್ಯದ ಶೇಷ ಜನರ ನಡುವೆ ಐಕ್ಯತೆಯನ್ನು ಉತ್ತೇಜಿಸಲು ಬಯಸಿದ್ದನು. ಅರಸನು ಒಂದು ಕಾಲದಲ್ಲಿ ಇಸ್ರಾಯೇಲ್ ಆಗಿದ್ದಂಥ ಪ್ರಾಂತ್ಯದಲ್ಲೆಲ್ಲಾ ಮತ್ತು ಯೆಹೂದದ ಉತ್ತರ ರಾಜ್ಯದುದ್ದಕ್ಕೂ ಓಲೆಕಾರರನ್ನು ಕಳುಹಿಸಿ ದೇಶದಲ್ಲಿ ಉಳಿದಿರುವ ಎಲ್ಲಾ ಯೆಹೂದ್ಯರು ಯೆರೂಸಲೇಮಿನಲ್ಲಿ ಒಂದಾಗಿ ಕೂಡಿ ಬರಬೇಕೆಂದು ಮತ್ತು ತಾವು ಪಸ್ಕ ಹಬ್ಬವನ್ನು ಆಚರಿಸುವ ವೇಳೆ ಯೆಹೋವನಿಗೆ ತಮ್ಮ ಸಮರ್ಪಣೆಯನ್ನ ನವೀಕರಿಸಿಕೊಳ್ಳಬೇಕೆಂದು ಆಮಂತ್ರಿಸುವದಕ್ಕೆ ಪತ್ರಗಳನ್ನು ತಲುಪಿಸಿದನು

(2 ಪೂರ್ವಕಾಲವೃತ್ತಾಂತ 30:1-5). ಹಿಜ್ಕೀಯನ ಆಮಂತ್ರಣವು ಈ ರೀತಿಯಾಗಿತ್ತು,

> ಇಸ್ರಾಯೇಲ್ಯರೇ, ಅಬ್ರಹಾಮ್ ಇಸಾಕ್ ಇಸ್ರಾಯೇಲರ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳಿರಿ. ಆಗ ಆತನೂ ನಿಮ್ಮಲ್ಲಿ ಅಶ್ಶೂರದ ಅರಸನ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡು ಉಳಿದವರ ಕಡೆಗೆ ತಿರುಗಿಕೊಳ್ಳುವನು ... ಈಗ ನಿಮ್ಮ ಪಿತೃಗಳಂತೆ ಆಜ್ಞೆಗೆ ಮಣಿಯದವರಾಗಿರಬೇಡಿರಿ, ಯೆಹೋವನಿಗೆ ಅಧೀನರಾಗಿರಿ. ನಿಮ್ಮ ದೇವರಾದ ಯೆಹೋವನು ಸದಾಕಾಲಕ್ಕೂ ಪ್ರತಿಷ್ಠಿಸಿಕೊಂಡ ಪವಿತ್ರಾಲಯಕ್ಕೆ ಬಂದು ಆತನನ್ನು ಸೇವಿಸಿರಿ. ಆಗ ನಿಮ್ಮ ಮೇಲಿರುವ ಆತನ ಉಗ್ರಕೋಪವು ತೊಲಗಿಹೋಗುವದು. ನೀವು ಯೆಹೋವನ ಕಡೆಗೆ ತಿರುಗಿಕೊಳ್ಳುವದಾದರೆ ನಿಮ್ಮ ಸಹೋದರರೂ ಮಕ್ಕಳೂ ತಮ್ಮನ್ನು ಸೆರೆಯೊಯ್ದುವರ ದೃಷ್ಟಿಯಲ್ಲಿ ದಯೆಗೆ ಪಾತ್ರರಾಗಿ ತಿರಿಗಿ ಸ್ವದೇಶಕ್ಕೆ ಬರುವರು. ನಿಮ್ಮ ದೇವರಾದ ಯೆಹೋವನು ದಯೆಯೂ ಕನಿಕರವೂ ಉಳ್ಳವನಾಗಿರುತ್ತಾನೆ. ಆತನು ತನ್ನ ಕಡೆಗೆ ತಿರುಗಿಕೊಳ್ಳುವ ನಿಮ್ಮನ್ನು ಕಟಾಕ್ಷಿಸದೆ ಇರುವದಿಲ್ಲ ಎಂಬದೇ (2 ಪೂರ್ವಕಾಲವೃತ್ತಾಂತ 30:6-9).

ಅಶ್ಶೂರದ ಸೆರೆವಾಸದಿಂದ ಹಿಂದಿರುಗುವಿಕೆಯು ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿ ಮಿಕ್ಕವರು ಪಶ್ಚಾತ್ತಾ ಪಡುವದರ ಮೇಲೆ ಆಧಾರವಾಗಿತ್ತು. ಅವರು ಯೆಹೋವನನ್ನು ಆರಾಧಿಸುವದಕ್ಕೋಸ್ಕರ ಯೆರೂಸಲೇಮಿನಲ್ಲಿರುವ ತಮ್ಮ ಯೆಹೂದಿ ಸಹೋದರರ ಜೊತೆ ಒಂದುಗೂಡಿಕೊಳ್ಳಲು ಮನಸ್ಸುಳ್ಳವರಾಗಿರಬೇಕಾಗಿತ್ತು. ಹೇಗೂ, ಹಿಜ್ಕೀಯನು ಓಲೆಕಾರರು ನೀಡಿದ ಆಮಂತ್ರಣಕ್ಕೆ ಅವರು ನೀಡಿದ ಪ್ರತಿಕ್ರಿಯೆಯು ನಿರಾಶೆದಾಯಕವಾಗಿತ್ತು, ಅದನ್ನೇ ಚರಿತ್ರೆಯು ತಿಳಿಯಪಡಿಸುತ್ತದೆ:

> ದೂತರು ಎಫ್ರಾಯೀಮ್ ಮನಸ್ಸೆ ಜೆಬುಲೂನ್ ಪ್ರಾಂತಗಳಲ್ಲಿ ಪಟ್ಟಣದಿಂದ ಪಟ್ಟಣಕ್ಕೆ ಹೋಗುತ್ತಿರಲು ಜನರು ಅವರನ್ನು ಕಂಡು ನಕ್ಕು ಗೇಲಿಮಾಡಿದರು. ಕೆಲವು ಮಂದಿ ಆಶೇರ್ಯರೂ ಮನಸ್ಸೆಯವರೂ ಜೆಬುಲೂನ್ಯರೂ ಮಾತ್ರ ತಮ್ಮನ್ನು ತಗ್ಗಿಸಿಕೊಂಡು ಯೆರೂಸಲೇಮಿಗೆ ಬಂದರು (2 ಪೂರ್ವಕಾಲವೃತ್ತಾಂತ 30:10, 11).

ಈ ವಾಕ್ಯದ ಸೂಚ್ಯಾರ್ಥವು ಏನೆಂದರೆ ಇಸ್ರಾಯೇಲ್ಯರಲ್ಲಿ ಕೇಲವೇ ಕೆಲವು ಜನರು ಮಾತ್ರವೇ ಯೆಹೋವನ ಮುಂದೆ ತಮ್ಮನ್ನು ತಗ್ಗಿಸಿಕೊಂಡರೆ, ಉತ್ತರ ರಾಜ್ಯದಲ್ಲಿದ್ದ ಶೇಷ ಜನರೊಳಗೆ ಬಹುಪಾಲು ಜನರ ಪಶ್ಚಾತ್ತಾಪ ಪಟ್ಟು ಯೆಹೋವನ ಕಡೆಗೆ ಹಿಂದಿರುಗಬೇಕೆಂದು ಹಿಜ್ಕೀಯನು ನೀಡಿದ ಕರೆಯನ್ನು ಅಪಹಾಸ್ಯ ಮಾಡಿದರು. ಎರಡು ರಾಜ್ಯಗಳ ನಡುವೆ ಹದಗೆಟ್ಟಿದ್ದ ಸಂಬಂಧದ ಸುದೀರ್ಘವಾದ ಇತಿಹಾಸವು ಇಸ್ರಾಯೇಲಿನಲ್ಲಿದ್ದ ಶೇಷ ಜನರ ಹೃದಯಗಳನ್ನು ಕಠಿಣಗೊಳಿಸಿತ್ತು, ಆದರೆ ಅವರು ಯೆಹೂದದೊಂದಿಗೆ ಪುನಃ ಒಂದುಗೂಡಿಕೊಳ್ಳಲು ನಿರಾಕರಿಸಿದ್ದು ಅವರ ಸಹೋದರರು ಅಶ್ಶೂರದ ಸೆರೆವಾಸದಿಂದ ಹಿಂದಿರುಗಿ ಬಾಬಿಲೋನಿನ ಸೆರೆವಾಸದ ಬಳಿಕ ಯೆಹೂದದೊಂದಿಗೆ ಪುನಃ ಒಂದಾಗುವ ಸಾಧ್ಯತೆಯನ್ನು ರದ್ದುಗೊಳಿಸಿತ್ತು.

ಸೆರೆವಾಸದಿಂದ ಹಿಂದಿರುಗುವಿಕೆ ಸೇರಿದಂತೆ, ದೇಶದ ಕುರಿತ ವಾಗ್ದಾನದಲ್ಲಿರುವ ಶರತ್ತುಬದ್ಧ ಸ್ವಭಾವದ ಮತ್ತಷ್ಟು ಪುರಾವೆಯು ಸೆರೆವಾಸದ ಬಳಿಕ ಯೆರೂಸಲೇಮಿಗೆ ಹಿಂದಿರುಗಿ ಬಂದಿದ್ದ ಯೆಹೂದ್ಯರಿಗೋಸ್ಕರ ನೆಹಮೀಯನು ಮಾಡುವ ಪ್ರಾರ್ಥನೆಯಲ್ಲಿ ವಿವರಿಸಲ್ಪಟ್ಟಿದೆ:

ನೀವು ಅವಿಧೇಯರಾದರೆ ನಿಮ್ಮನ್ನು ಜನಾಂಗಗಳೊಳಗೆ ಚದರಿಸಿ ಬಿಡುವೆನು; ನನ್ನ ಕಡೆಗೆ ತಿರುಗಿಕೊಂಡು ನನ್ನ ಆಜ್ಞೆಗಳನ್ನು ಅನುಸರಿಸಿ ನಡೆಯುವದಾದರೆ ನಿಮ್ಮವರು ಆಕಾಶದ ಕೊನೆಯವರೆಗೆ ಒಯ್ಯಲ್ಪಟ್ಟರೂ ನಾನು ಅವರನ್ನು ಅಲ್ಲಿಂದ ಕೂಡಿಸಿ ನನ್ನ ನಾಮಸ್ಥಾಪನೆಗೋಸ್ಕರ ಆರಿಸಿದ ಸ್ಥಳಕ್ಕೆ ತಿರಿಗಿ ಬರಮಾಡುವೆನು ಎಂದು ಹೇಳಿದಿಯಲ್ಲಾ; ಆ ಮಾತನ್ನು ನೆನಪು ಮಾಡಿಕೊಳ್ಳಬೇಕು, ಸ್ವಾಮೀ (ನೆಹಮೀಯ 1:8, 9).

ಇಸ್ರಾಯೇಲ್ಯರು ಸೆರೆವಾಸದಿಂದ ಹಿಂದಿರುಗುವಿಕೆ ಮತ್ತು ದೇಶವನ್ನು ಪುನಃ ಸ್ವಾಧೀನಪಡಿಸಿಕೊಳ್ಳುವಿಕೆಯು ಜನರು ದೇವರ ಕಡೆಗೆ ಹಿಂದಿರುಗಿ ಆತನ ಆಜ್ಞೆಗಳಿಗೆ ವಿಧೇಯರಾಗುವದರ ಮೇಲೆ ಆಧಾರವಾಗಿತ್ತು. ನಿರೀಕ್ಷೆ ಶ್ರೇಷ್ಠ ದೈವೋಕ್ತಿಗಳು (ನೋಡಿರಿ ಯೆರೆಮೀಯ 23; ಯೆಹೆಜ್ಕೇಲ 37) ಒಂದು ಮಿತವಾದ ಮತ್ತು ಭಾಗಶಃವಾದ ರೀತಿಯಲ್ಲಿ ಮಾತ್ರವೇ ನೆರವೇರಿಸಲ್ಪಟ್ಟವು ಯಾಕೆಂದರೆ ಸೆರೆಯಾಳುಗಳೊಳಗೆ ಬಹುಪಾಲು ಮಂದಿ ಎಂದಿಗೂ ಪಶ್ಚಾತ್ತಾಪ ಪಡಲೇ ಇಲ್ಲ. ಯೆಶಾಯನು ಇಸ್ರಾಯೇಲನ್ನು ಸೆರೆವಾಸದಲ್ಲಿ "ಕೊಳ್ಳೆಗೆ ಈಡಾಗಿ ಸೂರೆಹೋಗಿದ್ದ" ನಂತರವೂ ದೇವರ ಕರೆಯನ್ನು ಆಲಿಸುವದಕ್ಕೆ ಮತ್ತು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದಕ್ಕೆ ನಿರಾಕರಿಸುವಂಥ "ಕಿವುಡ" ಮತ್ತು "ಕುರುಡ" ದೇವರ "ಸೇವಕ" ಎಂದು ಚಿತ್ರಿಸುತ್ತಾನೆ (ಯೆಶಾಯ 41:8; 42:18-22). ಸರಳವಾಗಿ ಹೇಳುವದಾದರೆ, ಬಹಳಷ್ಟು ಜನರು ತಮ್ಮ ದುರಂತಕರ ಅನುಭವಗಳಿಂದ ಪಾಠವನ್ನು ಕಲಿತುಕೊಂಡು ದೇವರ ಕಡೆಗೆ ಹಿಂದಿರುಗಲು ವಿಫಲರಾದರು.

ಇಸ್ರಾಯೇಲ್ ಮತ್ತು ಯೆಹೂದದ ಕಡೆಯಿಂದ ಎಷ್ಟು ಜನರು ಸೆರೆಯಾಳುಗಳಾಗಿ ಒಯ್ಯಲ್ಪಟ್ಟರು ಎಂಬುದು ನಮಗೆ ತಿಳಿಯದು. ಕೆಲವರು ಅದು 300,000 ಮತ್ತು 500,000 ನಡುವಿನ ಸಂಖ್ಯೆಯಾಗಿರಬಹುದು ಅಂದಾಜು ಮಾಡುತ್ತಾರೆ, ಅದು ತಿಗ್ಲತ್ಪಿಲೆಸೆರನು ಗಲಿಲಾಯ ಮತ್ತು ಟ್ರಾನ್ಸಯೋರ್ದನ್ ಸ್ಥಳಗಳಿಂದ ಕ್ರಿ.ಪೂ. 732ರಲ್ಲಿ ಇಸ್ರಾಯೇಲ್ಯರ ಜನಸಂಖ್ಯೆಯಲ್ಲಿ ಬೃಹತ್ ಭಾಗಗಳನ್ನು ತೆಗೆದು ಹಾಕುವದರೊಂದಿಗೆ ಆರಂಭಗೊಂಡಿತ್ತು (2 ಅರಸು 15:29). ಇದಾದ ಬಳಿಕ ಒಂದು ದಶಕದ ನಂತರ, ಕ್ರಿ.ಪೂ. 722ರಲ್ಲಿ ಸಮಾರ್ಯವು ಪತನಗೊಳ್ಳುವದರೊಂದಿಗೆ ಅಂತಿಮ ನಾಶನವು ಸಂಭವಿಸಿತ್ತು. ಅಶ್ಶೂರದ ಅರಸನು "ಎಲ್ಲಾ ಇಸ್ರಾಯೇಲ್ಯರನ್ನು ಅಶ್ಶೂರ್ದೇಶಕ್ಕೆ ಒಯ್ದುನು" ಎಂದಷ್ಟೆ ಶಾಸ್ತ್ರಗಳು ತಿಳಿಸುತ್ತವೆ (2 ಅರಸು 17:6). ಸುಮಾರು ಇಪ್ಪತ್ತು ವರ್ಷಗಳ ಬಳಿಕ, ಅಶ್ಶೂರದ ಮತ್ತೊಬ್ಬ ಅರಸನಾದ ಸನ್ಹೇರೀಬನು ದಕ್ಷಿಣ ರಾಜ್ಯವಾದ ಯೆಹೂದದ ಮೇಲೆ ದಾಳಿ ಮಾಡಿದನು ಯಾಕೆಂದರೆ ಹಿಜ್ಕೀಯನು ಆತನ ವಿರುದ್ಧ ತಿರುಗಿ ಬಿದ್ದು ಬೇರೆ ದೇಶಗಳ ಸಂಗಡ ರಕ್ಷಣಾತ್ಮಕ ಮೈತ್ರಿ ಮಾಡಿಕೊಂಡಿದ್ದನು (2 ಅರಸು 18:7). ಸನ್ಹೇರೀಬನ ಸೈನ್ಯವು ದೇಶದ ಮೇಲೆ ದಾಳಿ ಮಾಡಿತ್ತು, ಮತ್ತು ಆತನು ತನ್ನ ಜಯದ ಸ್ಮರಣಾರ್ಥವಾಗಿ ಮಣ್ಣಿನ ಹಲವಾರು ಘನಾಕೃತಿಗಳನ್ನು ಮಾಡಿಸಿದ್ದನು. ಈ ದಾಖಲೆಗಳು ಹೇಳುವದೇನೆಂದರೆ ಆತನು ಯೆಹೂದದಲ್ಲಿದ್ದ ನಾಲ್ವತ್ತಾರು ಊರುಗಳನ್ನು ನಾಶಗೊಳಿಸಿ ಅರಸನಾದ ಹಿಜ್ಕೀಯನನ್ನು ಯೆರೂಸಲೇಮಿನೊಳಗೆ ಒಂದು "ಪಂಜರದಲ್ಲಿರುವ ಪಕ್ಷಿಯಂತೆ"[22] ಕೂಡಿ ಹಾಕಿದ ಬಳಿಕ, 200,000 ಕ್ಕಿಂತ ಅಧಿಕ ಜನರನ್ನು ಸೆರೆಯಾಳುಗಳಾಗಿ ಕೊಂಡೊಯ್ದನು ಎಂಬುದೆ (ನೋಡಿರಿ 2 ಅರಸು 18:13). ರಾಜಧಾನಿಯು ಕ್ರಿ.ಪೂ. 701ರಲ್ಲಿನ ಮುತ್ತಿಗೆಯ ವೇಳೆ ಪತನಗೊಳ್ಳಲಿಲ್ಲ, ಹೇಗೂ, ಹಿಜ್ಕೀಯನ ಯಥಾರ್ಥವಾದ ಪ್ರಾರ್ಥನೆಯ ಕಾರಣದಿಂದಾಗಿ ಮತ್ತು ಯೆಹೋವನು ಮಧ್ಯಪ್ರವೇಶ ಮಾಡಿದ್ದರಿಂದಾಗಿ ಅದು ಉಳಿದುಕೊಂಡಿತ್ತು (2 ಅರಸು 19:14-35).

ಹೆಚ್ಚುಕಡಿಮೆ ಒಂದು ಶತಮಾನದ ಬಳಿಕ, ಅಶ್ಶೂರವು ಅಂತಿಮವಾಗಿ ಸೋಲಿಸಲ್ಪಟ್ಟು

ನೆಬೂಕದ್ನೇಚ್ಚರನು ಅಧಿಕಾರಕ್ಕೆ ಬಂದ ನಂತರದಲ್ಲಿ, ಯೆಹೂದ್ಯರು ಬಾಬಿಲೋನಿನ ಸೆರೆವಾಸಕ್ಕೆ ಕರೆದೊಯ್ಯಲ್ಪಟ್ಟರು. ಇದು ಮೂರು ಹಂತಗಳಲ್ಲಿ ಸಂಭವಿಸಿತ್ತು. ಮೊದಲನೆಯದ್ದು ಕ್ರಿ.ಪೂ. 605ರಲ್ಲಿ, ಯೆಹೋಯಾಕೀಮನ ಆಳ್ವಿಕೆಯ ವೇಳೆಯಲ್ಲಿ ಸಂಭವಿಸಿತ್ತು, ಆಗ ನೆಬೂಕದ್ನೇಚ್ಚರನ ಸೈನ್ಯವು ದಾನಿಯೇಲ ಮತ್ತು ಯೆರೂಸಲೇಮಿನ ಇನ್ನು ಅನೇಕ ಯುವಕರನ್ನು ಬಾಬಿಲೋನಿಗೆ ಸೆರೆಯಾಗಿ ತೆಗೆದುಕೊಂಡು ಹೋಗಿತ್ತು (2 ಅರಸು 24:1-3; ದಾನಿಯೇಲ 1:1-4). ಎರಡನೆಯ ಗುಂಪೊಂದನ್ನು ಕ್ರಿ.ಪೂ. 597ರಲ್ಲಿ ಕರೆದೊಯ್ಯಲಾಗಿತ್ತು, ಆಗ ಯೆಹೋಯಾಖೀನ ಮತ್ತು ರಾಜನ ಮನೆಯವರು, ಮತ್ತು ಯೆರೂಸಲೇಮಿನ ಹತ್ತು ಸಾವಿರ ಪ್ರಮುಖ ನಾಗರೀಕರನ್ನು ಬಾಬಿಲೋನಿಗೆ ಕರೆದುಕೊಂಡು ಹೋಗಲಾಗಿತ್ತು (2 ಅರಸು 24:8-14). ಅರಸನಾದ ಚಿದ್ಕೀಯನ ಆಳಿಕೆಯಲ್ಲಾದ ಅಂತಿಮ ಬಂಡಾಯವು ಕ್ರಿ.ಪೂ. 586ರಲ್ಲಿ ಅಂತ್ಯಗೊಂಡಿತ್ತು, ಬಾಬಿಲೋನಿನವರು ಯೆರೂಸಲೇಮನ್ನು, ಅದರ ಗೋಡೆಗಳನ್ನು, ಮತ್ತು ಸೊಲೊಮೋನನು ಕಟ್ಟಿಸಿದ್ದ ಮಹಾನ್ ದೇವಾಲಯವನ್ನು ನಾಶಗೊಳಿಸಿದ್ದರು. ವೈರಿಯು ಯೆಹೂದದಲ್ಲಿ ಜನರಿಲ್ಲದಂತೆ ಮಾಡುವದಕ್ಕೆ ಸಾಗಿದನು, ದ್ರಾಕ್ಷೀ-ಪಾಳಕರಾಗಿ ಮತ್ತು ನೇಗಿಲ ಎಳೆಯುವದಕ್ಕಾಗಿ ಅತ್ಯಂಥ ಕಡು ಬಡವರನ್ನು ದೇಶದಲ್ಲಿ ಉಳಿಸಿದ್ದರು. ಅವರು ತಮ್ಮ ಜಯಶಾಲಿಗಳಿಗೆ ಸುಂಕವನ್ನು ಕಟ್ಟಬೇಕಾಗಿತ್ತು (2 ಅರಸು 25:1-12). ಅಷ್ಟೊಂದಯ ಬೃಹತ್ ಸೆರೆಯಾಳುಗಳೊಳಗೆ, ನಮಗೆ ಗೊತ್ತಿರುವ ಪ್ರಕಾರ ಸುಮಾರು 10 ಅಥವಾ 15 ಶೇಕಡಾದಷ್ಟು ಜನರು ಬಾಬಿಲೋನಿನ ಪತನದ ಬಳಿಕ ಮತ್ತು ಸೆರೆಯಾಳುಗಳನ್ನು ತಮ್ಮ ಪೂರ್ವಜರ ನಿವಾಸಗಳಿಗೆ ಹಿಂದಿರುಗುವಂತೆ ಪರ್ಸಿಯದ ಅರಸರು ಅನುಮತಿಸಿದ ನಂತರ ಯೆಹೂದಕ್ಕೆ ಹಿಂದಿರುಗಿ ಬಂದಿದ್ದರು (ನೋಡಿರಿ ಎಜ್ರನು 2:64; 8:1-20; ನೆಹಮೀಯ 2:11, 12).

ಕೋರೆಷನು ಸೆರೆಯಾಳುಗಳು ತಮ್ಮ ಸ್ವದೇಶಕ್ಕೆ ಹಿಂದಿರುಗಬಹುದು ಎಂದು ರಾಜಾಜ್ಞೆಯನ್ನು ಹೊರಡಿಸಿದ ಬಳಿಕ, ದಾವೀದನ ವಂಶದವನು ರಾಜನಾಗಿರುವಂತ ಒಂದು ಪುನಃಸ್ಥಾಪಿಸಲ್ಪಟ್ಟ ದೇಶದ ಕುರಿತಾದ ಮಹಿಮೆಕರವಾದ ಪ್ರವಾದನೆಯ ದರ್ಶನವು ಸಂಭವಿಸಿತ್ತು - ಆದರೆ ದೇವರು ಬಯಸಿದ್ದಷ್ಟರ ಮಟ್ಟಿಗೆ ಆಗಿರಲಿಲ್ಲ, ಯಾಕೆಂದರೆ ಬಹುಪಾಲು ಯೆಹೂದ್ಯರು ಎಂದಿಗೂ ಹಿಂದಿರುಗಿ ಬರಲೇ ಇಲ್ಲ. ದೇವರು ದಾವೀದನ ಸಂಗಡ ಮಾಡಿದ "ಶಾಶ್ವತವಾದ ಒಡಂಬಡಿಕೆ" ಯಲ್ಲಿನ ಒಂದು ಅಂತರ್ಗತವಾದ ಭಾಗವು, ಅದನ್ನು ಯೆಶಾಯನು "ದಾವೀದನಿಗೆ ಖಂಡಿತವಾಗಿ ವಾಗ್ದಾನಮಾಡಿದ ಕೃಪಾವರಗಳು" ಎಂದು ಕರೆದಿದ್ದು (ಯೆಶಾಯ 55:3), ಅದರಲ್ಲಿ ಆತನ ಸಿಂಹಾಸನವನ್ನು ಮತ್ತು ರಾಜ್ಯವನ್ನು ಪುನಃ ಸ್ಥಾಪಿಸುವದು ಸೇರಿತ್ತು ಯಾಕೆಂದರೆ ಆತನು "ಜನಾಂಗಗಳಿಗೆ ಸಾಕ್ಷಿ" ಆಗಿ ಇರಲಿದ್ದನು (ಯೆಶಾಯ 55:4). ದಾವೀದನ ಅತ್ಯಂಥ ವಿಶ್ವಾಸದ ಸೈನಿಕರೊಳಗೆ ಅನೇಕರು ಯೆಹೋವನಿಗೂ ಆತನಿಗೂ ನಂಬಿಗಸ್ತರಾಗಿದ್ದ ಪರದೇಶದವರಾಗಿದ್ದರು: ಅವರೊಳಗೆ ಹಿತ್ತೀಯನಾದ ಊರೀಯನು ಸೇರಿದ್ದನು (2 ಸಮುವೇಲ 11:3-11), ಅರಸನಿಗಿದ್ದ ಫಿಲಿಷ್ಟಿಯ ಆರು ನೂರು ಅಂಗರಕ್ಷಕರು (2 ಸಮುವೇಲ 15:18-22), ಮತ್ತು ಇತರ "ರಣವೀರರು" ಸೇರಿದ್ದರು (2 ಸಮುವೇಲ 23:8-39; 1 ಪೂರ್ವಕಾಲವೃತ್ತಾಂತ 11:10-47). ದಾವೀದನು ತನ್ನ ವೈರಿಗಳನ್ನು ಸೋಲಿಸಿ ನಂತರ ಅವರನ್ನು ಸೇರಿಸಿಕೊಂಡು ಯೆಹೋವನ ಮತ್ತು ದೇವರ ಅಭಿಷಿಕ್ತನಾದ ತನ್ನ ಸೇವೆ ಮಾಡುವಂತೆ ಮಾರ್ಪಡಿಸುವದಕ್ಕೆ ತನ್ನದೇ ಆಗಿರುವ ದಾರಿಯನ್ನು ಹೊಂದಿದ್ದನು. ದೇವರ ಜನರಾಗಿ, ಯೆಹೂದ್ಯರು ಆತನ ಮಾದರಿಯನ್ನು ಅನುಸರಿಸಿರಬೇಕಾಗಿತ್ತು ಮತ್ತು ತಮಗೆ "ಗೊತ್ತಿಲ್ಲದ" ಒಂದು "ಜನಾಂಗವನ್ನು ಕರೆಯ"

ಬೇಕಾಗಿತ್ತು; ಮತ್ತು ಅವರಿಗೆ ಅದೇ ರೀತಿಯಲ್ಲಿಯೇ ಯೆಶಾಯನ ಮೂಲಕವಾಗಿ ಹೀಗೆ ಹೇಳಲಾಗಿತ್ತು, "... ನಿನಗೆ ಗೊತ್ತಿಲ್ಲದ ಜನಾಂಗವನ್ನು ನಿನ್ನ ಅಧೀನಕ್ಕೆ ಕರೆಯುವಿ, ಇಸ್ರಾಯೇಲಿನ ಸದಮಲಸ್ವಾಮಿ ಎನಿಸಿಕೊಳ್ಳುವ ನಿನ್ನ ದೇವರಾದ ಯೆಹೋವನು ನಿನಗೆ ವೈಭವ ಕೊಟ್ಟಿರುವದನ್ನು ನೋಡಿ ನಿನ್ನನ್ನು ತಿಳಿಯದ ಜನಾಂಗವು ನಿನ್ನ ಆಶ್ರಯಕ್ಕೆ ಓಡಿಬರುವದು" (ಯೆಶಾಯ 55:5).

ದೇವರ ಜನರು ಸೆರೆವಾಸದಿಂದ ಹಿಂದಿರುಗಿ ಬರುವಿಕೆಯು ಒಂದು ವಿಮೋಚನಾತ್ಮಕ ಕಾರ್ಯವಾಗಿರಬೇಕಾಗಿದ್ದು ಅದು ಅನ್ಯಜನರಲ್ಲಿ ಯೆಹೂದ್ಯರು ಏಕೈಕ ಸತ್ಯ ದೇವರನ್ನು ಸೇವಿಸುವವರು ಎಂದು ಮನವರಿಕೆ ಮಾಡತಕ್ಕದ್ದಾಗಿತ್ತು, ಹೀಗೆ ಅವರು ಆತನ ಕಡೆಗೆ ತಿರುಗಿಕೊಂಡು ರಕ್ಷಣೆ ಹೊಂದುವದಕ್ಕೆ ಸಾಧ್ಯವಾಗುವದಾಗಿತ್ತು. ದೇವರ "ಸೇವಕ" ನಾಗಿ, ಇಸ್ರಾಯೇಲ್ಯವು "ಯಾಕೋಬಿನ ಕುಲಗಳನ್ನು ಉನ್ನತಪಡಿಸುವದೂ ಇಸ್ರಾಯೇಲಿನಲ್ಲಿ ರಕ್ಷಿತರಾದವರನ್ನು ತಿರಿಗಿ ಬರಮಾಡುವದೂ" ಮಾಡಬೇಕಿತ್ತು; ಅದರ ಜೊತೆಗೆ, ಯೆಹೋವನು ಹೀಗೆ ಹೇಳಿದನು, "ನನ್ನ ರಕ್ಷಣೆಯು ಲೋಕದ ಕಟ್ಟಕಡೆಯವರೆಗೆ ವ್ಯಾಪಿಸುವಂತೆ ನಿನ್ನನ್ನು ಅನ್ಯಜನಾಂಗಗಳಿಗೂ ಬೆಳಕನ್ನಾಗಿ ದಯಪಾಲಿಸುವೆನು" (ಯೆಶಾಯ 49:6). ಅನ್ಯಜನರು ಒಡಂಬಡಿಕೆಯ ಜನಾಂಗದ ಭಾಗವಾಗಿ ಅಂಗೀಕರಿಸಿಕೊಳ್ಳಲ್ಪಡುವುದು ಖಂಡಿತವಾಗಿಯೂ ಅವರು ಸೆರೆವಾಸದಿಂದ ಹಿಂದಿರುಗಿ ಬರುವದರಲ್ಲಿ ದೇವರಿಗಿದ್ದ ಉದ್ದೇಶವಾಗಿತ್ತು.

*ಮುಕ್ತಾಯ.* ಹೊಸ ಒಡಂಬಡಿಕೆಯಲ್ಲಿ ಯಾವದೇ ಭೂಲೋಕದ ದೇಶವನ್ನು ಕೊಡುವ ಬಗ್ಗೆ ವಾಗ್ದಾನವು ಮಾಡಲ್ಪಟ್ಟಿಲ್ಲ, ಮತ್ತು ಕ್ರಿಸ್ತನ ಎರಡನೆಯ ಬರೋಣದ ವೇಳೆ ಯೆಹೂದ್ಯರು ಫಿಲಿಷ್ಟಿಯ ದೇಶಕ್ಕೆ ಹಿಂದಿರುಗಿ ಹೋಗುವದರ ಕುರಿತು ಬೈಬಲ್ ಏನನ್ನೂ ಹೇಳುವದಿಲ್ಲ. ಕೆಲವರು ನಂಬುವ ಪ್ರಕಾರವಾಗಿ, ಅವರು ಅದನ್ನು ಬಾಧ್ಯವನ್ನಾಗಿ ಪಡೆದುಕೊಳ್ಳುವರು, ದೇವಾಲಯವನ್ನು ಮರುನಿರ್ಮಾಣ ಮಾಡುವರು, ಅಥವಾ ಪ್ರಾಣಿ ಯಜ್ಞಗಳ ಆಚರಣೆಯನ್ನೊಳಗೊಂಡಂತೆ ಮೋಶೆಯ ಧರ್ಮಶಾಸ್ತ್ರವನ್ನು ಪುನಃ ಜಾರಿಗೆ ತರುವರು ಎಂಬುದರ ಕುರಿತಾಗಿ ಯಾವದೇ ವಾಗ್ದಾನವು ನಮಗೆ ಕಾಣುವದಕ್ಕೆ ಸಿಕ್ಕುವದಿಲ್ಲ. ಶಾಸ್ತ್ರಗಳನ್ನು ಈ ವಿಧವಾಗಿ ಅರ್ಥನಿರೂಪಣೆ ಮಾಡುವವರು ಈ ವಾಕ್ಯಭಾಗಗಳೊಳಗೆ ತಮಗೆ ಅಪರಿಚಿತವಾಗಿರುವಂಥ ವಿಚಾರಗಳನ್ನು ಹುಡುಕಿ ಓದುವವರಾಗಿದ್ದು ಪ್ರವಾದಿಯು ಯಾವ ಐತಿಹಾಸಿಕ ಸನ್ನಿವೇಶದಲ್ಲಿ ಅವುಗಳನ್ನು ಮಾತಾಡಿದನೋ ಅದನ್ನು ನಿರ್ಲಕ್ಷ್ಯಿಸುವವರಾಗಿದ್ದಾರೆ. ಅವರು ಬಣ್ಣಿಸುವ ಘಟನೆಗಳು ದೈವಶಾಸ್ತ್ರೀಕ ಗಡಿಯಾರವನ್ನು ಹಿಂದಕ್ಕೆ ತಿರುಗಿಸಿ ಹಳೆಯ ಒಡಂಬಡಿಕೆಯ ನೆರಳಿನೊಳಗೆ ಕೊಂಡೊಯ್ಯುವವವು. ಬದಲಾಗಿ, ನಾವು ಹೊಸ ಮತ್ತು "ಶ್ರೇಷ್ಠವಾದ ಒಡಂಬಡಿಕೆ" (ಇಬ್ರಿಯ 7:22) ವಾಸ್ತವಿಕತೆಯನ್ನು ಅರ್ಥಮಾಡಿಕೊಳ್ಳತಕ್ಕದ್ದು ಮತ್ತು ಈಗ ನಮಗೆ ಯೇಸು ಕ್ರಿಸ್ತನ ಮೂಲಕವಾಗಿ ದೊರೆತಿರುವ ವಾಗ್ದಾನಗಳನ್ನು ಸ್ವೀಕರಿಸಿಕೊಳ್ಳಬೇಕು (ಇಬ್ರಿಯ 7:19–8:13).

ದೇವರು ಅಬ್ರಹಾಮನ ಶಾರೀರಿಕ ವಂಶಸ್ಥರಿಗೆ ಕಾನಾನ್ ದೇಶವನ್ನು ಒಂದು ಶರತ್ತುರಹಿತ ಹಾಗೂ ರದ್ದುಗೊಳಿಸಲಾಗದ ವರವಾಗಿ ಕೊಡುವೆನೆಂಬ ವಾಗ್ದಾನವನ್ನು ಮಾಡಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಇಸ್ರಾಯೇಲ್ಯರಿಗೆ ಅದರ ಹಕ್ಕು ಪತ್ರವು ಎಂದಿಗೂ ದೊರಕಲೇ ಇಲ್ಲ; ಅವರು ಯಾವಾಗಲೂ ದೇವರ ದೇಶದಲ್ಲಿ ನೆಲೆಸಿರುವ "ಪರದೇಶಿಗಳು" ಮತ್ತು "ಪ್ರವಾಸಿಗರು" ಆಗಿ ಇದ್ದರು (ಯಾಜಕಕಾಂಡ 25:23; 1 ಪೂರ್ವಕಾಲವೃತ್ತಾಂತ 29:15). ಯೆಹೂದ್ಯರ ನಾಯಕರು ದೇವರಿಗೆ ಮಾಡಿದ ಅತ್ಯಂಥ ದೊಡ್ಡ ಮುಖಭಂಗವೆಂದರೆ ಆತನ ಕುಮಾರನನ್ನು ತಿರಸ್ಕರಿಸಿದ್ದು ಮತ್ತು ಶಿಲುಬೆಗೇರಿಸಿದ್ದು, ಆತನು ಅವರನ್ನು - ಮತ್ತು ಸರ್ವ

ಮಾನವರನ್ನು - ಅವರ ಪಾಪಗಳಿಂದಾಗುವ ನಿತ್ಯವಾದ ಪರಿಣಾಮಗಳಿಂದ ರಕ್ಷಿಸುವದಕ್ಕೋಸ್ಕರ ಬಂದಿದ್ದನಷ್ಟೆ. ಗರ್ವ ಮತ್ತು ದುರಂಹಕಾರಗಳು ತಾವು "ದೇವರರಾಜ್ಯವನ್ನು" ಪ್ರವೇಶಿಸಬೇಕಾದರೆ ತಮಗೆ "ನೀರು ಮತ್ತು ಆತ್ಮನಿಂದ" ಒಂದು ಅಮೂಲಾಗ್ರವಾದ ಹೊಸ ಜನನದ ಅಗತ್ಯವಿದೆ ಎಂಬದನ್ನು ಅರಿತುಕೊಳ್ಳದಂತೆ ಮಾಡಿದ್ದವು (ಯೋಹಾನ 3:3-5; ನೋಡಿರಿ ಮಾರ್ಕ 1:4; ಲೂಕ 3:3).

ಬಹಳಷ್ಟರ ಮಟ್ಟಿಗೆ, ದೇವರ ರಾಜ್ಯದ ಕುರಿತಾಗಿ ಯೆಹೂದ್ಯರ ಅಭಿಪ್ರಾಯವು ತಾತ್ಕಾಲಿಕ, ಸಂಕುಚಿತ, ಮತ್ತು ರಾಷ್ಟ್ರೀಯತೆಯಿಂದ ಕೂಡಿದ್ದಾಗಿತ್ತು. ಅಧಿಕಾರದಲ್ಲಿ ಇದ್ದವರು ಯೇಸುವನ್ನು ಮೋಶೆಯ ಧರ್ಮಶಾಸ್ತ್ರದ ವಿರುದ್ಧ ಬಂಡಾಯವೆದ್ದವನೆಂದೂ ದೇವಕುಮಾರನೆಂದು ಹೇಳಿಕೊಳ್ಳುವ ದೇವದೂಷಕನೆಂದೂ ಕಂಡರು. ಅವರು ಆತನನ್ನು ಒಬ್ಬ ಅಪಾಯಕಾರಿ ಸುಳ್ಳು ಮೆಸ್ಸೀಯನು, ದಾವೀದನ ಹೊಸ ರಾಜ್ಯದ ಕುರಿತು ಜನರು ಇಟ್ಟುಕೊಂಡಿರುವ ನಿರೀಕ್ಷೆಗಳನ್ನು ಮತ್ತು ಕನಸುಗಳನ್ನು ತೃಪ್ತಿಗೊಳಿಸುವಂತೆ ತೋರಿಸಿಕೊಂಡು ಅವರನ್ನು ದಾರಿ ತಪ್ಪಿಸಬಲ್ಲವನು ಎಂದು ಪರಿಗಣಿಸಿದರು. ಖಂಡಿತವಾಗಿಯೂ, ಅಂಥ ಒಂದು ಕಾರ್ಯಸೂಚಿಯಿಂದ ತಮ್ಮ ಮೇಲೆ ರೋಮನ್ನರ ರೌದ್ರವು ಉಂಟಾಗುವುದು ಎಂದು ಯೆಹೂದಿ ನಾಯಕರಿಗೆ ಗೊತ್ತಿತ್ತು; ಆಗ ಅವರು ತಮ್ಮ ಪ್ರಾಣಗಳನ್ನಲ್ಲದಿದ್ದರೂ, ತಮ್ಮ ಅಧಿಕಾರದ ಸ್ಥಾನಗಳನ್ನಂತೂ ಕಳೆದುಕೊಳ್ಳುವರು ಎಂದು ಅರಿತಿದ್ದರು (ಯೋಹಾನ 11:47-53). ಅವರು ಹೃದಯವನ್ನು ಕಠಿಣ ಮಾಡಿಕೊಂಡವರಾಗಿ, ದೇವಕುಮಾರನನ್ನು ತಿರಸ್ಕರಿಸುವ ರಾಜಕೀಯವಾಗಿ ಸಮಯೋಚಿತವಾದ ದಾರಿಯನ್ನು ಆರಿಸಿಕೊಂಡರು, ಮತ್ತು ಅವರು ಯೇಸುವನ್ನು ಶಿಲುಬೆಗೇರಿಸಿದರು.

ಹಾಗಿದ್ದರೂ, ಪೌಲನ ಪ್ರಕಾರವಾಗಿ, ಇಸ್ರಾಯೇಲ್ಯರಿಗೆ ಈಗಲೂ ಒಂದು ನಿರೀಕ್ಷೆಯಿತ್ತು. ಅಪೊಸ್ತಲನು ಅವರನ್ನು ದೇವರ ಒಲೀವ್ ಮರದಲ್ಲಿನ (ಆತನ ರಾಜ್ಯದ ಜನರ) ಸ್ವಾಭಾವಿಕವಾದ ಕೊಂಬೆಗಳೆಂದು, ಅವರು ತಮ್ಮ ಅಪನಂಬಿಕೆಯ ಕಾರಣದಿಂದ ಕಡಿದು ಹಾಕಲ್ಪಟ್ಟಿರುತ್ತಾರೆಂಬುದಾಗಿ ಮಾತಾಡಿದನು. ಆತನು ಅನ್ಯಜನರನ್ನು ನಂಬಿಕೆಯ ಮರದೊಳಗೆ ಕಸಿಕಟ್ಟಲ್ಪಟ್ಟಿರುತ್ತಾರೆ ಎಂದು ಬಣ್ಣಿಸಿದನು (ರೋಮಾ 11:17-20). ಆದದರಿಂದ, ದೇವರ "ಕನಿಕರ" ದ ಪ್ರಕಾರ, ಯೆಹೂದ್ಯರು ವಿಧೇಯತೆಯುಳ್ಳ ನಂಬಿಕೆಗೆ ಬರುವ*ದಾದರೆ*, ಅವರು ಸಹ ದೇವರ ಮರದಲ್ಲಿ ಪುನಃ ಕಸಿಕಟ್ಟಲ್ಪ*ಡುವರು* ಮತ್ತು ಆ ಕಾರಣದಿಂದ ರಕ್ಷಣೆ ಹೊಂದುವರು (ರೋಮಾ 11:22-27).

ಪೌಲನು ಇಲ್ಲಿ ಅಬ್ರಹಾಮನಿಗೆ ಒಂದು ಕಾಲದಲ್ಲಿ ವಾಗ್ದಾನ ಮಾಡಲ್ಪಟ್ಟ ದೇಶದೊಳಗೆ ರಾಷ್ಟ್ರೀಯವಾದಿ ಯೆಹೂದ್ಯ ರಾಜ್ಯವು ಸ್ಥಾಪಿಸಲ್ಪಡುವ ರಾಜಕೀಯ ರಕ್ಷಣೆ ಕುರಿತಾಗಿ ಚರ್ಚಿಸುತ್ತಿಲ್ಲ. ಆತನಾಗಲಿ ಅಥವಾ ಹೊಸ ಒಡಂಬಡಿಕೆಯ ಬೇರೆ ಯಾವ ಲೇಖಕನಾಗಲಿ ಈ ವಿಚಾರಗಳ ಬಗ್ಗೆ ಚರ್ಚಿಸಲಿಲ್ಲ, ಮತ್ತು ಇಂಥ ಯೋಚನೆಗಳನ್ನು ಉತ್ತೇಜಿಸುವ ಸಿದ್ಧಾಂತಗಳು ಬೈಬಲಿಗೆ ವಿರುದ್ಧವಾದವುಗಳು.

---

ಅಡಿಟಿಪ್ಪಣಿಗಳು

[1]J. Jeremias, "נָבִיא," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:703.
[2]ದೇವರು ಅಬ್ರಹಾಮನನ್ನು ಮೊದಲ ಬಾರಿಗೆ ಊರ್ ಪಟ್ಟಣದಲ್ಲಿ ಕರೆದ ವೇಳೆ ಅಬ್ರಹಾಮನ ವಯಸ್ಸು ಸುಮಾರು ಮೂವತ್ತೈದು ವರ್ಷವಾಗಿದ್ದಿರಬಹುದು. 12:4 ಮತ್ತು 16:3ರ ಪ್ರಕಾರವಾಗಿ, ಈ ಹೊತ್ತಿಗೆ ಆತನು ಎಂಭತ್ತೈದು ವಯಸ್ಸಿನ

ಸಮೀಪದಲ್ಲಿರಬಹುದಾಗಿದೆ. ಆದದರಿಂದ, ಹೆಚ್ಚುಕಡಿಮೆ ಐವತ್ತು ವರ್ಷಗಳು ಗತಿಸಿರಬಹುದು, ಆತನಿಗೆ ಆತನ ದೇಶ ಮತ್ತು ಐಶ್ವರ್ಯಗಳನ್ನು ಬಾಧ್ಯವಾಗಿ ಹೊಂದಿಕೊಳ್ಳಲು ಇನ್ನೂ ಒಬ್ಬ ಮಗನು ಹುಟ್ಟಿರಲಿಲ್ಲ. [3]ಈ ದಾಸನನ್ನು ಹಾರಾನಿನಿಂದ ಕಾನಾನಿಗೆ ಪ್ರಯಾಣಿಸುವ ದಾರಿಯಲ್ಲಿ ಅಬ್ರಹಾಮನು ಸಂಪಾದಿಸಿಕೊಂಡಿರಬಹುದಾಗಿದೆ, ಆ ಪ್ರಯಾಣವು ಬಹುಶಃ ಆತನನ್ನು ದಮಸ್ಕದ ಮೂಲಕವಾಗಿ ಸಾಗುವಂತೆ ಮಾಡಿರಬಹುದಾಗಿದೆ (12:4, 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). [4]NIVಯಲ್ಲಿ "ನನ್ನ ಸ್ವತ್ತನ್ನು ಬಾಧ್ಯವಾಗಿ ಹೊಂದುವವನು" ಎಂದಿರುತ್ತದೆ. [5]Victor P. Hamilton, "מֶשֶׁק," in *TWOT*, 1:535. [6]Alfred J. Hoerth, *Archaeology and the Old Testament* (Grand Rapids, Mich.: Baker Books, 1998), 102–3. [7]Alfred Jepsen, "אָמַן," in *Theological Dictionary of the Old Testament*, trans. John T. Willis, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1974), 1:308. [8]Deryck C. T. Sheriffs, "Faith," in *Dictionary of the Old Testament: Pentateuch*, ed. T. Desmond Alexander and David W. Baker (Downers Grove, Ill.: Inter-Varsity Press, 2003), 281–82. [9]NASBಯ ಕೆಲವೊಂದು ಮುದ್ರಣಗಳಲ್ಲಿ *ಯಾಡಾ* ಎಂಬುದಕ್ಕೆ ಕೀರ್ತನೆ 1:6ರ ಕುರಿತಾದ ಬದಿಯ ಟಿಪ್ಪಣಿಗಳಲ್ಲಿ "ಮೆಚ್ಚುವನು" ಎಂದಿರುತ್ತದೆ. ಆಮೋಸ 3:20ರಲ್ಲಿ, ಆ ಪದವು "ಆರಿಸಿಕೊಳ್ಳಲ್ಪಟ್ಟವನು" ಎಂದು ಅನುವಾದಿಸಲ್ಪಟ್ಟಿರುತ್ತದೆ. ವಾಸ್ತವಿಕದಲ್ಲಿ, *ಯಾಡಾ* ಎಂದರೆ ಒಂದು ಆಪ್ತವಾದ ರೀತಿಯಲ್ಲಿ, ಶಾರೀರಿಕವಾಗಿ ಆಗಿರಬಹುದು (4:1) ಅಥವಾ ಆತ್ಮೀಕವಾಗಿ ಆಗಿರಬಹುದು (ಹೋಶೇಯ 2:20) "ತಿಳಿದುಕೋ" ಎಂದರ್ಥವಾಗಿರುತ್ತದೆ. [10]Kenneth A. Mathews, *Genesis 11:27–50:26*, The New American Commentary, vol. 1B (Nashville: Broadman & Holman Publishers, 2005), 170.

[11]Erica Reiner, trans., "Treaty Between Ashurnirari V of Assyria and Mati'ilu of Arpad," in *Ancient Near Eastern Texts Relating to the Old Testament*, 3d ed., ed. James B. Pritchard (Princeton, N.J.: Princeton University Press, 1969), 532. [12]Franz Rosenthal, trans., "The Treaty Between *KTK* and Arpad," in *Ancient Near Eastern Texts*, 660. [13]ಮೆಸಪೊಟಾಮ್ಯದಲ್ಲಿದ್ದ ಪ್ರಾಚೀನ ಜನರನು ಸಿರಿಯ, ಲೆಬನೊನ, ಮತ್ತು ಫಿಲಿಷ್ಟಿಯ (ಕಾನಾನ್) ಇವುಗಳಲ್ಲಿ ವಾಸಿಸುತ್ತಿದ್ದ ಜನರನ್ನು *ಅಮುರ್ರು* (ಅಮೋರಿಯರು, "ಪಾಶ್ಚಾತ್ಯರು") ಎಂದು ಕರೆಯುತ್ತಿದ್ದರು, ಮತ್ತು ಈ ಪದದ ಜಾತಿವೈಶಿಷ್ಟ್ಯ ಬಳಕೆಯು ಹಳೆಯ ಒಡಂಬಡಿಕೆಯಲ್ಲಿ ಹಲವಾರು ಸ್ಥಳಗಳಲ್ಲಿ ಉಳಿಸಿಕೊಳ್ಳಲ್ಪಟ್ಟಿದೆ. (A. H. Sayce and J. A. Soggin, "Amorites," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1979], 1:113–14.) [14]ಅನಂತರ, ಸೊದೋಮ ಮತ್ತು ಗೊಮೋರಗಳ ವಿರುದ್ಧ ಇಟ್ಟ ಮೊರೆಗಳು, ಆ ಪ್ರಾಂತ್ಯದಲ್ಲಿ ವಾಸಿಸುತ್ತಿದ್ದ ಅನ್ಯಧರ್ಮಿಯ ಜನರು ಸಹ ಇಟ್ಟಂಥ ಮೊರೆಗಳು ಎಷ್ಟೊಂದು ದೊಡ್ಡದಾಗಿದ್ದವೆಂದರೆ, ಯೆಹೋವನಿಗೆ ಇನ್ನು ಮೇಲೆ ಸಹಿಸಿಕೊಳ್ಳಲಾಗಲಿಲ್ಲ ಮತ್ತು ಆ ಪಟ್ಟಣಗಳ ವಿರುದ್ಧ ನ್ಯಾಯತೀರ್ಪನ್ನು ಬರಮಾಡಲು ದೃಢನಿರ್ಧಾರ ಮಾಡಿದನು (18:20, 21). ಹಾಗಿದ್ದಾಗ್ಯೂ, ದೇವರು ಅಬ್ರಹಾಮನಿಗೆ ಸೊದೋಮಿನಲ್ಲಿ ಹತ್ತು ಮಂದಿ ನೀತಿವಂತರು ಇದ್ದರು ಸಹ ಆ ಪಟ್ಟಣವನ್ನು ಉಳಿಸುವನೆಂದು ವಾಗ್ದಾನ ಮಾಡಿದನು (18:32). [15]John T. Willis, *Genesis*, The Living Word Commentary (Austin, Tex.: Sweet Publishing Co., 1979), 239. [16]R. K. Harrison, "Brook of Egypt," in *The International Standard Bible Encyclopedia*, 1:549. [17]ಅರಣ್ಯಕಾಂಡ 34:5 ಮತ್ತು ಯೆಹೋಶುವ 15:4ರಲ್ಲಿ, "ಐಗುಪ್ತದ ಹಳ್ಳ [נַחַל, *ನಾಚಾಲ್*]" ಎಂಬುದು ಮತ್ತು ಬಹುಶಃ ಆದಿಕಾಂಡ 15:18ರಲ್ಲಿರುವ "ಐಗುಪ್ತದ ನದಿ [נָהָר, *ನಾಹಾರ*]" ಒಂದೇ ಆಗಿರಬಹುದು, ಆಗಾಗ್ಯೂ ಈ ವಾಕ್ಯಭಾಗಗಳಲ್ಲಿ ಬೇರೆ ಬೇರೆ ಇಬ್ರಿಯ ಪದಗಳು ಬಳಸಲ್ಪಟ್ಟಿವೆ. [18]Mathews, 177. [19]ಅಬ್ರಹಾಮನು "ಖಾರಾನ್ ಪಟ್ಟಣವನ್ನು ಬಿಟ್ಟು ಹೊರಟಾಗ ಎಪ್ಪತ್ತೈದು ವರುಷದವನಾಗಿದ್ದನು" (12:4) ಮತ್ತು 16:3ರ ಹೊತ್ತಿಗೆ ಕಾನಾನಿನೊಳಗೆ ಹತ್ತು ವರ್ಷಗಳಿಂದ ನೆಲೆಸಿದ್ದನು. ಈ ದರ್ಶನವು ಸಂಭವಿಸಿದ ವೇಳೆ ಆತನು ಬಹುಶಃ ಎಂಭತ್ತರ ಆಸುಪಾಸಿನಲ್ಲಿದ್ದಿರಬಹುದು. 16:16ರಲ್ಲಿ ಹಾಗರಳು ಇಸ್ಮಾಯೇಲನಿಗೆ ಜನ್ಮ ನೀಡಿದ ವೇಳೆ ಅವನಿಗೆ ಎಂಭತ್ತಾರು ವರ್ಷಗಳಾಗಿದ್ದವು. [20]ನೋಡಿರಿ ಮತ್ತಾಯ 1:20; 10:31; 28:5; ಲೂಕ 1:13, 30; 2:10; 5:10; 8:50; 12:7, 32; ಅಪೊಸ್ತಲರ ಕೃತ್ಯಗಳು 27:24; ಪ್ರಕಟನೆ 1:17.

[21]ಈ ಅಭಿಪ್ರಾಯವನ್ನು ಪ್ರತಿಪಾದಿಸುವ ಶಾಸ್ತ್ರೀಯ ಗ್ರಂಥಗಳೆಂದರೆ ಇವುಗಳೇ: Walter C. Kaiser, Jr., *Toward Rediscovering the Old Testament* (Grand Rapids, Mich.: Zondervan Publishing House, 1987), 150–55; Ronald B. Allen, "The Land of Israel," in *Israel: The Land and the People*, ed. H. Wayne House (Grand Rapids, Mich.: Kregel Publications, 1998), 24–28; and Craig A. Blaising and Darrell L. Bock, *Progressive Dispensationalism* (Wheaton, Ill.: Victor Books, 1993), 132–35. [22]A. Leo Oppenheim, trans., "The Annals of Sennacherib," in *Ancient Near Eastern Texts*, 288.